ಕರ್ನಾಟಕ ಸರ್ಕಾರ

# ನುಡಿ ಕನ್ನಡ

## ತೃತೀಯ ಭಾಷಾ ಕನ್ನಡ ಪಠ್ಯಪುಸ್ತಕ

(ಪರಿಷ್ಕೃತ)

೭

## ಏಳನೆಯ ತರಗತಿ

©KTBS Not to be republished

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
೧೦೦ ಅಡಿ ವರ್ತುಲ ರಸ್ತೆ, ಬನಶಂಕರಿ ೩ನೆಯ ಹಂತ
ಬೆಂಗಳೂರು–೫೬೦೦೮೫

# ಪಠ್ಯಪುಸ್ತಕ ರಚನಾ ಸಮಿತಿ

**ಅಧ್ಯಕ್ಷರು**

**ಡಾ. ದಯಾವತಿ ಎಂ.,** ಪ್ರಾಂಶುಪಾಲರು, ಸ.ಪ.ಪೂ.ಕಾಲೇಜು ಲಿಂಗದಹಳ್ಳಿ, ತರೀಕೆರೆ ತಾ॥ ಚಿಕ್ಕಮಗಳೂರು ಜಿಲ್ಲೆ.

**ಸದಸ್ಯರು**

**ಡಾ. ಶಿವರಾಜ ಕುಲಕರ್ಣಿ,** ಪ್ರಾಚಾರ್ಯರು, ಸ.ಪ.ಪೂ ಕಾಲೇಜು, ಚಂದಾಪುರ, ಚಿಂಚೋಳಿತ ತಾ. ಕಲಬುರಗಿ ಜಿಲ್ಲೆ.

**ಇಂದ್ರಕುಮಾರ್ ಎಚ್.ಬಿ.,** ಸಹ ಶಿಕ್ಷಕ, ಸರ್ಕಾರಿ ಹಿರಿಯ ಪ್ರಾರ್ಥಮಿಕ ಶಾಲೆ ಕುರ್ಕಿ, ದಾವಣಗೆರೆ ತಾಲ್ಲೂಕು.

**ರಾಜೇಶ್ವರಿ ಎಂ.,** ಸಹ ಶಿಕ್ಷಕಿ ಸರ್ಕಾರಿ ಪ್ರೌಢಶಾಲೆ, ಶಿವನಸಂದ್ರ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ.

**ಹರೀಶ ಬಿ.ಎಂ.,** ಸಹ ಶಿಕ್ಷಕ, ಸರ್ದಾರ್ ವಲ್ಲಭಭಾಯಿ ಪಟೇಲ್ ಪ್ರೌಢಶಾಲೆ, ಸರ್ಜಾಪುರ, ಆನೇಕಲ್ ತಾಲ್ಲೂಕು.

**ಜಂಗಿ ಜಿ.ಎಂ.,** ಕಲಾಕಾರರು, ಡಿ.ಎಸ್.ಇ.ಆರ್.ಟಿ., ಬನಶಂಕರಿ ೩ನೇ ಹಂತ, ಬೆಂಗಳೂರು – ೮೫

**ಪರಿಶೀಲಕರು**

**ಪ್ರಕಾಶ್ ಬೂಸನೂರ್,** ನಿವೃತ್ತ ಶಿಕ್ಷಣಾಧಿಕಾರಿಗಳು, ನಂ. ೫೫, ನಿಜಲಿಂಗಪ್ಪ ಲೇಔಟ್, ದಾವಣಗೆರೆ.

**ಸಂಪಾದಕ ಮಂಡಳಿ ಸದಸ್ಯರು**

**ಪ್ರೊ. ಚಂದ್ರಶೇಖರ ಪಾಟೀಲ್,** ಸಾಹಿತಿಗಳು, ಸಂಕ್ರಮಣ ಪ್ರಕಾಶನ, ಎಲಚೇನಹಳ್ಳಿ, ಜೆ.ಪಿ.ನಗರ, ಬೆಂಗಳೂರು–೭೮

**ಡಾ. ಕೆ. ಮರುಳಸಿದ್ದಪ್ಪ,** ಸಾಹಿತಿಗಳು, ನಂ ೧೩೭, ೧೨ನೇ ಕ್ರಾಸ್, ಜೆ.ಪಿ. ನಗರ, ಬೆಂಗಳೂರು–೭೮

**ಪ್ರೊ. ಸಾ.ಶಿ. ಮರುಳಯ್ಯ,** ಸಾಹಿತಿಗಳು, ರಾಗಿಣಿ, ಹಂಪಿನಗರ, ಬೆಂಗಳೂರು.

**ಪ್ರೊ. ಅ.ರಾ.ಮಿತ್ರ,** ಸಾಹಿತಿಗಳು, ಕೆ.ಎಚ್.ಬಿ. ಕಾಲೋನಿ, ಯಲಹಂಕ, ಬೆಂಗಳೂರು.

**ಡಾ. ವಿಷ್ಣು ಎಂ. ಶಿಂದೆ,** ಸಹಾಯಕ ಪ್ರಾಧ್ಯಾಪಕರು, ಶಿಕ್ಷಣ ವಿಭಾಗ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ, ಜ್ಞಾನಶಕ್ತಿ ಆವರಣ, ತೊರವಿ, ವಿಜಯಪುರ – ೫೮೬ ೧೦೮.

**ಮುಖ್ಯ ಸಂಯೋಜಕರು:**

**ಪ್ರೊ. ಜಿ.ಎಸ್.ಮುಡಂಬಡಿತ್ತಾಯ,** ಪಠ್ಯಕ್ರಮ ಪರಿಷ್ಕರಣೆ ಮತ್ತು ಪಠ್ಯ ಪುಸ್ತಕ ರಚನೆ, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು – ೫೬೦ ೦೮೫

**ಸಲಹೆ ಮತ್ತು ಮಾರ್ಗದರ್ಶನ:**

**ಶ್ರೀ ನಾಗೇಂದ್ರ ಕುಮಾರ್,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು – ೮೫.

**ಶ್ರೀಮತಿ ಸಿ. ನಾಗಮಣಿ,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು – ೮೫

**ಕಾರ್ಯಕ್ರಮ ಸಂಯೋಜಕರು:**

**ಶ್ರೀ ಪಾಂಡುರಂಗ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು – ೮೫

©KTBS Not to be republished

# ಮುನ್ನುಡಿ

೨೦೦೫ನೆಯ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ಮೇಲೆ ರಚಿತವಾದ ಕರ್ನಾಟಕ ರಾಜ್ಯ ಪಠ್ಯವಸ್ತುವಿನ ಆಧಾರದ ಮೇಲೆ ಕರ್ನಾಟಕ ಪಠ್ಯಪುಸ್ತಕ ಸಂಘವು ೨೦೧೦ ನೆಯ ಸಾಲಿನಿಂದ ಒಂದನೆಯ ತರಗತಿಯಿಂದ ಹತ್ತನೆಯ ತರಗತಿವರೆಗಿನ ಪಠ್ಯಪುಸ್ತಕಗಳ ರಚನಾ ಕಾರ್ಯದಲ್ಲಿ ತೊಡಗಿದೆ. ಒಟ್ಟು ೧೨ ಭಾಷೆಗಳಲ್ಲಿ ಭಾಷಾ ಪಠ್ಯಪುಸ್ತಕಗಳನ್ನು ಹಾಗೂ ಕೋರ್ ವಿಷಯಗಳನ್ನು ೭ ಮಾಧ್ಯಮಗಳಲ್ಲಿ ರಚನೆ ಮಾಡಲಾಗುತ್ತಿದೆ. ೧ ರಿಂದ ೫ ನೆಯ ತರಗತಿಯವರೆಗೆ ಪರಿಸರ ವಿಜ್ಞಾನ, ಗಣಿತ ಮತ್ತು ೬ ರಿಂದ ೧೦ ನೆಯ ತರಗತಿಯವರೆಗೆ ಕೋರ್ ವಿಷಯಗಳಾದ ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳಿರುತ್ತವೆ.

**೨೦೦೫ರ ರಾಷ್ಟ್ರೀಯ ಪಠ್ಯಕ್ರಮವು ಈ ಕೆಳಗಿನ ವೈಶಿಷ್ಟ್ಯಗಳನ್ನು ಹೊಂದಿದೆ.**

- ಕಲಿಕೆಯನ್ನು ಜೀವನದ ಆವಶ್ಯಕತೆಗಳೊಂದಿಗೆ ಜೋಡಿಸುವುದು
- ಕಂಠಪಾಠ ವಿಧಾನದಿಂದ ಕಲಿಕೆಯನ್ನು ಮುಕ್ತಗೊಳಿಸುವುದು
- ಪಠ್ಯಪುಸ್ತಕಗಳ ಹೊರತಾಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು
- ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸುವುದು
- ಭಾರತದ ಪ್ರಜಾಸತ್ತಾತ್ಮಕ ನೀತಿಯನ್ವಯ ಮಕ್ಕಳ ಆವಶ್ಯಕತೆಗಳಿಗೆ ತಕ್ಕಂತೆ ಸ್ಪಂದಿಸುವುದು
- ಶಿಕ್ಷಣವನ್ನು ಇಂದಿನ ಹಾಗೂ ಭವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡುವುದು
- ವಿಷಯಗಳ ಮೇರೆಗಳನ್ನು ಮೀರಿ ಅವುಗಳಿಗೆ ಸಮಗ್ರದೃಷ್ಟಿಯ ಬೋಧನೆಯನ್ನು ಅಳವಡಿಸುವುದು
- ಶಾಲೆಯ ಹೊರಗಿನ ಬದುಕಿಗೆ ಜ್ಞಾನವನ್ನು ಸಂಯೋಜಿಸುವುದು.
- ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿ ಪಡಿಸುವುದು.

ನೂತನ ಪಠ್ಯಪುಸ್ತಕಗಳಲ್ಲಿ ನೂತನ ವಿಧಾನಗಳಾದ ಅಂತರ್ಗತ ವಿಧಾನ (Integrated Approach), ರಚನಾತ್ಮಕ ವಿಧಾನ (Constructive Approach) ಹಾಗೂ ಸುರುಳಿಯಾಕಾರದ ವಿಧಾನ (Spiral Approach) ಗಳನ್ನು ಅಳವಡಿಸಲಾಗಿದೆ.

ಪಠ್ಯಪುಸ್ತಕಗಳ ವಿಷಯ ಹಾಗೂ ಅಭ್ಯಾಸಗಳು ವಿದ್ಯಾರ್ಥಿಗಳನ್ನು ಯೋಚನೆ ಮಾಡುವಂತೆ ಮಾಡಿ, ಚಟುವಟಿಕೆಗಳ ಮೂಲಕ ಜ್ಞಾನ ಹಾಗೂ ಸಾಮರ್ಥ್ಯಗಳನ್ನು ಗಳಿಸಿಕೊಳ್ಳುವಂತೆ ಪ್ರಯತ್ನ ಮಾಡಲಾಗಿದೆ. ಪಠ್ಯಪುಸ್ತಕಗಳೊಂದಿಗೆ ಅತ್ಯಂತ ಆವಶ್ಯಕ ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಬಳಸಲಾಗಿದೆ. ಈ ನೂತನ ಪಠ್ಯಪುಸ್ತಕಗಳು ಪರೀಕ್ಷಾ ದೃಷ್ಟಿಯಿಂದ ರಚಿತವಾಗಿಲ್ಲ. ಬದಲಾಗಿ ಅವುಗಳು ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ. ತನ್ಮೂಲಕ ಅವರನ್ನು ಸ್ವತಂತ್ರ ಭಾರತದ ಸ್ವಸ್ಥಸಮಾಜದ ಉತ್ತಮ ಪ್ರಜೆಗಳನ್ನಾಗಿ ಮಾಡುವ ಪ್ರಯತ್ನ ನಡೆದಿದೆ.

©KTBS Not to be republished

ಭಾಷಾಕಲಿಕೆಯಲ್ಲಿ ಅತ್ಯಂತ ಮುಖ್ಯ ಗುರಿಗಳಾದ ಆಲಿಸುವುದು, ಮಾತನಾಡುವುದು, ಓದುವುದು, ಬರೆಯುವುದು ಹಾಗೂ ಆಕರಗ್ರಂಥಗಳಿಂದ ವಿಷಯ ಸಂಗ್ರಹಣೆಯಂತಹ ಕ್ಷೇತ್ರವಾರು ಸಾಮರ್ಥ್ಯಗಳಿಗೆ ಒತ್ತು ನೀಡಲಾಗಿದೆ. ಈ ಕೌಶಲಗಳೊಂದಿಗೆ ಕ್ರಿಯಾತ್ಮಕ ವ್ಯಾಕರಣ, ಸೌಂದರ್ಯಪ್ರಜ್ಞೆ, ಪ್ರಶಂಸಾ ಮನೋಭಾವ, ಮೌಲ್ಯಗಳ ಸಂವರ್ಧನೆಗೆ ಅನುವು ಮಾಡಿಕೊಡಬೇಕು. ಈ ಸಾಮರ್ಥ್ಯ ಮಕ್ಕಳಲ್ಲಿ ಬಂದಾಗ ಅವರು ಪರೀಕ್ಷೆಗಳಿಗಾಗಿ ಕಂಠಪಾಠಕ್ಕೆ ಶರಣು ಹೋಗಬೇಕಾಗಿಲ್ಲ. ಪಠ್ಯಪುಸ್ತಕವು ಭಾಷಾ ಕೌಶಲಗಳ ಸಂವರ್ಧನೆಗೆ ಒಂದು ಪೂರಕವಸ್ತುವೆಂದು ಪರಿಗಣಿಸಲು, ಮಕ್ಕಳ ಮನೋವೈಶಾಲ್ಯವನ್ನು ಬೆಳೆಸಲು ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ಚಟುವಟಿಕೆಗಳನ್ನು ಪಠ್ಯಪುಸ್ತಕದಲ್ಲಿ ಒದಗಿಸಲಾಗಿದೆ. ಮಿತ್ರರೊಂದಿಗೆ ಗುಂಪುಗಳಲ್ಲಿ ಚರ್ಚೆಯ ಮೂಲಕ ಅವರ ಅಭಿವ್ಯಕ್ತಿ ಹಾಗು ಸಂವಹನ ಕೌಶಲಗಳ ಸಂವರ್ಧನೆಯೇ ಕಲಿಕೆಯ ಗುರಿಯೆಂದು ಅಂತಹ ಚಟುವಟಿಕೆಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಈ ರೀತಿಯ ಚಟುವಟಿಕೆಗಳು ಮಕ್ಕಳಲ್ಲಿ ಕಲಿಯುವ ಕಲೆ (learning to learn) ಹಾಗೂ ಕಲಿತುದುದನ್ನು ಜೀವನದಲ್ಲಿ ಅಳವಡಿಸುವ ಶಕ್ತಿ (learning to do) ಯನ್ನು ವೃದ್ಧಿಮಾಡುತ್ತದೆ.

ಕರ್ನಾಟಕ ಪಠ್ಯಪುಸ್ತಕ ಸಂಘವು ಈ ಪುಸ್ತಕದ ತಯಾರಿಯಲ್ಲಿ ಸಹಕರಿಸಿದ ಸಮಿತಿಯ ಅಧ್ಯಕ್ಷರಿಗೆ, ಸದಸ್ಯರಿಗೆ, ಕಲಾಕಾರರಿಗೆ, ಪರಿಶೀಲಕರಿಗೆ, ಸಂಯೋಜಕ ಅಧಿಕಾರಿಗಳಿಗೆ, ಶಿಕ್ಷಣ ಮಹಾವಿದ್ಯಾಲಯಗಳ ಸಿಬ್ಬಂದಿವರ್ಗದವರಿಗೆ, ಜಿಲ್ಲಾ ತರಬೇತಿ ಸಂಸ್ಥೆಗಳು, ರಾಜ್ಯ ಮಟ್ಟದ ಪಠ್ಯಪುಸ್ತಕ ಸಂಪಾದಕ ಮಂಡಳಿಯ ಸದಸ್ಯರಿಗೆ ಮತ್ತು ಪುಸ್ತಕವನ್ನು ಸುಂದರವಾಗಿ ಮುದ್ರಿಸಿದ ಮುದ್ರಕರಿಗೆ ತನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಕೆಲವು ಸಾಹಿತಿಗಳು ಹಾಗೂ ಕವಿಗಳ ಕೃತಿಗಳನ್ನು ಈ ಪಠ್ಯಪುಸ್ತಕಗಳಲ್ಲಿ ಅಳವಡಿಸಲಾಗಿದೆ. ಈ ವಿಚಾರದಲ್ಲಿ ತಮ್ಮ ಒಪ್ಪಿಗೆಯನ್ನು ನೀಡಿರುವ ಬರಹಗಾರರಿಗೆ ಹಾಗೂ ಕವಿಗಳಿಗೆ ಪಠ್ಯಪುಸ್ತಕ ಸಂಘ ಆಭಾರಿಯಾಗಿದೆ.


**ಪ್ರೊ. ಜಿ. ಎಸ್. ಮುಡಂಬಡಿತ್ತಾಯ**
**ಮುಖ್ಯ ಸಂಯೋಜಕರು**
**ಪಠ್ಯಪುಸ್ತಕ ಪರಿಷ್ಕರಣೆ ಹಾಗೂ ಪಠ್ಯಪುಸ್ತಕ ರಚನೆ**
**ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)**
**ಬೆಂಗಳೂರು**

**ನಾಗೇಂದ್ರ ಕುಮಾರ್**
**ವ್ಯವಸ್ಥಾಪಕ ನಿರ್ದೇಶಕರು**
**ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)**
**ಬೆಂಗಳೂರು**


©KTBS Not to be republished

# ಸಮಕ್ಷಮ

ಕಾಲಕ್ಕೆ ತಕ್ಕಂತೆ ಕಲಿಯುವ ರೀತಿ, ವೇಗ ಹಾಗೂ ಪ್ರಮಾಣಗಳು ಗಣನೀಯವಾಗಿ ಬದಲಾವಣೆ ಹೊಂದುವ ನಿಟ್ಟಿನಲ್ಲಿ ಹೊಸ ಪಠ್ಯಪುಸ್ತಕಗಳು ಮಕ್ಕಳ ಕಲಿಕೆಗೆ ಅತ್ಯಗತ್ಯ. ಶಿಕ್ಷಣ ಕ್ಷೇತ್ರದಲ್ಲಿ ಹೊಸ ಸಂಶೋಧನೆಗಳು ಆದಂತೆ, ಕಲಿಯುವ ರೀತಿಯನ್ನು ಸರಳೀಕರಿಸುವ ಪ್ರಯತ್ನಗಳು ಜರುಗಿದಂತೆ ಹಾಗೂ ಮಗುವಿಗೆ ಕಲಿಕೆ ಭಿನ್ನರೀತಿಯ ಆಯಾಮಗಳಲ್ಲಿ ಉಪಯೋಗವಾಗುವಂತೆ ಪಠ್ಯವಸ್ತುವೂ ಬದಲಾಗುತ್ತಾ ಬಂದಿದೆ. ಈ ಹೊಸ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಶಿಕ್ಷಣ ನೀತಿಯನ್ವಯ ಎನ್.ಸಿ.ಎಫ್ ೨೦೦೫ ರಚಿತವಾಗಿದ್ದು, ಅದರ ಮುಖ್ಯ ತಳಹದಿಯ ಮೇಲೆ ಈ ಹೊಸ ಪಠ್ಯಪುಸ್ತಕ ಸಿದ್ಧಪಡಿಸಲಾಗಿದೆ.

ಕನ್ನಡ ಪಠ್ಯ ಪುಸ್ತಕಗಳು ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗುವಂತಹವು. ಮಗುವಿನ ಸೃಜನಶೀಲತೆಯನ್ನು ಬೆಳೆಸುವಂತಹವು. ೨೦೦೫ರ ರಾಷ್ಟ್ರೀಯ ಶಾಲಾ ಪಠ್ಯಕ್ರಮದ ಚೌಕಟ್ಟಿನ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರ ಶಿಕ್ಷಣ ಕ್ಷೇತ್ರದಲ್ಲಿ ತ್ರಿಭಾಷಾ ಸೂತ್ರವನ್ನು ಜಾರಿಗೊಳಿಸಿರುವ ಕಾರಣ ಕನ್ನಡೇತರ ಭಾಷಿಕರು ಕನ್ನಡವನ್ನು ದ್ವಿತೀಯ ಅಥವಾ ತೃತೀಯ ಭಾಷೆಯನ್ನಾಗಿ ಕಲಿಯಲು ತೃತೀಯ ಭಾಷೆಯ ಪಠ್ಯಪುಸ್ತಕ ಅವಶ್ಯಕವಾಗಿವೆ.

ತೃತೀಯ ಭಾಷೆಯ ಈ ಹೊಸ ಪಠ್ಯಪುಸ್ತಕದಲ್ಲಿ ಶಿಶು ಕೇಂದ್ರಿತ ಅಂಶಗಳೇ ಮುಖ್ಯವಾಗಿದ್ದು ಮಕ್ಕಳು ಸಮಾಜದಲ್ಲಿ ಯಶಸ್ವಿಯಾಗಿ ಬದುಕಲು ಮಾಡುವಲ್ಲಿ ಸಹಕಾರಿಯಾಗಿದೆ. ಈ ತರಗತಿಯ ಮಕ್ಕಳ ವಯೋಮಾನ, ಮಾನಸಿಕ ಹಂತವನ್ನು ಪರಿಗಣಿಸಿ ಅತಿ ಸರಳವೂ ಅತಿ ಹೊರೆಯೂ ಆಗದಂತೆ ಪಠ್ಯವನ್ನು ರಚಿಸಲಾಗಿದೆ. ಗದ್ಯ, ಪದ್ಯ, ಸಂಭಾಷಣೆ, ನಾಟಕ, ಕಥೆ.. ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಆಯ್ಕೆ ಮಾಡಿಕೊಂಡು ಮಗುವಿನ ಸೃಜನಶೀಲತೆ ಹೆಚ್ಚಿಸುವಂತಹ ಆಸಕ್ತಿಯನ್ನು ಕೆರಳಿಸುವಂತಹ ಹೊಸಚಿಂತನೆಯೆಡೆ ಒಯ್ಯುವಂತಹ ಪ್ರಯತ್ನಗಳನ್ನು ಮಾಡಲಾಗಿದೆ. ಭಾಷೆಯ ಕಲಿಕೆ ಯಶಸ್ವಿಯಾಗಲು ಹೊಸರೀತಿಯ ಅಭ್ಯಾಸಗಳನ್ನು ಅಳವಡಿಸಿಕೊಳ್ಳಲಾಗಿದೆ.

ನಿಗದಿಪಡಿಸಿದ ಸಾಮರ್ಥ್ಯಗಳ ಪೂರೈಕೆಗಾಗಿ ವೈವಿಧ್ಯಮಯ ವಿಷಯ-ವಸ್ತುಗಳನ್ನು ಆಯ್ಕೆಮಾಡಿಕೊಳ್ಳಲಾಗಿದೆ. ನಾಡು ನುಡಿಯ ಬಗ್ಗೆ ಪ್ರೀತಿ, ದೇಶಾಭಿಮಾನ, ವಾತ್ಸಲ್ಯ, ಕರುಣೆ.. ಮುಂತಾದ ಮೌಲ್ಯಗಳ ಬೆಳವಣಿಗೆಯ ಕಡೆಗೂ ಗಮನಹರಿಸಲಾಗಿದೆ.

ಈ ಪಠ್ಯಪುಸ್ತಕದ ರಚನಾ ಸಮಿತಿಯ ಸದಸ್ಯರಿಗೆ, ಪರಿಶೀಲಕರಿಗೆ, ಕಲಾಕಾರರಿಗೆ, ಸಂಪಾದಕ ಮಂಡಳಿಯ ಸದಸ್ಯರಿಗೆ ಹಾಗೂ ಅಧಿಕಾರಿ ವರ್ಗದವರಿಗೆ ನನ್ನ ಕೃತಜ್ಞತೆಗಳು. ಈ ಹೊಸ ಪುಸ್ತಕದ ಪ್ರಯತ್ನ ಎಲ್ಲರಿಗೂ ಇಷ್ಟವಾಗುತ್ತದೆಂದು ಹಾಗೂ ಸ್ಪಷ್ಟವಾದ ಕಲಿಕೆಗೆ ಪೂರಕವಾಗುತ್ತದೆಂದು ನಂಬಿದ್ದೇವೆ.

**ಡಾ. ದಯಾವತಿ ಎಂ.**

ಅಧ್ಯಕ್ಷರು

ನುಡಿ ಕನ್ನಡ - ೭ ಪಠ್ಯಪುಸ್ತಕ ರಚನಾ ಸಮಿತಿ

©KTBS Not to be republished

# ಪಠ್ಯಪುಸ್ತಕ ಪರಿಷ್ಕರಣ ಸಮಿತಿಗಳ ವಿವರ

**ಸರ್ವಾಧ್ಯಕ್ಷರು :**

**ಪ್ರೊ. ಬರಗೂರು ರಾಮಚಂದ್ರಪ್ಪ.** ರಾಜ್ಯಪಠ್ಯಪುಸ್ತಕ ಪರಿಷ್ಕರಣಸಮಿತಿ, ಕರ್ನಾಟಕ ಪಠ್ಯಪುಸ್ತಕಸಂಘ(ರಿ) ಬೆಂಗಳೂರು-೮೫

## ಪರಿಷ್ಕರಣ ಸಮಿತಿ

**ಅಧ್ಯಕ್ಷರು :**

**ಪ್ರೊ. ರಹಮತ್ ತರೀಕೆರೆ.** ಪ್ರಾಧ್ಯಾಪಕರು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಹೊಸಪೇಟೆ ತಾ. ಬಳ್ಳಾರಿ ಜಿಲ್ಲೆ

**ಸದಸ್ಯರು :**

**ಪ್ರೊ. ರುದ್ರಮುನಿ ಹಿರೇಮಠ.** ಸಹಪ್ರಾಧ್ಯಾಪಕರು, ಕೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯ, ಸರಸ್ವತಿ ಬಡಾವಣೆ, ದಾವಣಗೆರೆ.

**ಶ್ರೀ. ಮಹದೇವಸ್ವಾಮಿ.ಬಿ.** ಕನ್ನಡ ಅಧ್ಯಾಪಕರು, ಎ.ಪಿ.ಎಸ್. ಗ್ರಾಮಾಂತರ ಪ್ರೌಢಶಾಲೆ, ಸೋಮನಹಳ್ಳಿ, ಬೆಂಗಳೂರು-೮೨

**ಶ್ರೀಮತಿ ಪದ್ಮ, ಎ.** ಕನ್ನಡ ಅಧ್ಯಾಪಕಿ, ಎಂ.ಎಲ್.ಎ ಪ್ರೌಢಶಾಲೆ, ೧೫ನೇ ಕ್ರಾಸ್, ಮಲ್ಲೇಶ್ವರಂ ಬೆಂಗಳೂರು-೦೩

**ಶ್ರೀ. ರಾಜುಶೆಟ್ಟಿ,** ಕನ್ನಡ ಅಧ್ಯಾಪಕರು, ಸರ್ಕಾರಿ ಪ.ಪೂ.ಕಾಲೇಜು, (ಪ್ರೌಢಶಾಲೆ ವಿಭಾಗ)ಹೊಮ್ಮರಹಳ್ಳಿ, ಹೆಚ್.ಡಿ.ಕೋಟೆ, ತಾ,

**ಶ್ರೀ. ಜವರೇಗೌಡ.** ಕನ್ನಡ ಅಧ್ಯಾಪಕರು, ಶ್ರೀ ವಿದ್ಯಾಗಣಪತಿ ಪ್ರೌಢಶಾಲೆ, ಬಿದರಕೋಟೆ, ಮದ್ದೂರು ತಾ, ಮಂಡ್ಯ ಜಿಲ್ಲೆ.

**ಕಲಾವಿದರು:**

**ಶ್ರೀ. ವೆಂಕಟೇಶ್.** ಚಿತ್ರಕಲಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಉರಮಾರ ಕಸಲಗೆರೆ, ಮಂಡ್ಯ ದಕ್ಷಿಣ ತಾಲ್ಲೂಕು,

## ಉನ್ನತ ಪರಿಶೀಲನ ಸಮಿತಿ

**ಡಾ. ಎಚ್.ಎಸ್. ರಾಘವೇಂದ್ರರಾವ್,** ನಿವೃತ್ತ ಪ್ರಾಧ್ಯಾಪಕರು, ನಂ.೭, ೧೫ನೇ ಕ್ರಾಸ್, ಜೆ.ಪಿ.ನಗರ, ಬೆಂಗಳೂರು-೭೮.

**ಡಾ. ಜಿ.ಆರ್.ತಿಪ್ಪೇಸ್ವಾಮಿ,** ನಿವೃತ್ತ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮಾನಸ ಗಂಗೋತ್ರಿ, ಮೈಸೂರು-೬

**ಡಾ. ಸೈಯದ್ ಜಮೀರ್‌ಉಲ್ಲಾಷರೀಫ್,** ನಿವೃತ್ತ ಪ್ರಾಂಶುಪಾಲರು, ಭಟ್ಕಳ, ಉತ್ತರ ಕನ್ನಡ ಜಿಲ್ಲೆ.

**ಡಾ. ಯಲ್ಲಪ್ಪ ಹಿಮ್ಮಡಿ,** ಎಸ್.ಪಿ.ಎಂ. ಕಲಾ ಮತ್ತು ವಾಣಿಜ್ಯ ಕಾಲೇಜು, ರಾಯಭಾಗ, ಬೆಳಗಾವಿ ಜಿಲ್ಲೆ.

**ಡಾ. ಕಲಾವತಿ,** ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಳ್ಳಾರಿ.

**ಡಾ. ಪ್ರಶಾಂತ್ ನಾಯಕ್,** ಪ್ರಾಧ್ಯಾಪಕರು, ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾನಿಲಯ ಶಂಕರಘಟ್ಟ, ಶಿವಮೊಗ್ಗ.

**ಡಾ. ಗೀತಾವಸಂತ,** ಸಹಪ್ರಾಧ್ಯಾಪಕರು, ಕನ್ನಡ ವಿಭಾಗ ತುಮಕೂರು ವಿಶ್ವವಿದ್ಯಾಲಯ ತುಮಕೂರು.

**ಡಾ. ಸತ್ಯನಾರಾಯಣ,** ಎಚ್.ಎಸ್. ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವಕಾಲೇಜು, ಬಸವನಗುಡಿ, ಬೆಂಗಳೂರು.

**ಸಲಹೆ ಮತ್ತು ಮಾರ್ಗದರ್ಶನ :**

**ಶ್ರೀ. ಗೋಪಾಲಕೃಷ್ಣ ಹೆಚ್.ಎನ್** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ) ಬೆಂಗಳೂರು-೮೫

**ಶ್ರೀ ಕೆ.ಜಿ.ರಂಗಯ್ಯ,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ) ಬೆಂಗಳೂರು-೮೫

**ಕಾರ್ಯಕ್ರಮ ಸಂಯೋಜಕರು :**

**ಶ್ರೀ ಎ. ಚಂದ್ರಶೇಖರ್ ಬಾಬು,** ಹಿರಿಯ ಸಹಾಯಕ ನಿರ್ದೇಶಕರು ಕರ್ನಾಟಕ ಪಠ್ಯಪುಸ್ತಕ ಸಂಘ(ರಿ) ಬೆಂಗಳೂರು-೮೫

©KTBS Not to be republished

## ಪರಿಷ್ಕರಣೆ ಕುರಿತು

ಒಂದರಿಂದ ಹತ್ತನೇ ತರಗತಿಯ ಪಠ್ಯಪುಸ್ತಕಗಳ ಬಗ್ಗೆ ಪ್ರಕಟಗೊಂಡ ಸಾರ್ವಜನಿಕ ಅಭಿಪ್ರಾಯಗಳನ್ನು ಗಮನಿಸಿ ಮಾನ್ಯ ಮುಖ್ಯಮಂತ್ರಿಯವರೂ ಅರ್ಥಸಚಿವರೂ ಆಗಿರುವ ಶ್ರೀ ಸಿದ್ದರಾಮಯ್ಯನವರು ತಮ್ಮ ೨೦೧೪–೧೫ ರ ಬಜೆಟ್‌ನಲ್ಲಿ ತಜ್ಞರ ಸಮಿತಿಯನ್ನು ರಚಿಸುವ ಘೋಷಣೆ ಮಾಡಿದರು. ತಜ್ಞರು ಅನುಸರಿಸಬೇಕಾದ ಮೂಲ ಆಶಯವನ್ನು ಹೀಗೆ ಹೇಳಿದರು: "ಪಠ್ಯಪುಸ್ತಕಗಳನ್ನು ಸಾಮಾಜಿಕ ಸಾಮರಸ್ಯ, ನೈತಿಕಮೌಲ್ಯಗಳು, ವ್ಯಕ್ತಿತ್ವವಿಕಸನ, ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವ, ಜಾತ್ಯತೀತತೆ ಮತ್ತು ರಾಷ್ಟ್ರೀಯ ಬದ್ಧತೆಗಳಿಗೆ ಅನುವಾಗುವಂತೆ ತಜ್ಞರ ಸಮಿತಿಯನ್ನು ಪುನರ್ ರಚಿಸಲಾಗುವುದು" ಇದು ಬಜೆಟ್ ಭಾಷಣದಲ್ಲಿ ಸಾದರಪಡಿಸಿದ ಆಶಯ.

ಆನಂತರ ಶಿಕ್ಷಣ ಇಲಾಖೆಯು ಒಂದರಿಂದ ಹತ್ತನೇ ತರಗತಿಯವರೆಗಿನ ಪಠ್ಯಪುಸ್ತಕಗಳ ಪರಿಷ್ಕರಣೆಗಾಗಿ ೨೭ ಸಮಿತಿಗಳನ್ನು ರಚಿಸಿ ದಿನಾಂಕ: ೨೪.೧೧.೨೦೧೪ ರಂದು ಆದೇಶಹೊರಡಿಸಿತು. ಈ ಸಮಿತಿಗಳು ವಿಷಯವಾರು ಮತ್ತು ತರಗತಿವಾರು ಮಾನದಂಡಕ್ಕನುಗುಣವಾಗಿ ರಚಿತವಾದವು. ವಿವಿಧ ಪಠ್ಯವಿಷಯಗಳಿಗೆ ಸಂಬಂಧಿಸಿದ ತಜ್ಞರು, ಅಧ್ಯಾಪಕರು ಈ ಸಮಿತಿಗಳಲ್ಲಿದ್ದಾರೆ. ಈಗಾಗಲೇ ಲಿಖಿತವಾಗಿ ಬಂದಿರುವ ಅನೇಕ ಆಕ್ಷೇಪಗಳು ಮತ್ತು ವಿಶ್ಲೇಷಣೆಗಳನ್ನು ಪರಿಶೀಲಿಸಿ, ತಪ್ಪು ಒಪ್ಪುಗಳ ಬಗ್ಗೆ ನಿರ್ಣಯಿಸಿ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ ಹೊಣೆಹೊತ್ತ ಈ ಸಮಿತಿಗಳಿಗೆ 'ಅಗತ್ಯವಿದ್ದಲ್ಲಿ ಪಠ್ಯವಸ್ತುವನ್ನು ಪರಿಷ್ಕರಿಸಿ ನಂತರ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ' ಸ್ವಾತಂತ್ರ್ಯವನ್ನು ೨೪.೧೧.೨೦೧೪ರ ಆದೇಶದಲ್ಲೇ ನೀಡಲಾಗಿತ್ತು. ಆನಂತರ ೧೯.೦೯.೨೦೧೫ ರಂದು ಹೊಸ ಆದೇಶ ಹೊರಡಿಸಿ 'ಅಗತ್ಯವಿದ್ದಲ್ಲಿ ಪುನರ್ ರಚಿಸುವ' ಸ್ವಾತಂತ್ರ್ಯವನ್ನು ನೀಡಲಾಯಿತು. ಹೀಗೆ ಸಮಗ್ರ ಪರಿಷ್ಕರಣೆಗೊಂಡ ಪಠ್ಯಪುಸ್ತಕಗಳನ್ನು ೨೦೧೬–೧೭ ರ ಬದಲು ೨೦೧೭–೧೮ನೇ ಶೈಕ್ಷಣಿಕ ವರ್ಷದಲ್ಲಿ ಜಾರಿಗೊಳಿಸಲಾಗುವುದೆಂದು ಇದೇ ಆದೇಶದಲ್ಲಿ ತಿಳಿಸಲಾಯಿತು.

ಅನೇಕ ವ್ಯಕ್ತಿಗಳೂ ಸಂಘಟನೆಗಳೂ ಸ್ವಯಂಪ್ರೇರಿತರಾಗಿ ಪಠ್ಯಪುಸ್ತಕಗಳ ಮಾಹಿತಿದೋಷ, ಆಶಯದೋಷಗಳನ್ನು ಪಟ್ಟಿಮಾಡಿ ಶಿಕ್ಷಣ ಸಚಿವರಿಗೆ, ಪಠ್ಯಪುಸ್ತಕ ಸಂಘಕ್ಕೆ ಕಳುಹಿಸಿದ್ದರು. ಅವುಗಳ ಪರಿಶೀಲನೆಮಾಡಿದ್ದಲ್ಲದೆ, ಸಮಿತಿಗಳಾಚೆಗೆ ಅನೇಕ ಸಂವಾದಗಳನ್ನು ಏರ್ಪಡಿಸಿ ವಿಚಾರ ವಿನಿಮಯ ಮಾಡಿಕೊಂಡಿದ್ದೇವೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ಅಧ್ಯಾಪಕರ ಸಂಘಗಳ ಜೊತೆ ಚರ್ಚಿಸಿದ್ದಲ್ಲದೆ ಪ್ರಶ್ನಾವಳಿ ಸಿದ್ಧಪಡಿಸಿ ಅಧ್ಯಾಪಕರಿಗೆ ಕಳಿಸಿ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಅಧ್ಯಾಪಕರು, ವಿಷಯಪರಿವೀಕ್ಷಕರು ಮತ್ತು ಡಯಟ್ ಪ್ರಾಂಶುಪಾಲರ ಪ್ರತ್ಯೇಕ ಸಭೆಗಳನ್ನು ನಡೆಸಿ ವಿಶ್ಲೇಷಣಾತ್ಮಕ ಅಭಿಮತಗಳನ್ನು ಪಡೆಯಲಾಗಿದೆ. ವಿಜ್ಞಾನ, ಸಮಾಜವಿಜ್ಞಾನ, ಗಣಿತ, ಭಾಷೆ ಸಾಹಿತ್ಯಗಳಿಗೆ ಸಂಬಂಧಿಸಿದ ತಜ್ಞರಿಗೆ ಮೊದಲೇ ಪಠ್ಯಪುಸ್ತಕಗಳನ್ನು ಕಳುಹಿಸಿ ಆನಂತರ ಸಭೆ ನಡೆಸಿ ಚರ್ಚಿಸಲಾಗಿದೆ. ಮಹಿಳಾ ಸಂಘಟನೆ ಹಾಗೂ ವಿಜ್ಞಾನ ಸಂಬಂಧಿ ಸಂಸ್ಥೆಗಳನ್ನು ಆಹ್ವಾನಿಸಿ ಚಿಂತನೆ ನಡೆಸಲಾಗಿದೆ. ಹೀಗೆ ಎಲ್ಲಾ ಮೂಲಗಳಿಂದ ಪಡೆದ ಅರಿವಿನ ಆಧಾರದ ಮೇಲೆ ಪಠ್ಯಪುಸ್ತಕಗಳನ್ನು ಅಗತ್ಯವಿದ್ದಕಡೆ ಪರಿಷ್ಕರಿಸಲಾಗಿದೆ.

ಬಹುಮುಖ್ಯವಾದ ಇನ್ನೊಂದು ಸಂಗತಿಯನ್ನು ಇಲ್ಲಿ ಹೇಳಬೇಕು. ಕೇಂದ್ರೀಯ ಶಾಲಾ (ಎನ್.ಸಿ.ಇ.ಆರ್.ಟಿ) ಪಠ್ಯಪುಸ್ತಕಗಳ ಜೊತೆ ರಾಜ್ಯದ ಪಠ್ಯಪುಸ್ತಕಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿ ಸಲಹೆಗಳನ್ನು ನೀಡಲು ವಿಜ್ಞಾನ, ಗಣಿತ ಮತ್ತು ಸಮಾಜವಿಜ್ಞಾನಕ್ಕೆ ಸಂಬಂಧಿಸಿದಂತೆ ತಜ್ಞರ ಮೂರು

©KTBS Not to be republished

ಸಮಿತಿಗಳನ್ನು ರಚಿಸಲಾಯಿತು. ಈ ಸಮಿತಿಗಳು ನೀಡಿದ ತೌಲನಿಕ ವಿಶ್ಲೇಷಣೆ ಮತ್ತು ಸಲಹೆಗಳನ್ನು ಆಧರಿಸಿ ರಾಜ್ಯ ಪಠ್ಯಪುಸ್ತಕಗಳ ಗುಣಮಟ್ಟವನ್ನು ಹೆಚ್ಚಿಸಲಾಗಿದೆ. ಕೇಂದ್ರೀಯ ಶಾಲಾ ಪಠ್ಯಪುಸ್ತಕಗಳಿಗಿಂತ ನಮ್ಮ ರಾಜ್ಯದ ಪಠ್ಯಪುಸ್ತಕಗಳ ಗುಣಮಟ್ಟ ಕಡಿಮೆಯಾಗದಂತೆ ಕಾಯ್ದುಕೊಳ್ಳಲಾಗಿದೆ. ಜೊತೆಗೆ ಆಂಧ್ರ, ತಮಿಳುನಾಡು, ಮಹಾರಾಷ್ಟ್ರಗಳ ಪಠ್ಯಪುಸ್ತಕಗಳ ಜೊತೆ ನಮ್ಮ ಪಠ್ಯಪುಸ್ತಕಗಳನ್ನು ಪರಿಶೀಲಿಸಲಾಗಿದೆ.

ಇನ್ನೊಂದು ಸ್ಪಷ್ಟನೆಯನ್ನು ನೀಡಲು ಬಯಸುತ್ತೇನೆ. ನಮ್ಮ ಸಮಿತಿಗಳು ಮಾಡಿರುವುದು ಪರಿಷ್ಕರಣೆಯೇ ಹೊರತು ಪಠ್ಯಪುಸ್ತಕಗಳ ಸಮಗ್ರ ರಚನೆಯಲ್ಲ. ಆದ್ದರಿಂದ ಈಗಾಗಲೇ ರಚಿತವಾಗಿರುವ ಪಠ್ಯಪುಸ್ತಕಗಳ ಸ್ವರೂಪಕ್ಕೆ ಎಲ್ಲಿಯೂ ಧಕ್ಕೆಯುಂಟುಮಾಡಿಲ್ಲ. ಲಿಂಗತ್ವ ಸಮಾನತೆ, ಪ್ರಾದೇಶಿಕ ಪ್ರಾತಿನಿಧ್ಯ, ರಾಷ್ಟ್ರೀಯ ಸಮಗ್ರತೆ, ಸಮಾನತೆ, ಸಾಮಾಜಿಕ ಸಾಮರಸ್ಯಗಳ ಹಿನ್ನೆಲೆಯಲ್ಲಿ ಕೆಲವು ಪರಿಷ್ಕರಣೆಗಳು ನಡೆದಿವೆ. ಹೀಗೆ ಪರಿಷ್ಕರಿಸುವಾಗ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮೀರಿಲ್ಲವೆಂದು ತಿಳಿಸಬಯಸುತ್ತೇವೆ: ಜೊತೆಗೆ ನಮ್ಮ ಸಂವಿಧಾನದ ಆಶಯಗಳನ್ನು ಅನುಸರಿಸಲಾಗಿದೆ. ಸಮಿತಿಗಳು ಮಾಡಿದ ಪರಿಷ್ಕರಣೆಯನ್ನು ಮತ್ತೊಮ್ಮೆ ಪರಿಶೀಲಿಸಲು ವಿಷಯವಾರು ಉನ್ನತ ಪರಿಶೀಲನ ಸಮಿತಿಗಳನ್ನು ರಚಿಸಿ ಅಭಿಪ್ರಾಯಪಡೆದು ಅಳವಡಿಸಲಾಗಿದೆ.

ಹೀಗೆ ಕ್ರಮಬದ್ಧವಾಗಿ ನಡೆದ ಕೆಲಸಕ್ಕೆ ತಮ್ಮನ್ನು ತಾವು ಸಂಪೂರ್ಣ ತೊಡಗಿಸಿಕೊಂಡ ೨೭ ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರನ್ನು ಹಾಗೂ ಉನ್ನತ ಪರಿಶೀಲನಾ ಸಮಿತಿಯ ಸಮಸ್ತರನ್ನು ಕೃತಜ್ಞತೆಯಿಂದ ನೆನೆಯುತ್ತೇವೆ. ಅಂತೆಯೇ ಸಮಿತಿಗಳ ಕೆಲಸ ಸುಗಮವಾಗಿ ನಡೆಯುವಂತೆ ವ್ಯವಸ್ಥೆಮಾಡಲು ಕಾರ್ಯಕ್ರಮ ಅಧಿಕಾರಿಗಳಾಗಿ ನಿಷ್ಠೆಯಿಂದ ದುಡಿದ ಪಠ್ಯಪುಸ್ತಕ ಸಂಘದ ಎಲ್ಲಾ ಅಧಿಕಾರಿಗಳನ್ನೂ ನೆನೆಯುತ್ತೇವೆ. ಸಹಕರಿಸಿದ ಸಿಬ್ಬಂದಿಗೂ ನಮ್ಮ ವಂದನೆಗಳು. ಅಭಿಪ್ರಾಯ ನೀಡಿ ಸಹಕರಿಸಿದ ಸರ್ವ ಸಂಘಟನೆಗಳು ಮತ್ತು ತಜ್ಞರಿಗೆ ಧನ್ಯವಾದಗಳು.

**(ಗೋಪಾಲಕೃಷ್ಣ ಹೆಚ್.ಎನ್)**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
ಬೆಂಗಳೂರು–೮೫

**(ಪ್ರೊ. ಬರಗೂರು ರಾಮಚಂದ್ರಪ್ಪ)**
ಸರ್ವಾಧ್ಯಕ್ಷರು
ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
ಬೆಂಗಳೂರು–೮೫

© KTBS Not to be republished

# ಪರಿವಿಡಿ


| ಭಾಗ–೧ ಪಠ್ಯ ಪ್ರಧಾನ ಅಧ್ಯಯನ ಗದ್ಯ–ಪದ್ಯಗಳು | | | | |
|---|---|---|---|---|
| ಕ್ರ.ಸಂ. | ಪಾಠಗಳ ಹೆಸರು | ಪ್ರಕಾರ | ಕೃತಿಕಾರರ ಹೆಸರು | ಪುಟ ಸಂಖ್ಯೆ |
| ೧ | ಕೂಸುಮರಿ | ಪದ್ಯ | ಜಿ.ಪಿ. ರಾಜರತ್ನಂ | ೦೧ |
| ೨ | ಹೊರಸಂಚಾರ | ಗದ್ಯ | ಸಂಗ್ರಹ | ೦೮ |
| ೩ | ಬಣ್ಣದ ಟಿ.ವಿ. | ಪದ್ಯ | ಚಂದ್ರಗೌಡ ಕುಲಕರ್ಣಿ | ೨೦ |
| ೪ | ಅತಿ ಆಸೆ ಗತಿಕೇಡು | ಗದ್ಯ | ಎಚ್. ಆರ್. ಚಂದ್ರವದನರಾವ್ | ೨೬ |
| ೫ | ತಾಯಿಗೆ ಪತ್ರ | ಗದ್ಯ | ಸಂಗ್ರಹ | ೩೫ |
| ೬ | ನೆನೆವುದೆನ್ನ ಮನ | ಗದ್ಯ | ಡಾ. ಎಚ್. ಎಸ್. ಅನುಪಮಾ | ೪೩ |
| ೭ | ತಾಯ ಬರವು | ಪದ್ಯ | ಕಾವ್ಯಾನಂದ | ೫೧ |
| ೮ | ಆರ್ಕಿಮಿಡೀಸ್ | ಗದ್ಯ | ಸಂಗ್ರಹ | ೫೯ |
| ೯ | ಅಕ್ಕನ ವಚನ | ಪದ್ಯ | ಅಕ್ಕಮಹಾದೇವಿ | ೬೭ |
| ೧೦ | ಉತ್ತರಕುಮಾರನ ಜಂಭ | ಗದ್ಯ | ಸಂಗ್ರಹ | ೭೩ |
| ೧೧ | ಬಂದೆವಿದೋ | ಪದ್ಯ | ಡಿ.ಎಸ್. ಕರ್ಕಿ | ೮೨ |
| ೧೨ | ರಸ್ತೆ ನಿಯಮಗಳು | ಗದ್ಯ | ಸಂಗ್ರಹ | ೮೭ |
| ೧೩ | ಶಾಲಾ ವಾರ್ಷಿಕೋತ್ಸವ | ಗದ್ಯ | ಸಂಗ್ರಹ | ೯೮ |
| | ಭಾಗ–೨ ಪಠ್ಯಪೂರಕ ಅಧ್ಯಯನ | | | |
| ೧ | ಜಲಚಕ್ರ | ಪದ್ಯ | ಹ. ಮ. ಪೂಜಾರ | ೧೦೭ |
| ೨ | ಧೈರ್ಯಶಾಲಿ ಬಾಲಕ | ಗದ್ಯ | ಸಂಗ್ರಹ | ೧೧೦ |
| ೩ | ಭಾರತ ದೇಶದ ಹಕ್ಕಿ | ಗದ್ಯ | ಜಲಾಲುದ್ದೀನ್ ರೂಮಿ | ೧೧೨ |
| ೪ | ಬಲಶಾಲಿ ಯಾರು? | ಗದ್ಯ | ಬೇದ್ರೆ ಮಂಜುನಾಥ | ೧೧೪ |
| ೫ | ಅಬ್ದುಲ್ ಕಲಾಂ ಬಾಲ್ಯದ ನೆನಪು | ಗದ್ಯ | ಮೂಲ:ಡಾ.ಎ.ಪಿ.ಜೆ.ಅಬ್ದುಲ್ ಕಲಾಂ<br>ಅನು: ಜಿ.ಕೆ. ಮಧ್ಯಸ್ಥ | ೧೧೮ |
| ೬ | ಹುಲ್ಲಿನ ಎಸಳು | ಗದ್ಯ | ಸಿ. ಉಪೇಂದ್ರ ಸೋಮಯಾಜಿ | ೧೨೧ |
| ೭ | ಪುಸ್ತಕ | ಪದ್ಯ | ಹೊಯಿಸಳ | ೧೨೩ |
| ೮ | ನಮ್ಮ ರಾಷ್ಟ್ರಧ್ವಜ | ಗದ್ಯ | ಸಂಗ್ರಹ | ೧೨೬ |


©KTBS Not to be republished

# ೧ ಕೂಸುಮರಿ

– ಜಿ.ಪಿ. ರಾಜರತ್ನಂ

**ಪ್ರವೇಶ:**

ಆಟಗಳೆಂದರೆ ಮಕ್ಕಳಿಗೆ ಎಲ್ಲಿಲ್ಲದ ಅಕ್ಕರೆ. ಎಳೆಯ ವಯಸ್ಸಿನಲ್ಲಿ ಅಣ್ಣನ ಬೆನ್ನೇರಿ ಆಡುತ್ತಿದ್ದ ಕೂಸುಮರಿ ಆಟದ ನೆನಪು ಎಲ್ಲಾ ವಯಸ್ಸಿನಲ್ಲೂ ಮುದ ನೀಡುತ್ತದೆ. ಜನಪದ ಆಟಗಳಲ್ಲಿ ಒಂದಾದ ಕೂಸುಮರಿ ಆಟದ ಸೊಬಗನ್ನು ಮನೋಜ್ಞವಾಗಿ ಈ ಕವನದಲ್ಲಿ ವರ್ಣಿಸಲಾಗಿದೆ.

ಕೂಸುಮರಿ! ಕೂಸುಮರಿ
ಕೂಸುಮರಿ ಬೇಕೇ ಕೂಸುಮರಿ

ಅಣ್ಣನ ಬೆನ್ನಿಗೆ ಮೈಯನು ಬೆಸೆದು
ಕತ್ತಿನ ಸುತ್ತಲು ಕೈಗಳನೆಸೆದು
ಸೊಂಟದ ಸುತ್ತಲು ಕಾಲನು ಬಿಗಿದು
ಅಣ್ಣನು ನೆಗೆದರೆ ತಾನೂ ನೆಗೆದು



ಮುದ್ದಾಗಿರುವುದು ಕೂಸುಮರಿ!
ಕನ್ನಡ ನಾಡಿನ ಕೂಸುಮರಿ!
ಕೂಸುಮರಿ! ಕೂಸುಮರಿ!
ಕೂಸುಮರಿ ಬೇಕೇ ಕೂಸುಮರಿ

ಕೆದರಿದ ಕೂದಲ ಮರೆಯಿಂದಿಣಿಕಿ
ಐ! ಐ! ಎನ್ನುತ ಕಾಡುತ ಕೆಣಕಿ
ಬೆಳಗಿನ ಜಾವದ ಕತ್ತಲೆಯಲ್ಲಿ
ಎಳೆ ಬಿಸಿಲೆರಚುವ ಸೂರ್ಯನ ಹೋಲಿ

ಮುದ್ದಾಗಿರುವುದು ಕೂಸುಮರಿ!
ಕನ್ನಡ ನಾಡಿನ ಕೂಸುಮರಿ!
ಕೂಸುಮರಿ! ಕೂಸುಮರಿ!
ಕೂಸುಮರಿ ಬೇಕೇ ಕೂಸುಮರಿ!

©KTBS
Not to be republished

ಭೂಮಿಯ ಬಲೆಯಿಂದಾಕಾಶಕ್ಕೆ
ಸರ‍್ರೆಂದೇರುತ ಬಣ್ಣದ ರೆಕ್ಕೆ
ಹರಡುತ ಹಾಡುವ ಹಕ್ಕಿಯ ಹಾಗೆ
ಹರಡುತಲಿರುವುದು ಬೆನ್ನಿನ ಮೇಗೆ

ಕನ್ನಡ ನಾಡಿನ ಕೂಸುಮರಿ!
ಕೂಸುಮರಿ ಬೇಕೇ ಕೂಸುಮರಿ!

**ಕ್ಷೇತ್ರ :** ಆಲಿಸುವುದು

**ಸಾಮರ್ಥ್ಯ :** ಬಳಕೆಯಲ್ಲಿರದ ಗೀತೆ, ಕಥನ, ಒಗಟು ಮತ್ತು ಪರಿಚಿತ ಸನ್ನಿವೇಶಗಳಲ್ಲಿನ ಸರಳ ವಿವರಣೆಗಳನ್ನು ಆಲಿಸಿ ಅರ್ಥ ಮಾಡಿಕೊಳ್ಳುವುದು.



**ಕೃತಿಕಾರರ ಪರಿಚಯ:** ‘ಬಣ್ಣದ ತಗಡಿನ ತುತ್ತೂರಿ’ ಮೊದಲಾದ ಪದ್ಯಗಳ ಮೂಲಕ ಚಿಕ್ಕಮಕ್ಕಳಿಗೂ ಚಿರಪರಿಚಿತರಾದವರು ಜಿ.ಪಿ. ರಾಜರತ್ನಂ. ಇವರ ಪೂರ್ಣ ಹೆಸರು ಗುಂಡ್ಲು ಪಂಡಿತ ರಾಜರತ್ನಂ. ಶ್ರೀಯುತರು ೧೯೦೮ರಲ್ಲಿ ಜನಿಸಿದರು. ಇವರು ‘ರತ್ನನ ಪದಗಳು’, ‘ನಾಗನ ಪದಗಳು’, ‘ಪುರುಷ ಸರಸ್ವತಿ’ ಮುಂತಾದ ಕವನ ಸಂಗ್ರಹಗಳನ್ನೂ ‘ಗಂಡುಗೊಡಲಿ’, ‘ನರಕದ ನ್ಯಾಯ’ ಮೊದಲಾದ ನಾಟಕಗಳನ್ನೂ ಹಾಗೂ ‘ಕಂದನ ಕಾವ್ಯಮಾಲೆ’, ‘ತುತ್ತೂರಿ’, ‘ರಸಕವಳ’ ಮುಂತಾದ ಮಕ್ಕಳ ಸಾಹಿತ್ಯ ಕೃತಿಗಳನ್ನೂ ರಚಿಸಿದ್ದಾರೆ. ಇವರು ದೆಹಲಿಯಲ್ಲಿ ೧೯೭೮ರಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ೧೯೭೯ರ ಮಾರ್ಚ್ ೧೩ರಂದು ನಿಧನರಾದರು.

©KTBS Not to be republished

## ಪದಗಳ ಅರ್ಥ

ಕತ್ತು–ಕುತ್ತಿಗೆ, ಕೊರಳು;
ಕಾಡು–ಪೀಡಿಸು;
ಕೂಸುಮರಿ–ಆಟವಾಡಿಸಲು ಚಿಕ್ಕ ಮಗುವನ್ನು ಬೆನ್ನಿನ ಮೇಲೆ ಹೊರುವುದು;
ಕೆದರಿದ–ಹರಡಿದ;
ಕೆಣಕಿ–ಸಿಟ್ಟಿಗೇಳುವಂತೆ ಮಾಡು;
ಜಾವ–ಸಮಯ, ಹೊತ್ತು;
ನೆಗೆ–ಜಿಗಿ, ಹಾರು;
ಬಿಗಿ–ಹಿಡಿತ, ಸುತ್ತಿಕೊ;
ಬೆಸೆ–ಕೂಡಿಸು, ಜೋಡಿಸು;
ಮರೆ–ಹಿಂದಿನಿಂದ;
ಮೇಗೆ–ಮೇಲೆ;
ಸರ್‍ರೆಂದೇರುತ–ಸರ್ ಎನ್ನುವ ಶಬ್ದದೊಂದಿಗೆ ಮೇಲಕ್ಕೆ ಏರುತ್ತ;
ಹೋಲಿ–ಹೋಲುವ, ಹೋಳಿ.

## ಅಭ್ಯಾಸ

**ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಅಣ್ಣನು ನೆಗೆದರೆ ಕೂಸುಮರಿ ಏನು ಮಾಡುತ್ತದೆ?

_______________________________________________

೨. ಎಳೆ ಬಿಸಿಲನ್ನು ಎರಚುವವರು ಯಾರೆಂದು ಕವಿ ಹೇಳಿದ್ದಾರೆ?

_______________________________________________

೩. ಕೂಸುಮರಿಯು ಸರ್‍ರೆಂದು ಎಲ್ಲಿಂದ ಎಲ್ಲಿಗೆ ಏರುತ್ತದೆ?

_______________________________________________

೪. ಕೂಸುಮರಿ ಪದ್ಯವನ್ನು ಬರೆದ ಕವಿಯ ಹೆಸರೇನು?

_______________________________________________

©KTBS Not to be republished

ಆ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.

೧. ರಾಜರತ್ನಂರವರು ಸೂರ್ಯನೊಂದಿಗೆ ಕೂಸುಮರಿಯನ್ನು ಹೇಗೆ ಹೋಲಿಸಿದ್ದಾರೆ?

________________________________________

________________________________________

________________________________________

________________________________________

೨. ರಾಜರತ್ನಂರವರು ಕೂಸುಮರಿಯನ್ನು ಹೇಗೆ ವರ್ಣಿಸಿದ್ದಾರೆ?

________________________________________

________________________________________

________________________________________

________________________________________

©KTBS Not to be republished

ಇ) ಕೆಳಗಿನ ಪದ್ಯ ಭಾಗದಲ್ಲಿರುವ ಪ್ರಾಸ ಪದಗಳನ್ನು ಗುರುತಿಸಿ ಬರೆಯಿರಿ.

ಅಣ್ಣನ ಬೆನ್ನಿಗೆ ಮೈಯನು ಬೆಸೆದು ________________

ಕತ್ತಿನ ಸುತ್ತಲು ಕೈಗಳನೆಸೆದು ________________

ಸೊಂಟದ ಸುತ್ತಲು ಕಾಲನು ಬಿಗಿದು ________________

ಅಣ್ಣನು ನೆಗೆದರೆ ತಾನೂ ನೆಗೆದು ________________

**ಈ) ಶಿಕ್ಷಕರ ನೆರವಿನಿಂದ ಕೂಸುಮರಿ ಪದ್ಯದ ಭಾವಾರ್ಥವನ್ನು ಬರೆಯಿರಿ.**

________________________________________

________________________________________

________________________________________

________________________________________

________________________________________

________________________________________

________________________________________

________________________________________

**ಉ) ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ.**

ಮುದ್ದಾಗಿರುವುದು ------------------------------------

------------------------------------

------------------------------------

------------------------------------ ಕೂಸುಮರಿ!

ಭೂಮಿಯ ------------------------------------

------------------------------------

------------------------------------

------------------------------------ ಬೆನ್ನಿನ ಮೇಗೆ

©KTBS Not to be republished

## ಭಾಷಾಭ್ಯಾಸ

**ಅ) ಕೆಳಗಿನ ಪದಗಳ ರಚನೆಯನ್ನು ಗಮನಿಸಿ. ಅದೇ ತರಹದ ಪದಗಳನ್ನು 'ಕೂಸುಮರಿ' ಪದ್ಯದಲ್ಲಿ ಹುಡುಕಿ ಬರೆಯಿರಿ.**

ಸರ್ರೆಂದೇರುತ – ಸರ್ರ್ ಎಂದು ಏರುತ

೧. ______________________

೨. ______________________

೩. ______________________

**ಆ) ಈ ಕೆಳಗೆ ಪದ್ಯದಲ್ಲಿನ ಹಲವಾರು ಪದಗಳು ಕೂಡಿಕೊಂಡಿವೆ. ಅವುಗಳ ಸರಳ ರೂಪ ಗಮನಿಸಿ ಬರೆಯಿರಿ.**

೧. ಕೈಗಳನ್ನು ಎಸೆದು – ಕೈಗಳನೆಸೆದು

೨. ಬಿಸಿಲನ್ನು ಎರಚುವ – ಬಿಸಿಲೆರಚುವ

೩. ಮರೆ ಇಂದ ಇಣುಕಿ – ಮರೆಯಿಂದಿಣುಕಿ

೪. ಬಲೆ ಇಂದ ಆಕಾಶಕ್ಕೆ – ಬಲೆಯಿಂದಾಕಾಶಕ್ಕೆ

೫. ಹರಡುತಲಿ ಇರುವುದು – ಹರಡುತಲಿರುವುದು

## ಭಾಷಾ ಚಟುವಟಿಕೆ

ಅ) ನಿಮಗೆ ಗೊತ್ತಿರುವ ಮತ್ತು ನೀವು ಆಡುವ ಐದು ಆಟಗಳ ಹೆಸರನ್ನು ಬರೆದು ಅದರ ಬಗೆಗೆ ಮಾಹಿತಿಯನ್ನು ಸಂಗ್ರಹಿಸಿರಿ.

ಆ) ಜಿ.ಪಿ.ರಾಜರತ್ನಂ ಅವರ ಇತರ ಪದ್ಯಗಳನ್ನು ಸಂಗ್ರಹಿಸಿ ಓದಿರಿ.

**ಇ) ಕೆಳಗಿನ ಒಗಟುಗಳನ್ನು ಬಿಡಿಸಿ.**

೧. ಚೋಟುದ್ದ ಹುಡುಗಿಗೆ ಮಾರುದ್ದ ಜಡೆ. ______________

೨. ಚಚ್ಚೌಕ ಬಾವಿ, ಬಗ್ಗಿ ನೋಡಿದರೆ ಹನಿ ನೀರಿಲ್ಲ! ______________

೩. ಅಕ್ಕ ಅಕ್ಕ ಗಿಡ ನೋಡಾ, ಗಿಡದ ತುಂಬಾ ಕಾಯಿ ನೋಡಾ. ______________

©KTBS Not to be republished

೪. ಕೈಯುಂಟು ಕಾಲಿಲ್ಲ ಶಿರಹರಿದ ಮುಂಡ, ರೊಯ್ಯ ರೊಯ್ಯನೆ ಬಂದು ಹೆಗಲೇರಿಕೊಂಡ, ರಾಯರಾಯರಿಗೆ ತಾನೇ ಪ್ರಚಂಡ. ________________

೫. ಹಸಿರು ಗಿಡದಲ್ಲಿ ಮೊಸರು ಚೆಲ್ಲಿದೆ. ________________

**ಈ) ಕೆಳಗಿನ ಪದಗಳು ಉತ್ತರವಾಗಿ ಬರುವಂತೆ ಒಗಟುಗಳನ್ನು ಬರೆಯಿರಿ / ರಚಿಸಿರಿ.**

೧. ಕೊಡೆ

________________________________________

೨. ತೆಂಗಿನ ಮರ

________________________________________

೩. ಬಾಳೆಹಣ್ಣು

________________________________________

೪. ಬೆಳ್ಳುಳ್ಳಿ

________________________________________

**ಉ) ಕೆಳಗಿನ ವಾಕ್ಯಗಳಲ್ಲಿ ಕೆಳಗೆರೆ ಎಳೆದ ಪದಗಳನ್ನು ಗಮನಿಸಿರಿ.**

೧. ರಾಜು ಹೊಸ ಬಟ್ಟೆ ಬೇಕು ಎಂದು ತನ್ನ ತಾಯಿಯನ್ನು ಕಾಡತೊಡಗಿದನು.

೨. ಮೇರಿಯು ತನ್ನ ತಂದೆಯ ಜೊತೆ ಕಾಡನ್ನು ನೋಡಲು ಹೋದಳು.

ಇಲ್ಲಿ 'ಕಾಡು' ಎನ್ನುವ ಪದಕ್ಕೆ ಎರಡೂ ವಾಕ್ಯಗಳಲ್ಲಿ ಬೇರೆ ಬೇರೆ ಅರ್ಥ ಇದೆ. ಇದೇ ರೀತಿಯ ಪದಗಳನ್ನು ಸ್ಮರಿಸಿ ಪ್ರತ್ಯೇಕ ವಾಕ್ಯಗಳನ್ನು ರಚಿಸಿ.

೧. ________________________________________

೨. ________________________________________

೧. ________________________________________

೨. ________________________________________

©KTBS Not to be republished

# ೨. ಹೊರ ಸಂಚಾರ

– ಸಂಗ್ರಹ

**ಪ್ರವೇಶ:** ಮಕ್ಕಳು ನಾಲ್ಕು ಗೋಡೆಗಳ ಮಧ್ಯದಲ್ಲಿ ಕಲಿಯುವುದಕ್ಕಿಂತಲೂ ಹೊರಗಿನ ಪರಿಸರದಲ್ಲಿ ಹೆಚ್ಚು ಹೆಚ್ಚು ಕಲಿಯುತ್ತಾರೆ. ವಿವಿಧ ದೃಶ್ಯಗಳನ್ನು ಕಂಡು ಸ್ವತಃ ಅನುಭವವನ್ನು ಪಡೆಯುತ್ತಾರೆ. ಸ್ನೇಹಿತರೊಂದಿಗೆ ಅಭಿಪ್ರಾಯಗಳನ್ನು ಹಂಚಿಕೊಳ್ಳುತ್ತಾರೆ. ಇತರರ ಅಭಿಪ್ರಾಯಗಳನ್ನು ಗೌರವಿಸುತ್ತಾರೆ. ಹಿರಿಯರು, ಗುರುಗಳು ವಹಿಸಿದ ಜವಾಬ್ದಾರಿಗಳನ್ನು ಉತ್ತಮವಾಗಿ ನಿರ್ವಹಿಸುವುದನ್ನು ರೂಢಿಸಿಕೊಳ್ಳುತ್ತಾರೆ. ಶಿಕ್ಷಕರ ಜೊತೆಯಲ್ಲಿ ಹೊರಸಂಚಾರ ಹೋಗಿದ್ದ ವಿದ್ಯಾರ್ಥಿಗಳ ಅನುಭವ ಹೇಗಿತ್ತು ಎನ್ನುವುದನ್ನು ಈ ಗದ್ಯ ಭಾಗವು ಒಳಗೊಂಡಿದೆ.

ಶಾಲೆಯ ಘಂಟೆ ಬಾರಿಸಿತು. ಪ್ರಾರ್ಥನೆ ಮಾಡಿದ ವಿದ್ಯಾರ್ಥಿಗಳು ಶಿಸ್ತಿನಿಂದ ಸಾಲಾಗಿ ನಡೆಯುತ್ತ ತಮ್ಮ ತರಗತಿಗಳಿಗೆ ಹೋದರು. ಏಳನೆಯ ತರಗತಿಯೊಳಗೆ ಶಿಕ್ಷಕರು ಆಗಮಿಸಿದರು.

**ಮಕ್ಕಳು** : ನಮಸ್ಕಾರ ಸರ್.

**ಶಿಕ್ಷಕರು** : ನಮಸ್ಕಾರ ಮಕ್ಕಳೇ, ಕುಳಿತುಕೊಳ್ಳಿ.

**ಶ್ರೇಯಸ್** : ಸರ್ ಇಂದು ಹೊರಸಂಚಾರಕ್ಕೆ ಹೋಗೋಣ ಅಂತಾ ಹೇಳಿದ್ರಲ್ಲ. ನಾವೆಲ್ಲ ರೆಡಿಯಾಗಿ ಬಂದಿದ್ದೀವಿ ಸರ್!

**ಶಿಕ್ಷಕರು** : ಹೌದು ಶ್ರೇಯಸ್ ನೆನಪಿದೆ. ಹಾಜರಿ ತೆಗೆದುಕೊಂಡ ನಂತರ ಹೊರಡೋಣ.

**ಮಕ್ಕಳು** : (ಸಂತೋಷದಿಂದ) ಆಯ್ತು ಸರ್!

(ಶಿಕ್ಷಕರು ಎಲ್ಲರ ಹೆಸರನ್ನು ಕರೆದು ಹಾಜರಿ ಪುಸ್ತಕದಲ್ಲಿ ಹಾಜರಿ ನಮೂದಿಸುತ್ತಾರೆ.)

**ಶಿಕ್ಷಕರು** : ಇಂದು ಒಬ್ಬರೂ ಶಾಲೆ ತಪ್ಪಿಸಿಲ್ಲ. ಎಲ್ಲರೂ ಹಾಜರಿದ್ದೀರಿ! ತುಂಬಾ ಸಂತೋಷ. ಮಕ್ಕಳೇ ಹೆಚ್ಚು ಗದ್ದಲ ಮಾಡಬೇಡಿ. ನಿಮ್ಮ ನಿಮ್ಮ ವಸ್ತುಗಳೊಂದಿಗೆ ನಿಧಾನವಾಗಿ ಹೊರಡಿ. ಜೊತೆಗೆ ಪೆನ್ನು, ಪುಸ್ತಕ ಕೊಂಡೊಯ್ಯುವುದನ್ನು ಮರೆಯಬೇಡಿ. ನಾನು ಹೇಳಿದ್ದ ಸೂಚನೆಗಳೆಲ್ಲವೂ ನೆನಪಿನಲ್ಲಿರಲಿ.

(ಶಿಕ್ಷಕರ ಮಾರ್ಗದರ್ಶನದಲ್ಲಿ ಎಲ್ಲ ವಿದ್ಯಾರ್ಥಿಗಳು ಎಚ್ಚರಿಕೆಯಿಂದ ಮುಂದೆ ಸಾಗುವರು)

**ರಹೀಮ** : (ಹುತ್ತವನ್ನು ತೋರಿಸುತ್ತಾ) ಸರ್, ಇಲ್ಲಿ ನೋಡಿ! ಎಷ್ಟು ದೊಡ್ಡ ಹುತ್ತ ಇದೆ ಇಲ್ಲಿ! ಇದನ್ನು ಹಾವು ಹೇಗೆ ಕಟ್ಟಿರಬಹುದು?

© KTBS Not to be republished



**ಶಿಕ್ಷಕರು** : ಹುತ್ತವನ್ನು ಮಣ್ಣಿನಲ್ಲಿರುವ ಗೆದ್ದಲು ಹುಳುಗಳು ಕಟ್ಟುತ್ತವೆ. ಅವುಗಳನ್ನು ತಿನ್ನಲು ಬಂದ ಹಾವು ಆ ಹುತ್ತದಲ್ಲಿ ವಾಸಿಸುತ್ತದೆ. ಬಹಳಷ್ಟು ಜನ ಇಂದಿಗೂ ಹುತ್ತವನ್ನು ಹಾವುಗಳು ಕಟ್ಟುತ್ತವೆಂದು ತಪ್ಪಾಗಿ ನಂಬಿದ್ದಾರೆ.

(ಮಕ್ಕಳು ಶಿಕ್ಷಕರ ವಿವರಣೆ ಕೇಳಿ ಇನ್ನಷ್ಟು ಅಚ್ಚರಿಯಿಂದ ಆ ಹುತ್ತವನ್ನು ಗಮನಿಸಿ ಮುಂದುವರೆಯುತ್ತಾರೆ)

**ಸಹನಾ** : ಸರ್, ಆ ಮರದಲ್ಲಿನ ಗೂಡುಗಳು ಎಷ್ಟು ಚೆನ್ನಾಗಿವೆ. ಯಾವ ಪಕ್ಷಿ ಈ ತರಹದ ಗೂಡನ್ನು ಕಟ್ಟುತ್ತದೆ ಸರ್?

**ತೇಜಸ್** : ಸರ್ ನಾನು ಹೇಳಲಾ?


**ಶಿಕ್ಷಕರು** : ಆಯ್ತು, ಹೇಳು ತೇಜಸ್.


**ತೇಜಸ್** : ಸರ್ ಅವು ಗೀಜಗನ ಗೂಡುಗಳು. ನಾನು ಟಿ.ವೀಲಿ ಇದರ ಬಗ್ಗೆ ನೋಡಿದ್ದೇನೆ ಸರ್. ಗುಬ್ಬಿಯ ತರಹವೇ ಇರುವ ಈ ಹಕ್ಕಿಯ ಮೈ ಹಳದಿ ಬಣ್ಣವಿದ್ದು ಕಪಾಲ ಕಪ್ಪು ಬಣ್ಣದ್ದಿರುತ್ತದೆ.

**ಸಹನಾ** : ಹೌದೇ? ಆದರೆ ಇದರ ಗೂಡು ಎಷ್ಟು ಅದ್ಭುತವಾಗಿದೆಯಲ್ಲವೇ?

©KTBS Not to be republished

**ಐಶ್ವರ್ಯ** : ಹೌದು ಸಹನಾ. ಇನ್ನೂ ವಿಶಿಷ್ಟವಾದ ವಿಷಯ ಅದು ಗೂಡನ್ನು ಕಟ್ಟುವ ರೀತಿ. ಎಲ್ಲೆಲ್ಲಿಂದಲೋ ಗೂಡಿಗೆ ಅಗತ್ಯವಾದ ವಸ್ತುಗಳನ್ನು ಜೋಡಿಸಿಕೊಂಡು ನಿರ್ದಿಷ್ಟ ವಿನ್ಯಾಸದಲ್ಲಿ ಗೂಡುಗಳನ್ನು ರೆಂಬೆಯೊಂದಕ್ಕೆ ಕಟ್ಟಿ ತೂಗು ಹಾಕಿವೆ. ಸಾಮಾನ್ಯವಾಗಿ ಯಾರ ಕೈಗೂ ಸಿಗದಂತಹ ಜಾಗದಲ್ಲಿ ಇವು ಗೂಡುಗಳನ್ನು ಕಟ್ಟುತ್ತವೆ.





(ಮಕ್ಕಳು ವಿಶಿಷ್ಟ ಆಕಾರದ ಗೂಡುಗಳನ್ನು ನೋಡಿ, ಚಿತ್ರ ಬರೆದುಕೊಂಡು ಮುಂದುವರೆಯುವರು)

**ಜಾನ್** : ಅರೆ! ಅಲ್ಲಿ ನೋಡಿ ಬಣ್ಣದ ಚಿಟ್ಟೆಗಳು! ಎಷ್ಟೊಂದು ಬಗೆಯ ಬಣ್ಣದ ಚಿಟ್ಟೆಗಳು ಇವೆ.

(ಎಲ್ಲ ಮಕ್ಕಳೂ ಚಿಟ್ಟೆಗಳು ಹಾರಾಡುತ್ತಿರುವ ಹೂಗಳ ಪೊದೆಗಳ ಬಳಿ ಹೋಗುವರು. ಅಷ್ಟರಲ್ಲಿ ಕುಹೂ ಕುಹೂ ಶಬ್ದ ಕೇಳಿಸುತ್ತದೆ)

**ರಾಜು** : ಓಹ್! ಅಲ್ಲಿ ನೋಡಿ ಕೋಗಿಲೆ! ಎಷ್ಟೊಂದು ಇಂಪಾಗಿ ಕೂಗುತ್ತಿದೆ. ಇಷ್ಟು ಹತ್ತಿರದಿಂದ ಕೋಗಿಲೆಯನ್ನು ನೋಡಿಯೇ ಇರಲಿಲ್ಲ.

**ಇಕ್ಬಾಲ್** : ಸರ್ ಅದು ಕಾಗೆ ತರಹ ಇದೆಯಲ್ಲಾ?

**ಶಿಕ್ಷಕರು** : ಇಕ್ಬಾಲ್, ಕೋಗಿಲೆ ರೂಪದಲ್ಲಿ ಕಾಗೆಯ ತರಹವೇ ಇರುತ್ತದೆ. ಆದರೆ ಕಾಗೆಗಿಂತ ಸ್ವಲ್ಪ ಚಿಕ್ಕದು. ಕೋಗಿಲೆಯ ಕೊಕ್ಕು ಉದ್ದವಾಗಿರುತ್ತದೆ. ಕೋಗಿಲೆ ರೈತರ ಬೆಳೆಗೆ ಹಾನಿ ತರುವ ಹುಳುಹುಪ್ಪಡಿಗಳನ್ನು ತಿನ್ನುವುದು. ಆದುದರಿಂದ ರೈತನ ಮಿತ್ರ ಎನಿಸಿದೆ.

**ಇಕ್ಬಾಲ್** : ಕೋಗಿಲೆ ಇಂಪಾಗಿ ಹಾಡುವುದು ಮಾತ್ರ ನಮಗೆ ಗೊತ್ತಿತ್ತು. ಎರೆಹುಳುವಿನ ರೀತಿ ಇದೂ ರೈತನ ಮಿತ್ರ ಎನ್ನುವ ವಿಷಯ ಇಂದು ತಿಳಿಯಿತು ಸರ್.

(ಮಕ್ಕಳೆಲ್ಲರೂ ಸ್ವಲ್ಪ ಹೊತ್ತು ಕೋಗಿಲೆಯ ದನಿ ಕೇಳಿ, ಮುಂದೆ ಸಾಗುವರು)

©KTBS Not to be republished

**ಸಹನಾ** : ಅಲ್ಲಿ ನೋಡಿ ಗುಬ್ಬಿ!

**ಶಿಕ್ಷಕರು** : ಹೌದು. ಊರ ಹೊರಗಿನ ಪ್ರಶಾಂತ ಜಾಗದಲ್ಲಿರುವ ಮರದ ಮೇಲೆ ಎಷ್ಟೊಂದು ಗುಬ್ಬಿಗಳಿವೆ! ಜನವಸತಿ ಪ್ರದೇಶಗಳಲ್ಲಿ ವಾಸಿಸುವ ಈ ಗುಬ್ಬಿಗಳು ಈಗ ಕಾಣೆಯಾಗುತ್ತಿವೆ.

**ಸಹನಾ** : ಮೊದಲು ಗುಬ್ಬಿಗಳು ನಮ್ಮ ಮನೆಯ ಬಳಿಯಲ್ಲೇ ಗೂಡುಕಟ್ಟಿಕೊಂಡು ವಾಸ ಮಾಡ್ತಾ ಇದ್ದವಂತೆ. ಮನೆಯ ಅಂಗಳಕ್ಕೆ ದವಸ ಧಾನ್ಯಗಳನ್ನು ತಿನ್ನಲು ಬರುತ್ತಿದ್ದವು ಅಂತ ನನ್ನ ಅಪ್ಪ ಹೇಳುತ್ತಾರೆ.

**ಶಿಕ್ಷಕರು** : ಹಿಂದೆ ಗುಬ್ಬಿ, ಪಾರಿವಾಳ ತರಹದ ಅನೇಕ ಪಕ್ಷಿಗಳು ಮನೆಯ ಸುತ್ತಲೂ ವಾಸವಾಗಿರುತ್ತಿದ್ದವು. ಹೆಚ್ಚುತ್ತಿರುವ ಅರಣ್ಯ ನಾಶ, ಪರಿಸರ ಮಾಲಿನ್ಯ ಮುಂತಾದ ಕಾರಣಗಳಿಂದ ಈ ತರಹದ ಪಕ್ಷಿಗಳು ಕಾಣೆಯಾಗುತ್ತಿವೆ.

**ಚೈತ್ರ** : ಅಯ್ಯೋ ಪಾಪ!

**ಮೇರಿ** : ಅಲ್ಲಿ ನೋಡಿ! ಜೇನುಗೂಡು ಎಷ್ಟು ದೊಡ್ಡದಿದೆ!

**ಸಹನಾ** : ಸರ್, ಅಲ್ನೋಡಿ.. ಹುಡುಗರು ಜೇನುಗೂಡಿಗೆ ಕಲ್ಲು ಹೊಡೆಯುತ್ತಿದ್ದಾರೆ.

**ಶಿಕ್ಷಕರು** : ಏಯ್ ಮಕ್ಕಳೇ, ನಿಲ್ಲಿ ಜೇನುಗೂಡಿಗೆ ಕಲ್ಲು ಹೊಡೆಯಬಾರದು. ಜೇನು ಹುಳುಗಳು ತುಂಬಾ ದೂರದವರೆಗೆ ಹೋಗಿ ಬಗೆಬಗೆಯ ಪುಷ್ಪಗಳಿಂದ ಮಕರಂದ ತರುತ್ತವೆ. ಗೂಡನ್ನು ಮೇಲಿನಿಂದ ಕೆಳಕ್ಕೆ ಕಟ್ಟುತ್ತವೆ. ಅಲ್ಲದೆ ಅದರಲ್ಲಿ ನೂರಾರು ಕೋಣೆಗಳಿರುತ್ತವೆ. ರಾಣಿಜೇನು ಹಾಗೂ ಸದಾ ಕೆಲಸ ಮಾಡುವ ಕೆಲಸಗಾರ ಹುಳುಗಳೂ ಇರುತ್ತವೆ.

**ಕಾವ್ಯ** : ಸರ್, ನಮ್ಮ ಮನೆಯಲ್ಲಿ ಜೇನುತುಪ್ಪ ಇದೆ. ನಾನು ದಿನಾಲು ಅದನ್ನು ಸೇವಿಸುತ್ತೇನೆ. ಅದು ತುಂಬಾ ಸಿಹಿಯಾಗಿರುತ್ತದೆ.

**ಶಿಕ್ಷಕರು** : ಹೌದು ಕಾವ್ಯ. ಜೇನುತುಪ್ಪ ಬಹಳ ಪುಷ್ಟಿಕರ.


(ಮಾತನಾಡುತ್ತ ಮಕ್ಕಳು ಇನ್ನಷ್ಟು ದೂರ ಸಾಗುತ್ತಾರೆ)

**ಪೀಟರ್** : ಅಲ್ಲಿ ನೋಡಿ. ಎಷ್ಟು ದೊಡ್ಡ ಆಲದ ಮರ!

**ಶಿಕ್ಷಕರು** : (ಅದರ ಬಿಳಲುಗಳನ್ನು ತೋರಿಸುತ್ತಾ) ನೋಡಿ ಇವು ಬಿಳಲುಗಳು. ಮುಂದೆ ಇವು ನೆಲಕ್ಕೆ ಇಳಿದು ಬೇರುಗಳಾಗಿ ಅವು ಒಂದೊಂದು ಆಲದ ಮರಗಳಾಗುತ್ತವೆ. ಅನೇಕ ಪ್ರಾಣಿ ಪಕ್ಷಿಗಳಿಗೆ ಆಶ್ರಯ ನೀಡುತ್ತವೆ.

**ಚೈತ್ರ** : ಸರ್, ಈ ಮರದ ನೆರಳಲ್ಲೇ ಊಟ ಮಾಡೋಣವೇ? ನನಗೆ ಆಗಲೇ ಹೊಟ್ಟೆ ತಾಳಹಾಕುತ್ತಿದೆ.

©KTBS Not to be republished



**ಶಿಕ್ಷಕರು** : (ನಗುತ್ತಾ) ಆಯ್ತು ಚೈತ್ರ. ಎಲ್ಲರೂ ಮರದ ನೆರಳಿಗೆ ಬನ್ನಿ. ನೀವು ತಂದ ತಿಂಡಿ–ತಿನಿಸನ್ನು ಹಂಚಿಕೊಂಡು ನಿಧಾನವಾಗಿ ತಿನ್ನಿ. ನೀರನ್ನು ಹೆಚ್ಚು ಚೆಲ್ಲದೆ, ಮಿತವಾಗಿ ಬಳಸಿ.

**ಮಕ್ಕಳು** : ಹಾಗೇ ಆಗಲಿ ಸರ್.

(ಮಕ್ಕಳೆಲ್ಲರೂ ಮರದ ನೆರಳಿನಲ್ಲಿ ಕುಳಿತು ತಾವು ತಂದ ತಿಂಡಿ ತಿನಿಸುಗಳನ್ನು ಹಂಚಿಕೊಂಡು ತಿಂದರು. ಅನಂತರ ಪ್ರವಾಸದ ಅನುಭವಗಳನ್ನು ಸ್ಮರಿಸುತ್ತ ಶಾಲೆಗೆ ಹಿಂತಿರುಗಿದರು.)

**ಕ್ಷೇತ್ರ :** ಮಾತನಾಡುವುದು.

**ಸಾಮರ್ಥ್ಯ :** ಸರಿಯಾದ ಉಚ್ಚಾರಣೆಯೊಂದಿಗೆ ನಿರರ್ಗಳವಾಗಿ ಮಾತನಾಡುವುದು.

## ಪದಗಳ ಅರ್ಥ

ಅಚ್ಚರಿ – ಆಶ್ಚರ್ಯ; ದಿನಾಲು – ಪ್ರತಿದಿನ;

ಆಶ್ರಯ – ಆಸರೆ; ಪುಷ್ಪ–ಹೂವು;

ಗದ್ದಲ – ಗಲಾಟೆ ; ಬಿಳಲು – ಮರದಿಂದ ಕೆಳಮುಖವಾಗಿ ಹೊರಟ ಬೇರುಗಳು.

©KTBS Not to be republished

## ಅಭ್ಯಾಸ

**ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದು ವಾಕ್ಯದಲ್ಲಿ ಉತ್ತರಿಸಿರಿ :**

೧. ಶಿಕ್ಷಕರು ಮಕ್ಕಳನ್ನು ಎಲ್ಲಿಗೆ ಕರೆದುಕೊಂಡು ಹೋಗುತ್ತೇನೆಂದು ಹೇಳಿದ್ದರು?

________________________________________

೨. ಮಕ್ಕಳು ಯಾರ ಮಾರ್ಗದರ್ಶನದಲ್ಲಿ ಹೊರಸಂಚಾರ ಹೊರಟಿದ್ದರು?

________________________________________

೩. ಹುತ್ತವನ್ನು ಯಾವ ಹುಳುಗಳು ನಿರ್ಮಿಸುತ್ತವೆ?

________________________________________

೪. ಗೀಜಗ ಯಾವ ಪಕ್ಷಿಯ ತರಹ ಇದೆ?

________________________________________

೫. ಕೋಗಿಲೆ ಹೇಗೆ ಕೂಗುತ್ತದೆ?

________________________________________

೬. ಜೇನುಹುಳುಗಳು ಹೇಗೆ ಗೂಡು ಕಟ್ಟುತ್ತವೆ?

________________________________________

೭. ಬಿಳಲುಗಳನ್ನು ಹೊಂದಿರುವ ಮರ ಯಾವುದು?

________________________________________

೮. ಹೊರಸಂಚಾರ ಹೊರಟವರೆಲ್ಲರೂ ಎಲ್ಲಿ ಕುಳಿತು ವಿಶ್ರಾಂತಿ ಪಡೆದರು?

________________________________________

©KTBS Not to be republished

ಆ) ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಗೀಜಗಗಳನ್ನು ಸುಲಭವಾಗಿ ಹೇಗೆ ಗುರುತಿಸಬಹುದು?

___

___

೨. ಜೇನು ಗೂಡಿಗೆ ಕಲ್ಲು ಹೊಡೆಯಬಾರದು ಏಕೆ?

___

___

೩. ಗೀಜಗಗಳು ಹೇಗೆ ಗೂಡು ಕಟ್ಟುತ್ತವೆ?

___

___

ಇ) ಕೆಳಗಿನ ವಾಕ್ಯಗಳನ್ನು ಯಾರು ಯಾರಿಗೆ ಹೇಳಿದರು?

೧. "ಇದರ ಗೂಡು ಎಷ್ಟು ಅದ್ಭುತವಾಗಿದೆಯಲ್ಲವೇ?"

___

___

೨. "ಅಲ್ಲಿ ನೋಡಿ ಕೋಗಿಲೆ! ಎಷ್ಟೊಂದು ಇಂಪಾಗಿ ಕೂಗುತ್ತಿದೆ."

___

___

೩. "ಜೇನುತುಪ್ಪ ಬಹಳ ಪುಷ್ಟಿಕರ."

___

___

©KTBS Not to be republished

ಈ) ಖಾಲಿ ಬಿಟ್ಟಿರುವ ಸ್ಥಳಗಳಲ್ಲಿ ಸೂಕ್ತವಾದ ಉತ್ತರವನ್ನು ಆವರಣದಲ್ಲಿ ಕೊಟ್ಟಿರುವ ಪದಗಳಿಂದ ಆರಿಸಿ ಭರ್ತಿಮಾಡಿರಿ.

೧. ಹುತ್ತವನ್ನು ಮಣ್ಣಿನಿಂದ ಕಟ್ಟುವ ಹುಳು ______________

(ಇರುವೆ, ಎರೆಹುಳು, ಗೆದ್ದಲು)

೨. ಕೋಗಿಲೆಯು ಆಕಾರದಲ್ಲಿ ಈ ಪಕ್ಷಿಯ ತರಹವೇ ಇರುತ್ತದೆ______________

(ಕಾಗೆ, ನವಿಲು, ಪಾರಿವಾಳ)

೩. ಬಿಳಲುಗಳನ್ನು ಹೊಂದಿರುವ ಮರ ______________

(ಮಾವಿನ ಮರ, ಆಲದ ಮರ, ತೆಂಗಿನ ಮರ)

ಉ) ಜೀವಿಗಳ ಹೆಸರನ್ನು ಅವುಗಳ ವಿವರಗಳೊಂದಿಗೆ ಹೊಂದಿಸಿ ಬರೆಯಿರಿ.

| ಜೀವಿಗಳ ಹೆಸರು | ವಿವರ |
|---|---|
| ೧. ಕೋಗಿಲೆ | ಅ. ಮನೆಯಂಗಳದ ಪಕ್ಷಿ |
| ೨. ಗೆದ್ದಲು | ಆ. ಹೂವಿನಿಂದ ಮಕರಂದ ಹೀರುವುದು |
| ೩. ಗೀಜಗ | ಇ. ಹುತ್ತವನ್ನು ಕಟ್ಟುತ್ತದೆ |
| ೪. ಜೇನುಹುಳು | ಈ. ಕುಹೂ ಕುಹೂ ಕೂಗುವುದು |
| | ಉ. ಸುಂದರವಾದ ಗೂಡು ಕಟ್ಟುವುದು |

ಉತ್ತರ

೧______________________________

೨______________________________

೩______________________________

೪______________________________

©KTBS Not to be republished

## ಭಾಷಾಭ್ಯಾಸ

**ಅ) ಕೆಳಗೆ ಕೊಟ್ಟಿರುವ ಪದಗಳನ್ನು ಬಳಸಿಕೊಂಡು ವಾಕ್ಯ ರಚನೆ ಮಾಡಿರಿ.**

೧. ಇಂಪು : ________________________________

೨. ರೈತನಮಿತ್ರ : ________________________________

೩. ಜೇನುತುಪ್ಪ : ________________________________

**ಆ) ಮಾದರಿಯಂತೆ ಕೂಡಿಸಿ ಬರೆಯಿರಿ.**

**ಮಾದರಿ :** ಕರು+ಅನ್ನು = ಕರುವನ್ನು

೧. ಹುತ್ತ+ಅನ್ನು = __________

೨. ಕೋಗಿಲೆ+ಅನ್ನು= __________

೩. ಮನೆ+ಅನ್ನು = __________

**ಇ) ಕೆಳಗೆ ಕೊಟ್ಟಿರುವ ನುಡಿಗಟ್ಟನ್ನು ಗಮನಿಸಿ. ಶಿಕ್ಷಕರ ಸಹಾಯದಿಂದ ಇನ್ನಷ್ಟು ನುಡಿಗಟ್ಟುಗಳನ್ನು ಸಂಗ್ರಹಿಸಿ, ಅವುಗಳ ಅರ್ಥ ತಿಳಿದುಕೊಳ್ಳಿರಿ.**

೧. ಹೊಟ್ಟೆ ತಾಳಹಾಕು

## ಭಾಷಾ ಚಟುವಟಿಕೆ

ಅ) ನಿಮ್ಮ ಮನೆಯ ಸುತ್ತ ಮುತ್ತ ಕಾಣುವಂತಹ ಪ್ರಾಣಿ, ಪಕ್ಷಿಗಳ ಚಿತ್ರಗಳನ್ನು ಸಂಗ್ರಹಿಸಿರಿ. ಅವುಗಳ ಹೆಸರನ್ನು ಬರೆಯಿರಿ.

ಆ) ಮಾವಿನ ಮರದ ಬಗ್ಗೆ, ಚಿಟ್ಟೆಯ ಬಗ್ಗೆ ಪದ್ಯಗಳನ್ನು ಸಂಗ್ರಹಿಸಿ.

ಇ) ಹೊರಸಂಚಾರ ಹೋಗಿಬಂದ ಬಗ್ಗೆ ಐದಾರು ವಾಕ್ಯಗಳನ್ನು ಬರೆಯಿರಿ.

©KTBS Not to be republished

ಈ) ಇವುಗಳನ್ನು ನೀವೇ ಎಂದು ಭಾವಿಸಿ ಮಾತನಾಡಿರಿ.

೧. ಜೇನುತುಪ್ಪ　　೨. ಮಾವಿನಮರ

ಉ) ಮೊದಲೆರಡು ಪದಗಳಿಗೆ ಸಂಬಂಧಿಸಿದಂತೆ, ಮೂರನೇ ಪದಕ್ಕೆ ಸರಿಹೊಂದುವ ಪದವನ್ನು ಆವರಣದಿಂದ ಆರಿಸಿ ಬರೆಯಿರಿ. (ಗೂಡು, ಹುತ್ತ, ಬಿಲ, ಕೊಟ್ಟಿಗೆ)

೧. ಸಿಂಹ : ಗುಹೆ :: ಇಲಿ : ___________

೨. ಗೂಬೆ : ಪೊಟರೆ :: ಗುಬ್ಬಿ : ___________

೩. ಕುದುರೆ : ಲಾಯ :: ದನ : ___________

೪. ಮನುಷ್ಯ : ಮನೆ :: ಹಾವು : ___________

## ವ್ಯಾಕರಣ

### ಭಾಗ– 'ಅ'

ಹಿಂದಿನ ತರಗತಿಯಲ್ಲಿ ಈಗಾಗಲೇ ಕನ್ನಡ ವರ್ಣಮಾಲೆಯ ಬಗ್ಗೆ ತಿಳಿದಿದ್ದೀರಿ.

### ಕನ್ನಡ ವರ್ಣಮಾಲೆ

#### ಸ್ವರಗಳು= ೧೩

ಅ ಆ ಇ ಈ ಉ ಊ ಋ ಎ ಏ ಐ ಒ ಓ ಔ

(ಸ್ವತಂತ್ರವಾಗಿ, ಸ್ಪಷ್ಟವಾಗಿ ಉಚ್ಚರಿಸುವ ಅಕ್ಷರಗಳು)

### ಹ್ರಸ್ವಸ್ವರ ಹಾಗೂ ದೀರ್ಘಸ್ವರ

ಒಂದು ಮಾತ್ರಾ ಕಾಲದಲ್ಲಿ ಉಚ್ಚರಿಸುವ ಅಕ್ಷರಗಳನ್ನು **ಹ್ರಸ್ವಸ್ವರ** ಎನ್ನುವರು.

ಉದಾಹರಣೆ : ಅ, ಇ, ಉ, ಋ, ಎ, ಒ.

ಎರಡು ಮಾತ್ರಾ ಕಾಲದಲ್ಲಿ ಉಚ್ಚರಿಸುವ ಅಕ್ಷರಗಳನ್ನು **ದೀರ್ಘಸ್ವರ** ಎನ್ನುವರು.

ಉದಾಹರಣೆ : ಆ, ಈ, ಊ, ಏ, ಐ, ಓ, ಔ.

#### ಯೋಗವಾಹಗಳು – ೨

ಅನುಸ್ವಾರ (ಂ) ವಿಸರ್ಗ (ಃ)

(ಅಕ್ಷರದ ಸಂಬಂಧದಿಂದ ಮಾತ್ರವೇ ಉಚ್ಚರಿಸಲಾಗುವ ಅಕ್ಷರಗಳು)

©KTBS Not to be republished

## ವ್ಯಂಜನಗಳು=೩೪

## ವರ್ಗೀಯ ವ್ಯಂಜನಗಳು=೨೫

| | | |
|---|---|---|
| ಕ್ ಖ್ ಗ್ ಘ್ ಙ್ | – ಕವರ್ಗ | – ೫ |
| ಚ್ ಛ್ ಜ್ ಝ್ ಞ್ | – ಚವರ್ಗ | – ೫ |
| ಟ್ ಠ್ ಡ್ ಢ್ ಣ್ | – ಟವರ್ಗ | – ೫ |
| ತ್ ಥ್ ದ್ ಧ್ ನ್ | – ತವರ್ಗ | – ೫ |
| ಪ್ ಫ್ ಬ್ ಭ್ ಮ್ | – ಪವರ್ಗ | – ೫ |

## ಅವರ್ಗೀಯ ವ್ಯಂಜನಗಳು=೯

ಯ್ ರ್ ಲ್ ವ್ ಶ್ ಷ್ ಸ್ ಹ್ ಳ್

(ಸ್ವರಗಳ ಸಹಾಯದಿಂದ ಮಾತ್ರ ಉಚ್ಚರಿಸಲು ಸಾಧ್ಯವಾಗುವ ಅಕ್ಷರಗಳು)

ಕನ್ನಡ ಭಾಷೆಯಲ್ಲಿ ಒಟ್ಟು ೪೯ ಮೂಲಾಕ್ಷರಗಳಿವೆ.

### ಭಾಗ– 'ಆ'

**ಅ) ಕೆಳಗಿನ ಹೇಳಿಕೆಗಳಿಗೆ ಸರಿ ಹೊಂದುವ ಸೂಕ್ತ ಉತ್ತರವನ್ನು ಗುರುತಿಸಿ ಬರೆಯಿರಿ.**

೧. ಕನ್ನಡ ವರ್ಣಮಾಲೆಯಲ್ಲಿ ಎಷ್ಟು ಮೂಲಾಕ್ಷರಗಳಿವೆ?

ಅ) ನಲವತ್ತು ಆ) ಇಪ್ಪತ್ತಾರು ಇ) ಅರವತ್ತು ಈ) ನಲವತ್ತೊಂಬತ್ತು.

೨. ಅ, ಇ, ಉ, ಋ, ಎ ಇವು

ಅ) ವ್ಯಂಜನಗಳು ಆ) ಸ್ವರಗಳು ಇ) ಅನುನಾಸಿಕಗಳು ಈ) ಯೋಗವಾಹಗಳು

೩. ಹ್ರಸ್ವಸ್ವರಕ್ಕೆ ಉದಾಹರಣೆ

ಅ) ಈ ಆ) ಇ ಇ) ಖ್ ಈ) ಜ

**ಆ) ಕೆಳಗೆ ಕೊಟ್ಟಿರುವ ಹ್ರಸ್ವ ಹಾಗೂ ದೀರ್ಘಸ್ವರಗಳನ್ನು ವಿಂಗಡಿಸಿ ಬರೆಯಿರಿ.**

ಅ, ಆ, ಇ, ಈ, ಉ, ಊ, ಋ, ಎ, ಏ, ಐ, ಒ, ಓ, ಔ.

©KTBS Not to be republished

ಹ್ರಸ್ವಸ್ವರಗಳು | ದೀರ್ಘಸ್ವರಗಳು

______________ ______________

______________ ______________

______________ ______________

ಇ) ಕೆಳಗಿನ ಪದಗಳ ವರ್ಗೀಯ ವ್ಯಂಜನಗಳನ್ನು ಗುರುತಿಸಿ ಬರೆಯಿರಿ.

ಹೇಳಿಕೆ, ದೆಹಲಿ, ಸಮಯ, ನೂರಾರು.

ಈ) ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಸೂಕ್ತ ಉತ್ತರ ಬರೆಯಿರಿ.

೧. ವ್ಯಂಜನಗಳಲ್ಲಿ ಎಷ್ಟು ವಿಧ?

______________________________

೨. ಮೂಗಿನ ಸಹಾಯದಿಂದ ಉಚ್ಚರಿಸುವ ಅಕ್ಷರಗಳಿಗೆ ಏನೆಂದು ಕರೆಯುವರು?

______________________________

೩. ಕನ್ನಡ ವರ್ಣಮಾಲೆಯಲ್ಲಿ 'ಯ್' ಯಿಂದ 'ಳ್' ವರಗಿನ ಅಕ್ಷರಗಳನ್ನು ಏನೆಂದು ಕರೆಯುತ್ತಾರೆ?


______________________________

©KTBS Not to be republished

# ೩. ಬಣ್ಣದ ಟಿ.ವಿ.

**–ಚಂದ್ರಗೌಡ ಕುಲಕರ್ಣಿ**

**ಪ್ರವೇಶ:** ಟಿ.ವಿ. ಎಂದೇ ಜನಪ್ರಿಯವಾಗಿರುವ ದೂರದರ್ಶನವು ಎಲ್ಲಾ ವಯೋಮಾನದವರನ್ನೂ ಮೋಡಿಗೊಳಿಸಿದೆ. ಹಸಿವು, ನಿದ್ರೆ, ಬಾಯಾರಿಕೆ, ಆಟ, ಪಾಠ, ಮಕ್ಕಳ ಪಾಲನೆ, ಆತಿಥ್ಯ ಎಲ್ಲವನ್ನೂ ಮರೆಯುವಂತೆ ಮಾಡಿಬಿಟ್ಟಿದೆ. ಆಬಾಲವೃದ್ಧರೆಲ್ಲರಿಗೂ ಜೀವಕ್ಕಿಂತ ಮಿಗಿಲೆನಿಸಿದೆ. ಟಿ.ವಿ ವೀಕ್ಷಣೆಯಲ್ಲಿ ಮಗ್ನರಾಗುವುದರಿಂದ ಅಮೂಲ್ಯ ಸಮಯವು ಹೇಗೆ ವ್ಯರ್ಥವಾಗುತ್ತಿದೆ, ಕೌಟುಂಬಿಕ ಚಟುವಟಿಕೆಗಳ ಮೇಲೆ ಹೇಗೆ ಪ್ರಭಾವ ಬೀರುತ್ತಿದೆ ಎನ್ನುವ ವಿಚಾರಗಳನ್ನು ಈ ಕವನವು ಹೇಳುತ್ತದೆ.



©KTBS Not to be republished

ಬಣ್ಣದ ಚಿತ್ರದ ಟಿ.ವಿ. ಪೆಟ್ಟಿಗೆ
ಮೌನವ ತಂದಿತು ಮನೆಗೆಲ್ಲ
ಅಪ್ಪ ಅಮ್ಮಗೆ ಏನೇ ಕೇಳಲು
ನನ್ನಯ ಮಾತಿಗೆ ಬೆಲೆಯಿಲ್ಲ ॥೧॥

ಪುಟ್ಟ ತಂಗಿ ತೊಟ್ಟಿಲಲತ್ತರು
ಅಮ್ಮ ಎದ್ದು ನೋಡೊಲ್ಲ
ಬೆಕ್ಕು ಬಂದು ಹಾಲು ಕುಡಿದರೂ
ಯಾರೂ ಈಗ ಕೇಳೊಲ್ಲ ॥೨॥

ನೆಂಟರು ಬಂದರು ತುಂಟರು ಕಲೆತರು
ಹರಟೆಯ ಮಾತು ನಡೆಯೊಲ್ಲ
ಯಾರೆ ಇರಲಿ ಕುಳಿತೇ ಬಿಡುವರು
ತುಟಿಗಳ ಹೊಲಿಗೆ ಬಿಚ್ಚೊಲ್ಲ ॥೩॥

ಹೂವಿನ ತೋಟಕೆ ನೀರನು ಹಾಕಲು
ಯಾರೂ ಈಗ ದಿಕ್ಕಿಲ್ಲ
ಕತೆಯನು ಹೇಳುವ ಪ್ರೀತಿಯ ತೋರುವ
ಅಜ್ಜಿಗೆ ಈಗ ಬಿಡುವಿಲ್ಲ ॥೪॥

ಬೆಳಗೂ ಬೈಗು ನೋಡುತ ಕುಳಿತರು
ಎನಿತು ಇವರಿಗೆ ದಣಿವಿಲ್ಲ
ಮಾತೆ ಇಲ್ಲ ಮೌನವೇ ತುಂಬಿದೆ
ಏಕೋ ಏನೋ ಗೊತ್ತಿಲ್ಲ ॥೫॥

**ಕ್ಷೇತ್ರ :** ಮಾತನಾಡುವುದು
**ಸಾಮರ್ಥ್ಯ :** ಪರಿಚಿತ ವಸ್ತುಗಳ ಬಗ್ಗೆ ವಿವರಿಸುವುದು.



**ಕೃತಿಕಾರರ ಪರಿಚಯ:**

ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕಿನ ಕರದಳ್ಳಿಯಲ್ಲಿ ೧೯೫೫ರಲ್ಲಿ ಜನಿಸಿದ ಚಂದ್ರಗೌಡ ಕುಲಕರ್ಣಿಯವರು ತಾಳಿಕೋಟೆಯ ಎಸ್. ಕೆ. ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಸಹಪ್ರಾಧ್ಯಾಪಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಇವರು 'ಬೆಣ್ಣೆ ಹಳ್ಳ', 'ಒಗಟು ಬಿಡಿಸೋ ಜಾಣ', 'ಟಿಂಟಿಂ ಚುಟುಕು', 'ಟೂಟೂ ಬಿಟ್ಟೇನಿ' ಇತ್ಯಾದಿ ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಮಕ್ಕಳ ಸಾಹಿತ್ಯ ಹಾಗೂ ಜಾನಪದದಲ್ಲಿ ಆಸಕ್ತಿ ಹೊಂದಿರುವ ಇವರು ೧೯೯೭ರಲ್ಲಿ ಸಾಹಿತ್ಯ ಅಕಾಡೆಮಿಯ ಮಕ್ಕಳ ಸಾಹಿತ್ಯ ಪ್ರಶಸ್ತಿಗೆ ಭಾಜನರಾಗಿದ್ದಾರೆ.

©KTBS
Not to be republished

## ಪದಗಳ ಅರ್ಥ

ಎನಿತು–ಎಷ್ಟು;
ಕಲೆತರು–ಸೇರಿದರು;
ತುಂಟ–ತಂಟೆಕೋರ;
ತೋರುವ–ತೋರಿಸುವ;
ದಣಿವು–ಆಯಾಸ, ಸುಸ್ತು;
ದಿಕ್ಕಿಲ್ಲ–ಗತಿ ಇಲ್ಲದ, ಅನಾಥವಾದ;
ನಡೆಯೊಲ್ಲ–ಸಾಧ್ಯವಾಗುವುದಿಲ್ಲ;
ನೆಂಟರು–ಬಂಧುಗಳು, ಸಂಬಂಧಿಕರು;
ಬಿಡುವು–ರಜೆ;
ಬಿಚ್ಚೊಲ್ಲ–ಬಿಚ್ಚುವುದಿಲ್ಲ;
ಬೆಳಗು–ಬೆಳಗ್ಗೆ;
ಬೈಗು–ಸಂಜೆ;
ಮೌನ–ಮಾತಿಲ್ಲದಿರುವಿಕೆ;
ಹರಟೆ–ಉಪಯೋಗಕ್ಕೆ ಬಾರದ ಮಾತು, ಸರಸ ಸಲ್ಲಾಪ.

## ಅಭ್ಯಾಸ

**ಅ) ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. ಮನೆಗೆಲ್ಲಾ ಮೌನವನ್ನು ತಂದಿರುವುದು ಯಾವುದೆಂದು ಕವಿ ಕುಲಕರ್ಣಿಯವರು ಹೇಳಿದ್ದಾರೆ?

______________________________

೨. ಚಂದ್ರಗೌಡರು ತಿಳಿಸಿರುವಂತೆ ತೊಟ್ಟಿಲಲ್ಲಿ ಪುಟ್ಟ ತಂಗಿ ಅತ್ತರೂ ಅಮ್ಮ ನೋಡುವುದಿಲ್ಲ ಏಕೆ?

______________________________

೩. ಟಿ.ವಿ.ಯ ದೆಸೆಯಿಂದ ಯಾರ ನಡುವೆ ಹರಟೆ ಮಾತು ನಡೆಯುತ್ತಿಲ್ಲ?

______________________________

೪. ಎಲ್ಲವನ್ನೂ ಮರೆತು ಮನೆಮಂದಿಯಲ್ಲಾ ಏನು ಮಾಡುತ್ತಾರೆಂದು ಕುಲಕರ್ಣಿಯವರು ಹೇಳಿದ್ದಾರೆ?

______________________________

©KTBS Not to be republished

೫.‘ಬಣ್ಣದ ಟಿ.ವಿ.’ ಪದ್ಯವನ್ನು ಬರೆದ ಕವಿ ಯಾರು?

______________________________

**ಆ) ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಮನೆಗೆ ಟಿ.ವಿ. ಬಂದಿದ್ದರಿಂದ ಉಂಟಾಗಿರುವ ತೊಂದರೆಗಳು ಯಾವುವು ಎಂದು ‘ಬಣ್ಣದ ಟಿ.ವಿ.’ ಪದ್ಯದಲ್ಲಿ ಕವಿ ಹೇಳಿದ್ದಾರೆ?

______________________________

______________________________

______________________________

೨. ಮನೆಯಲ್ಲಿ ಮೌನವೇ ತುಂಬಿಕೊಂಡಿದೆ ಎಂದು ಚಂದ್ರಗೌಡರು ಏಕೆ ಹೇಳಿದ್ದಾರೆ?

______________________________

______________________________

______________________________

**ಇ) ಶಿಕ್ಷಕರ ನೆರವಿನಿಂದ ಈ ಪದ್ಯಭಾಗವನ್ನು ಗದ್ಯರೂಪದಲ್ಲಿ ಬರೆಯಿರಿ.**

ಪುಟ್ಟ ತಂಗಿ ತೊಟ್ಟಿಲಲತ್ತರು
ಅಮ್ಮ ಎದ್ದು ನೋಡೊಲ್ಲ
ಬೆಕ್ಕು ಬಂದು ಹಾಲು ಕುಡಿದರೂ
ಯಾರೂ ಈಗ ಕೇಳೊಲ್ಲ

______________________________

______________________________

______________________________

______________________________

______________________________

## ಭಾಷಾಭ್ಯಾಸ

**ಅ) ಎರಡು ಪದಗಳನ್ನು ಸೇರಿಸಿದಾಗ ಆಗುವ ಪದಗಳನ್ನು ಗಮನಿಸಿ ಬರೆಯಿರಿ.**

೧. ದಣಿವು + ಇಲ್ಲ – ದಣಿವಿಲ್ಲ
೨. ಮಾಡು + ಇಲ್ಲ – ಮಾಡಿಲ್ಲ
೩. ಗೊತ್ತು + ಇಲ್ಲ – ಗೊತ್ತಿಲ್ಲ
೪. ದಿಕ್ಕು + ಇಲ್ಲ – ದಿಕ್ಕಿಲ್ಲ

©KTBS Not to be republished

**ಆ) ಕೆಳಗಿನ ವಾಕ್ಯಗಳನ್ನು ಗಮನಿಸಿರಿ. ಇವುಗಳ ಅರ್ಥ ಗ್ರಹಿಸಿ ಬರೆಯಿರಿ.**

೧. ತುಟಿಗಳ ಹೊಲಿಗೆ ಬಿಚ್ಚೊಲ್ಲ

೨. ನನ್ನಯ ಮಾತಿಗೆ ಬೆಲೆಯಿಲ್ಲ

**ಇ) ಕೆಳಗಿನ ವಾಕ್ಯಗಳಲ್ಲಿ ತಪ್ಪಾಗಿರುವ ಪದಗಳಿಗೆ ಅಡಿಗೆರೆ ಹಾಕಿ ಸರಿಯಾದ ರೂಪವನ್ನು ಬರೆಯಿರಿ.**

೧. ಮೌನವ ತಂದಿತು ಮನೆಗೆಲ್ಲ.

೨. ನನ್ನಯ ಮಾತಿಗೆ ಬೆಲೆಯಿಲ್ಲ.

೩. ಹರಟೆಯ ಮಾತು ನಡೆಯೊಲ್ಲ.

೪. ತುಟಿಗಳ ಹೊಲಿಗೆ ಬಿಚ್ಚೊಲ.

## ಭಾಷಾ ಚಟುವಟಿಕೆ

**ಅ) ಕೆಳಗಿನ ವಾಕ್ಯಗಳನ್ನು ಮಾದರಿಯಂತೆ ಬದಲಾಯಿಸಿ ಬರೆಯಿರಿ.**

ಮಾದರಿ : ಊಟ ಮಾಡುತ್ತೇನೆ – ಊಟ ಮಾಡೊಲ್ಲ

೧. ಹಾಲು ಕುಡಿಯುತ್ತೇನೆ – ______________________

೨. ಆಟ ಆಡುತ್ತೇನೆ – ______________________

೩. ಹಠ ಮಾಡುತ್ತೇನೆ – ______________________

**ಆ) ಕೆಳಗೆ ಕೊಟ್ಟಿರುವ ವಿಷಯದ ಬಗ್ಗೆ ಎರಡು ಸಾಲುಗಳಲ್ಲಿ ಬರೆಯಿರಿ.**

೧. ಕ್ರಿಕೆಟ್ ಆಟದ ಬ್ಯಾಟ್ – ______________________

______________________

೨. ಗಾಳಿಪಟ – ______________________

______________________

©KTBS Not to be republished

೩. ಬಾವಿ – ______________________________

______________________________

೪. ಬೈಸಿಕಲ್ – ______________________________

______________________________

**ಇ) ನನ್ನ ಮೆಚ್ಚಿನ ಸಿಹಿ ತಿನಿಸು – ಈ ವಿಷಯ ಕುರಿತು ಐದು ವಾಕ್ಯಗಳನ್ನು ಬರೆಯಿರಿ.**

________________________________________

________________________________________

________________________________________

________________________________________

________________________________________

**ಈ) ಕೆಳಗಿನ ಒಗಟುಗಳನ್ನು ಬಿಡಿಸಿ ಖಾಲಿ ಸ್ಥಳದಲ್ಲಿ ಬರೆಯಿರಿ.**

೧. ಮರದೊಳಗೆ ಮರ ಹುಟ್ಟಿ
ಮರ ಚಿತ್ರ ಕಾಯಾಗಿ
ತಿನ್ನಬಾರದ ಹಣ್ಣು ಬಲು ರುಚಿ _______________

೨. ಅಡವಿಯಲ್ಲಿ ಹುಟ್ಟಿದ ಗಿಡ ಗೋಪಾಲ,
ನಿನಗೆ ಯಾರಿಟ್ಟರು ಸಾದಿನ ಚುಕ್ಕೆ? _______________

©KTBS Not to be republished

# ೪. ಅತಿ ಆಸೆ ಗತಿಕೇಡು

–ಎಚ್. ಆರ್. ಚಂದ್ರವದನರಾವ್


**ಪ್ರವೇಶ:** ಪರಿಸರ ವ್ಯವಸ್ಥೆ ಸಾಮಾನ್ಯವಾಗಿ ಒಂದು ಅಸಂಖ್ಯಾತ ಆಹಾರ ಜಾಲಗಳನ್ನು ರೂಪಿಸುತ್ತವೆ. ಮನುಷ್ಯ, ವನ್ಯಪ್ರಾಣಿ, ಸಸ್ಯ ಸಂಕುಲವೂ ಸೇರಿ ಇಡೀ ಜೀವ ಜಗತ್ತಿನಲ್ಲಿ ಪರಿಸರ ಸಮತೋಲನ ಅಗತ್ಯ. ಪ್ರತಿಯೊಬ್ಬರು ಎಚ್ಚೆತ್ತುಕೊಂಡು ಪರಿಸರವನ್ನು ಕಾಪಾಡಿದರೆ ಜೀವ ಸಂಕುಲಕ್ಕೆ ಯಾವುದೇ ತೊಂದರೆಯಾಗುವುದಿಲ್ಲ. ಈ ಸರಪಳಿಯಲ್ಲಿ ಒಂದು ಕೊಂಡಿ ತಪ್ಪಿದರೂ ಇಡೀ ಜೀವ ಸಂಕುಲಕ್ಕೆ ಅಪಾಯ. ಜೀವಿಗಳ ಅಳಿವು ಉಳಿವು ಪರಿಸರ ಸಮತೋಲನವನ್ನು ಅವಲಂಬಿಸಿದೆ ಎಂಬ ವಿಚಾರವು ಈ ಕತೆಯಲ್ಲಿ ಮನಮುಟ್ಟುವಂತೆ ಚಿತ್ರಿತವಾಗಿದೆ.

ಮಿಥಿಲಾಪುರ ನದೀ ದಡದ ಹಳ್ಳಿ. ಸೊಗಸಾದ ಫಲವತ್ತಾದ ಪ್ರದೇಶ. ರೈತರು ಹೆಚ್ಚು ಶ್ರಮವಿಲ್ಲದೆ ವರ್ಷದಲ್ಲಿ ಎರಡು ಮೂರು ಬೆಳೆ ತೆಗೆಯುತ್ತಾರೆ. ಹಳ್ಳಿಯಲ್ಲಿದ್ದ ಎಲ್ಲರಿಗೂ ಸ್ವಲ್ಪವಾದರೂ ಜಮೀನಿದೆ. ಕೆಲವರಿಗೆ ಹೊಲಗದ್ದೆ ಇದ್ದರೆ, ಇನ್ನು ಕೆಲವರು ತೋಟ ಮಾಡಿಕೊಂಡಿದ್ದಾರೆ. ಅವರು ಬೆಳೆಯದ ತರಕಾರಿ ಇಲ್ಲ, ಹಣ್ಣಿಲ್ಲ. ಅಂಜೂರ, ಸೀಬೆ, ಸಪೋಟ, ದಾಳಿಂಬೆ, ಹಲಸು, ಪಪ್ಪಾಯಿ, ಮಾವು ಎಲ್ಲವನ್ನೂ ಅವರು ಬೆಳೆಯುತ್ತಾರೆ. ತೋಟದಲ್ಲಿ ಹೋಗಿ ಕುಳಿತರೆ ಕಣ್ಣು, ಕಿವಿಗಳಿಗೆ ಹಬ್ಬ, ಬಣ್ಣ, ಬಣ್ಣದ ಹೂವುಗಳು, ಹೂವುಗಳನ್ನರಸಿ ಬರುವ ವರ್ಣರಂಜಿತ ಚಿಟ್ಟೆಗಳು, ಮರದ ಕೊಂಬೆಗಳ ಮೇಲೆ ಹಾರುತ್ತಾ ಹಾಡುತ್ತಾ ಇರುವ ಪಕ್ಷಿಗಳು, ಕೆಂಪು ಕೊಕ್ಕಿನ ಹಸಿರು ಮೈಬಣ್ಣದ ಗಿಳಿಗಳು. ಕಾಮನಬಿಲ್ಲಿನ ರಂಗು ಪಡೆದ ನವಿಲುಗಳು, ವರ್ಣರಂಜಿತ ಕಿಂಗ್ ಫಿಶರ್, ಗೊರವಂಕ, ಮೈನಾ, ಹಾಡುವ ಕೋಗಿಲೆ, ಹೂಟ್ ಹೂಟ್ ಎಂದು ಕೂಗುವ ಗೂಬೆ ಎಲ್ಲವೂ ಇಲ್ಲಿವೆ. ಕಾಗೆ, ಗುಬ್ಬಚ್ಚಿಗಳಿಗೆ ಲೆಕ್ಕವಿಲ್ಲ. ಇವಲ್ಲದೆ ಅಳಿಲು, ಕಪಿಗಳು ತೋಟದ ತೆಂಗಿನ ಮರಗಳ ಮೇಲೆ ಓಡಾಡುತ್ತವೆ.

ಅಂದು ನಡೆದ ರೈತರ ಸಭೆಯಲ್ಲಿ ಒಬ್ಬ ರೈತ ನಿಂತು ಹೇಳಿದ "ಈ ವರ್ಷ ನಮ್ಮ ಹೊಲ ಗದ್ದೆಗಳಲ್ಲಿ ಪೈರೇನೋ ಚೆನ್ನಾಗಿದೆ. ಆದರೆ ಹಕ್ಕಿಗಳ ಕಾಟ. ಧಾನ್ಯದಲ್ಲಿ ಹತ್ತನೇ ಒಂದು ಭಾಗವಾದರೂ ಅವುಗಳ ಪಾಲಾಗಿವೆ. ಹಕ್ಕಿಗಳು ನಮ್ಮ ಹೊಲ, ಗದ್ದೆಗೆ ಬರದಂತೆ ಮಾಡಬೇಕು. ಅವುಗಳನ್ನು ಬಲೆ ಹಾಕಿ ಹಿಡಿದು ನಾಶ ಮಾಡಬೇಕು. ಅಥವಾ ಇನ್ನಾವುದಾದರೂ ಉಪಾಯ ಮಾಡಿ ಅವನ್ನು ತೊಲಗಿಸಬೇಕು. ಇತರ ರೈತರು "ಹೌದು, ಹೌದು" ಎಂದರು. ಇನ್ನೊಬ್ಬ "ನಮ್ಮ ತೋಟದಲ್ಲಿ ಗಿಣಿಗಳ ಕಾಟ, ಹಾಗೆಯೇ ಅಳಿಲುಗಳು, ಕಪಿಗಳು ಇವೆ. ಅವನ್ನೂ ನಾಶ ಮಾಡಬೇಕು" ಎಂದ. ಮುಂದಿನ ವರ್ಷ ಹೆಚ್ಚಿನ ಬೆಳೆ ಬರಬೇಕಾದರೆ ಹಕ್ಕಿಗಳ ನಾಶ ಅಗತ್ಯ ಎಂದು ಅವರು ತೀರ್ಮಾನಿಸಿದರು. ಮರಗಳ ಮೇಲೆ, ಪೊಟರೆಗಳಲ್ಲಿ, ಸಂದುಗಳಲ್ಲಿ ಕಟ್ಟಿಕೊಂಡಿದ್ದ ಪಕ್ಷಿಗಳ ಗೂಡನ್ನು ಅವರು ನಾಶ ಮಾಡಿದರು. ಬಲೆ ಹಾಕಿ ಪಕ್ಷಿಗಳನ್ನು ಹಿಡಿದು ಕೊಂದರು. ಮಕ್ಕಳು ಕವಣೆಯಿಂದ ಕಲ್ಲು ಹೊಡೆದು ಗದ್ದೆ, ಹೊಲಕ್ಕೆ ಬರುತ್ತಿದ್ದ ಪಕ್ಷಿಗಳನ್ನು

©KTBS Not to be republished

ಓಡಿಸಿದರು. ಆ ವರ್ಷ ಹೆಚ್ಚು ಬೆಳೆ ಬರುತ್ತದೆ ಎಂದು ಎಲ್ಲರೂ ಲೆಕ್ಕ ಹಾಕಿದ್ದರು. ಆದರೆ ಅವರ ಲೆಕ್ಕ ತಲೆಕೆಳಗಾಯಿತು. ಏಕೆ, ಗೊತ್ತೇ ಮಕ್ಕಳೇ? ತೆನೆಗಳು ಬಲಿಯ ಬೇಕು ಅನ್ನುವ ಕಾಲಕ್ಕೆ ಇದ್ದಕ್ಕಿದಂತೆ ಕ್ರಿಮಿ, ಕೀಟಗಳು, ಹುಳ, ಹುಪ್ಪಟೆಗಳು ಅಗಾಧ ಪ್ರಮಾಣದಲ್ಲಿ ಕಾಣಿಸಿಕೊಂಡವು. ಕೆಲವು ಕೀಟಗಳು ತೆನೆಯಲ್ಲಿರುವ ರಸವನ್ನು ಹೀರಿದವು. ಇನ್ನು ಕೆಲವು ಬಲಿತ ಕಾಳುಗಳನ್ನು ತಿಂದು ಧ್ವಂಸ ಮಾಡಿದವು. ಕೀಟ ನಾಶಗಳನ್ನು ಉಪಯೋಗಿಸಿದಾಗ ಅವುಗಳಿಂದ ಪರಾಗಸ್ಪರ್ಶಕ್ಕೆ ಅನುವು ಮಾಡಿಕೊಡುತ್ತಿದ್ದ ಬಣ್ಣದ ಚಿಟ್ಟೆಗಳು, ದುಂಬಿಗಳು, ಜೇನುನೊಣಗಳು ನಾಶವಾದವು. ಒಟ್ಟಿನಲ್ಲಿ ರೈತರಿಗೆ ಆ ವರ್ಷ ಬಹಳ ನಷ್ಟ.



ರೈತರ ಸಭೆಯಲ್ಲಿ ನಗರದಿಂದ ಬಂದ ವಿದ್ವಾಂಸರೊಬ್ಬರು ಹೇಳಿದರು: "ರೈತ ಬಾಂಧವರೇ, ಈ ಭೂಮಿ ಇರುವುದು ಮಾನವನಿಗೆ ಮಾತ್ರವಲ್ಲ. ಮಾನವ ಕಾಣಿಸಿಕೊಳ್ಳುವುದಕ್ಕೆ ಕೋಟ್ಯಂತರ ವರ್ಷಗಳ ಹಿಂದಿನಿಂದಲೂ ಅನೇಕ ಪ್ರಾಣಿ, ಪಕ್ಷಿಗಳು ನಮ್ಮ ಭೂಮಿಯ ಮೇಲಿವೆ. ಇವುಗಳ ಇರುವಿಕೆಯಲ್ಲಿ ಸಮತೋಲನವಿದ್ದರೆ ಮಾತ್ರ ಎಲ್ಲಾ ಜೀವಿಗಳಿಗೂ ಅನುಕೂಲ. ಇಲ್ಲದಿದ್ದರೆ ಕಷ್ಟ ತಪ್ಪಿದ್ದಲ್ಲ. ನೀವು ಸ್ವಲ್ಪ ಧಾನ್ಯ ಉಳಿಸಲು ಹೋಗಿ ಪಕ್ಷಿಗಳನ್ನೆಲ್ಲಾ ನಾಶ ಮಾಡಿದಿರಿ, ಕ್ರಿಮಿ-ಕೀಟಗಳನ್ನು ತಿಂದುಹಾಕುತ್ತಿದ್ದ ಅವು ಇಲ್ಲದಾಗ, ಕ್ರಿಮಿ ಕೀಟಗಳ ಸಂಖ್ಯೆ ಜಾಸ್ತಿಯಾದವು. ಸಮತೋಲನ ತಪ್ಪಿದರೆ ವಿಪತ್ತು." ರೈತರು ಅವರು ಹೇಳಿದ್ದನ್ನು ಒಪ್ಪಿ, ಬೇರೆ ಬೇರೆ ಕಡೆಯಿಂದ ಪಕ್ಷಿಗಳನ್ನು ತಂದು ತಮ್ಮ ತೋಟಗಳಲ್ಲಿ ಬಿಟ್ಟರು.

ಮಕ್ಕಳೇ, ಪ್ರಕೃತಿಯಲ್ಲಿರುವ ಸಮತೋಲನವನ್ನು ಹಾಳುಮಾಡಬಾರದು. ಹಾಗೆ ಮಾಡಿದರೆ ನಮಗೇ ತೊಂದರೆ ಅನ್ನುವುದು ನಿಮಗೆ ಗೊತ್ತಾಗಿರಬೇಕು ಅಲ್ಲವೇ?

©KTBS
Not to be republished



**ಕೃತಿಕಾರರ ಪರಿಚಯ:** ಎಚ್. ಆರ್. ಚಂದ್ರವದನರಾವ್ ಇವರು ೧೮.೧೦.೧೯೩೦ರಲ್ಲಿ ಜನಿಸಿದರು. ಇವರ ಸ್ಥಳ ಹಾಸನ. ಇಂಗ್ಲೀಷಿನಿಂದ ಅನೇಕ ಸಣ್ಣ ಕತೆಗಳನ್ನು ಅನುವಾದಿಸಿದ್ದಾರೆ. ಇವರ ಪ್ರಮುಖ ಕೃತಿಗಳು 'ಪ್ರದಕ್ಷಿಣೆ' 'ವಿದೇಶ ಪ್ರವಾಸ', (ಪ್ರವಾಸ ಕಥನಗಳು). 'ಬೆಟ್ಟಕ್ಕೆ ಬೆಂಕಿ', 'ಆನಂದ ನಗರಿ' 'ಅಗಣ್ಯ ಅಬಲೆ' (ಕಾದಂಬರಿಗಳು) 'ನಡುರಾತ್ರಿಯಲ್ಲಿ ಸ್ವಾತಂತ್ರ್ಯ', 'ಸತ್ಯಕ್ಕೆ ಸಾವಿಲ್ಲ' 'ರೇಷ್ಮೆ ಲಂಗ ಮತ್ತು ಇತರ ಕಥೆಗಳು' 'ಬೀಸಣಿಗೆ' (ಮಕ್ಕಳಿಗಾಗಿ ಬರೆದಿರುವ ಸಾಹಿತ್ಯ) ಮುಂತಾದವು.

ಪ್ರಸ್ತುತ 'ಅತಿ ಆಸೆ ಗತಿಕೇಡು' ಕತೆಯನ್ನು 'ಶತಮಾನದ ಮಕ್ಕಳ ಸಾಹಿತ್ಯ' ಕೃತಿಯಿಂದ ಆರಿಸಿಕೊಳ್ಳಲಾಗಿದೆ.

**ಕ್ಷೇತ್ರ :** ಬರೆಯುವುದು

**ಸಾಮರ್ಥ್ಯ :** ಉಕ್ತಲೇಖನದ ಮೂಲಕ ಪದ ಹಾಗೂ ಲೇಖನಚಿಹ್ನೆಯ ಸಹಿತ ವಾಕ್ಯಗಳನ್ನು ಬರೆಯುವುದು.

©KTBS Not to be republished

## ಪದಗಳ ಅರ್ಥ

ಕವಣೆ–ಕಲ್ಲನ್ನು ಬೀಸಿ ಹೊಡೆಯಲು ಉಪಯೋಗಿಸುವ ಸಾಧನ;
ತೊಲಗಿಸಬೇಕು–ಓಡಿಸಬೇಕು;
ಧ್ವಂಸ–ನಾಶ, ಅಳಿವು;
ಪರಾಗಸ್ಪರ್ಶ–ಹೂವಿನ ಶಲಾಕೆಯ ತುದಿಯ ಮೇಲೆ ಪರಾಗರೇಣುಗಳು ಬೀಳುವ ಕ್ರಿಯೆ;
ಬಾಂಧವ–ನೆಂಟ, ಸಂಬಂಧಿಕ;
ರಂಗು–ಬಣ್ಣ, ವರ್ಣ;
ಲೆಕ್ಕ ತಲೆಕೆಳಗಾಯಿತು–ಊಹಿಸಿದ್ದಕ್ಕೆ ವಿರುದ್ಧವಾಗಿ ಆಯಿತು;
ಲೆಕ್ಕವಿಲ್ಲ–ಬಹಳಷ್ಟು, ಎಣಿಸಲಾಗದಷ್ಟು;
ವರ್ಣರಂಜಿತ–ಬಣ್ಣ ಬಣ್ಣದ;
ಸಮತೋಲನ–ಎರಡೂ ಕಡೆ ಸಮಾನವಾಗಿರುವುದು;
ಸೊಗಸು–ಅಂದ, ಶೋಭೆ, ಸುಂದರ.

## ಭಾಷಾಭ್ಯಾಸ

**ಅ) ಕೆಳಗೆ ಕೊಟ್ಟಿರುವ ಪ್ರತಿಯೊಂದು ಪ್ರಶ್ನೆಗಳಿಗೂ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. ರೈತರ ತೋಟಗಳಿಗೆ ಹೂವುಗಳನ್ನು ಅರಸಿ ಯಾವುದು ಬರುತ್ತಿತ್ತು?

______________________________________

೨. ಕೆಂಪು ಕೊಕ್ಕಿನ, ಹಸಿರು ಮೈಬಣ್ಣದ ಹಕ್ಕಿ ಯಾವುದು?

______________________________________

೩. ಮಿಥಿಲಾಪುರದ ನದೀ ದಡದ ಹಳ್ಳಿಯ ರೈತರು ಬೆಳೆಯುತ್ತಿದ್ದ ಹಣ್ಣುಗಳಾವುವು?

______________________________________

೪. ಪರಾಗಸ್ಪರ್ಶಕ್ಕೆ ಅನುವು ಮಾಡಿಕೊಡುತ್ತಿದ್ದ ಕೀಟಗಳಾವುವು?

______________________________________

೫. ಗದ್ದೆ ಮತ್ತು ಹೊಲಕ್ಕೆ ಬರುತ್ತಿದ್ದ ಹಕ್ಕಿಗಳನ್ನು ಮಿಥಿಲಾಪುರದ ಮಕ್ಕಳು ಹೇಗೆ ಓಡಿಸಿದರು?

______________________________________

**ಆ) ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಮಿಥಿಲಾಪುರದ ನದೀ ದಡದ ತೋಟದಲ್ಲಿ ಹೋಗಿ ಕುಳಿತರೆ ಕಣ್ಣು, ಕಿವಿಗಳಿಗೆ ಹಬ್ಬವಾಗುವುದು ಏಕೆ?

______________________________________

______________________________________

______________________________________

©KTBS Not to be republished

೨. ಮಿಥಿಲಾಪುರದ ರೈತರ ಸಭೆಯಲ್ಲಿ ಒಬ್ಬ ರೈತ ನಿಂತು ಏನೆಂದು ಹೇಳಿದನು?

೩. ಮಿಥಿಲಾಪುರದವರೆಲ್ಲರೂ ಆ ವರ್ಷ ಹೆಚ್ಚು ಬೆಳೆ ಬರುತ್ತದೆ ಎಂದು ಲೆಕ್ಕ ಹಾಕಿದ್ದೇಕೆ?

೪. ವಿದ್ವಾಂಸರೊಬ್ಬರು ಮಿಥಿಲಾಪುರದ ರೈತರ ಸಭೆಯಲ್ಲಿ ಏನೆಂದು ಹೇಳಿದರು?

ಇ) ಕೆಳಗಿನ ವಾಕ್ಯಗಳನ್ನು ಯಾರು ಯಾರಿಗೆ ಹೇಳಿದರು? ಸಂದರ್ಭ ಸಹಿತ ವಿವರಿಸಿರಿ.

೧. "ಈ ವರ್ಷ ನಮ್ಮ ತೋಟ ಗದ್ದೆಗಳಲ್ಲಿ ಪೈರೇನೋ ಚೆನ್ನಾಗಿದೆ. ಆದರೆ ಹಕ್ಕಿಗಳ ಕಾಟ."

೨. "ನಮ್ಮ ತೋಟದಲ್ಲಿ ಗಿಣಿಗಳ ಕಾಟ, ಹಾಗೆಯೇ ಅಳಿಲುಗಳು, ಕಪಿಗಳು ಇವೆ. ಅವನ್ನೂ ನಾಶ ಮಾಡಬೇಕು."

©KTBS Not to be republished

೩. "ರೈತ ಬಾಂಧವರೇ, ಈ ಭೂಮಿ ಇರುವುದು ಮಾನವನಿಗೆ ಮಾತ್ರವಲ್ಲ."

___

___

___

೪. "ಮಕ್ಕಳೇ, ಪ್ರಕೃತಿಯಲ್ಲಿರುವ ಸಮತೋಲನವನ್ನು ಹಾಳುಮಾಡಬಾರದು."

___

___

___

**ಈ) ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತವಾದ ಪದಗಳಿಂದ ಭರ್ತಿಮಾಡಿ ಬರೆಯಿರಿ.**

೧. ಕಾಮನ ಬಿಲ್ಲಿನ ರಂಗಿನ ಹಕ್ಕಿ ___

೨. ಹಾಡುವ ಹಕ್ಕಿ ___

೩. ಪರಾಗಸ್ಪರ್ಶಕ್ಕೆ ಅನುವು ಮಾಡಿಕೊಡುವ ಕೀಟ___

೪. ಮಿಥಿಲಾಪುರದಲ್ಲಿದ್ದ ಎಲ್ಲರಿಗೂ ಸ್ವಲ್ಪವಾದರೂ ___ಇತ್ತು

**ಉ) 'ಅತಿ ಆಸೆ ಗತಿಕೇಡು' ಗದ್ಯ ಭಾಗವನ್ನು ಆಧರಿಸಿ ಈ ವಾಕ್ಯಗಳಲ್ಲಿ ತಪ್ಪಾಗಿರುವ ಪದಗಳನ್ನು ಸರಿಪಡಿಸಿ ಬರೆಯಿರಿ.**

೧. ರೈತರು ಹೆಚ್ಚು ಶ್ರಮಪಟ್ಟು ವರ್ಷದಲ್ಲಿ ಒಂದು ಬೆಳೆ ತೆಗೆಯುತ್ತಾರೆ.

___

೨. ಹಳ್ಳಿಯಲ್ಲಿದ್ದ ಹಲವರಿಗಾದರೂ ಹೆಚ್ಚು ಜಮೀನಿದೆ.

___

೩. ಹೂವುಗಳನ್ನರಸಿ ಬರುವ ವರ್ಣರಂಜಿತ ಗಿಣಿಗಳೂ ಇವೆ.

___

©KTBS Not to be republished

೪. ಈ ಭೂಮಿ ಇರುವುದು ಮಾನವನಿಗೆ ಮಾತ್ರ. ಮಾನವ ಕಾಣಿಸಿಕೊಂಡ ಮೇಲೆ ಅನೇಕ ಪ್ರಾಣಿ, ಪಕ್ಷಿಗಳು ನಮ್ಮ ಭೂಮಿಗೆ ಬಂದವು.

___

## ಭಾಷಾಭ್ಯಾಸ

**ಅ) ಕೆಳಗಿನ ಪದಗಳಿಗೆ ಸಮಾನ ಅರ್ಥದ ಎರಡು ಪದಗಳನ್ನು ಬರೆಯಿರಿ.**

೧. ಕಣ್ಣು : ________, ________

೨. ಬಣ್ಣ : ________, ________

೩. ಹೂವು: ________, ________

೪. ಕಪಿ : ________, ________

**ಆ) 'ಅತಿ ಆಸೆ ಗತಿಕೇಡು' ಗದ್ಯ ಭಾಗವನ್ನು ಗಮನಿಸಿ, ಕೆಳಗಿನ ವಾಕ್ಯಗಳಿಗೆ ಸೂಕ್ತ ಜಾಗಗಳಲ್ಲಿ ಲೇಖನ ಚಿಹ್ನೆಗಳನ್ನು ಹಾಕಿ, ಓದಿರಿ.**

೧. ಅವರು ಬೆಳೆಯದ ತರಕಾರಿ ಇಲ್ಲ ಹಣ್ಣಿಲ್ಲ ಅಂಜೂರ ಸೀಬೆ ಸಪೋಟ ದಾಳಿಂಬೆ ಹಲಸು ಪಪ್ಪಾಯಿ ಮಾವು ಎಲ್ಲವನ್ನೂ ಅವರು ಬೆಳೆಯುತ್ತಾರೆ

೨. ಇನ್ನೊಬ್ಬ ನಮ್ಮ ತೋಟದಲ್ಲಿ ಗಿಣಿಗಳ ಕಾಟ ಹಾಗೆಯೇ ಅಳಿಲುಗಳು ಕಪಿಗಳು ಇವೆ ಅವನ್ನೂ ನಾಶ ಮಾಡಬೇಕು

೩. ಏಕೆ ಗೊತ್ತೇ ಮಕ್ಕಳೇ ತೆನೆಗಳು ಬಲಿಯ ಬೇಕು ಅನ್ನುವ ಕಾಲಕ್ಕೆ ಇದ್ದಕ್ಕಿದ್ದಂತೆ ಕ್ರಿಮಿ ಕೀಟಗಳು ಹುಳ ಹುಪ್ಪಟೆಗಳು ಅಗಾಧ ಪ್ರಮಾಣದಲ್ಲಿ ಕಾಣಿಸಿಕೊಂಡವು

## ಭಾಷಾ ಚಟುವಟಿಕೆ

ಅ) 'ಅತಿ ಆಸೆ ಗತಿಕೇಡು' ಕಥೆಯನ್ನು ಮನೆಯಲ್ಲಿ ಎಲ್ಲರಿಗೂ ನಿಮ್ಮ ಮಾತುಗಳಲ್ಲಿ ಹೇಳಿರಿ.

ಆ) ಇಂತಹ ಕಥೆಗಳನ್ನು ಸಂಗ್ರಹಿಸಿರಿ.

©KTBS Not to be republished

# ವ್ಯಾಕರಣ

## ಭಾಗ– 'ಅ'

### ಗುಣಿತಾಕ್ಷರಗಳು

ವ್ಯಂಜನಗಳಿಗೆ ಸ್ವರಗಳು ಸೇರಿದಾಗ ಆಗುವ ಅಕ್ಷರಗಳೇ ಗುಣಿತಾಕ್ಷರಗಳು. ಗುಣಿತಾಕ್ಷರಗಳನ್ನು ಬರೆಯುವಾಗ ಸ್ವರ ಸಂಜ್ಞೆಗಳನ್ನು ವ್ಯಂಜನಾಕ್ಷರಗಳಿಗೆ ಸೇರಿಸುತ್ತೇವೆ. ಉಚ್ಚರಿಸುವಾಗ ವ್ಯಂಜನದೊಂದಿಗೆ ಯಾವ ಸ್ವರ ಸೇರಿದೆಯೋ ಆ ಸ್ವರದ ಉಚ್ಚಾರ ಮಾಡುತ್ತೇವೆ.

| | |
|---|---|
| ಅ= ಁ ತಲೆಕಟ್ಟು | : ಕ ತಲೆಕಟ್ಟು ಕ (ಕ್+ಅ=ಕ) |
| ಆ= ಾ ಇಳಿ/ ದೀರ್ಘ | : ಕ ಇಳಿ/ದೀರ್ಘ ಕಾ (ಕ್+ಆ=ಕಾ) |
| ಇ= ಿ ಗುಡಿಸು/ಗುಣಿಸು | : ಕ ಗುಡಿಸು/ಗುಣಿಸು ಕಿ (ಕ್+ಇ=ಕಿ) |
| ಈ= ೀ ಗುಡಿಸು ದೀರ್ಘ | : ಕ ಗುಡಿಸಿನ/ಗುಣಿಸಿನ ದೀರ್ಘ ಕೀ (ಕ್+ಈ=ಕೀ) |
| ಉ= ು ಕೊಂಬು | : ಕ ಕೊಂಬು ಕು (ಕ್+ಉ=ಕು) |
| ಊ= ೂ ಕೊಂಬು ಇಳಿ/ದೀರ್ಘ | : ಕ ಕೊಂಬಿನ ಇಳಿ/ದೀರ್ಘ ಕೂ (ಕ್+ಊ=ಕೂ) |
| ಋ= ೃ ವಟ್ರುಸುಳಿ | : ಕ ವಟ್ರುಸುಳಿ ಕೃ (ಕ್+ಋ=ಕೃ) |
| ಎ= ೆ ಎತ್ವ | : ಕ ಎತ್ವ ಕೆ (ಕ್+ಎ=ಕೆ) |
| ಏ= ೇ ಏತ್ವ /ಎತ್ವ ದೀರ್ಘ | : ಕ ಎತ್ವನ ದೀರ್ಘ/ ಏತ್ವ ಕೇ (ಕ್+ಏ=ಕೇ) |
| ಐ= ೈ ಐತ್ವ | : ಕ ಐತ್ವ ಕೈ (ಕ್+ಐ=ಕೈ) |
| ಒ= ೊ ಒತ್ವ | : ಕ ಒತ್ವ ಕೊ (ಕ್+ಒ=ಕೊ) |
| ಓ= ೋ ಓತ್ವ /ಒತ್ವ ದೀರ್ಘ | : ಕ ಒತ್ವನ ದೀರ್ಘ/ ಓತ್ವ (ಕ್+ಓ=ಕೋ) |
| ಔ= ೌ ಔತ್ವ | : ಕ ಔತ್ವ ಕೌ (ಕ್+ಔ=ಕೌ) |
| ಅಂ= 'ಂ' ಅ ಒಂದು ಸೊನ್ನೆ | : ಕ ಒಂದು ಸೊನ್ನೆ ಕಂ (ಕ್+ಅಂ=ಕಂ) |
| ಅಃ= 'ಃ' ಅ ಎರಡು ಸೊನ್ನೆ | : ಕ ಎರಡು ಸೊನ್ನೆ ಕಃ (ಕ್+ಅ:=ಕ:) |

©KTBS Not to be republished

## ಭಾಗ– 'ಆ'

**ಅ) ಕೆಳಗಿನ ವ್ಯಂಜನ ಮತ್ತು ಸ್ವರಗಳನ್ನು ಸೇರಿಸಿ ಬರೆಯಿರಿ.**

ಮಾದರಿ: ವ್+ಐ, ಭ್+ಅ, ವ್+ಓ, ಪ್+ಏ, ತ್+ಅ= ವೈಭವೋಪೇತ.

೧. ಮ್+ಔ ನ್+ಅ ದ್+ಇಂ ದ್+ಅ

೨. ನ್+ಎಂ ಟ್+ಅ ರ್+ಉ

೩. ವ್+ಋ ಕ್+ಓ ದ್+ಅ ರ್+ಅ

**ಆ) ಮಾದರಿಯಂತೆ ಪದಗಳನ್ನು ಬಿಡಿಸಿ ಬರೆಯಿರಿ.**

ಮಾದರಿ: ಕೃಪೆ= ಕ್+ಋ, ಪ್+ಎ

೧. ತೃತೀಯ ಭಾಷೆ ೨. ಯೋಗವಾಹ ೩. ಸಂತೋಷ

©KTBS Not to be republished

# ೫. ತಾಯಿಗೆ ಪತ್ರ

– ಸಂಗ್ರಹ

**ಪ್ರವೇಶ:** ಸಂವಹನ ಮಾಧ್ಯಮಗಳಲ್ಲಿ ಪತ್ರಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಇಂತಹ ಪತ್ರಗಳ ಬಗೆಗೆ ನೀವು ತಿಳಿದಿದ್ದೀರಾ? ನಿಮ್ಮ ಮನೆಗೆ ಪತ್ರ ಬರುತ್ತದೆಯೇ? ನೀವೂ ಯಾರಿಗಾದರೂ ಪತ್ರ ಬರೆದಿದ್ದಿರಾ? ಈ ಪತ್ರಗಳಲ್ಲಿ ಮೇಲ್ಭಾಗ, ಒಡಲು, ಮುಕ್ತಾಯದ ಸಂಬೋಧನೆ, ಸಹಿ, ವಿಳಾಸ– ಈ ಅಂಶಗಳು ಪ್ರಮುಖ. ಆಧುನಿಕ ತಂತ್ರಜ್ಞಾನದ ಹಿನ್ನೆಲೆಯಲ್ಲಿ ಕೈಬರೆಹದ ಪತ್ರಗಳ ಬಳಕೆ ಕಡಿಮೆಯಾದರೂ, ಪತ್ರಲೇಖನ ಇಂದಿಗೂ ಮಹತ್ವದ ಸ್ಥಾನವನ್ನು ಉಳಿಸಿಕೊಂಡಿದೆ.



ಕಸ್ತೂರ ಬಾ ವಸತಿಯುತ
ಹಿರಿಯ ಪ್ರಾಥಮಿಕ ಶಾಲೆ,
ತೆಲಿಗಿ, ಹರಪನಹಳ್ಳಿ ತಾಲ್ಲೂಕು,
ದಾವಣಗೆರೆ ಜಿಲ್ಲೆ.

ಪ್ರೀತಿಯ ಅಮ್ಮನಿಗೆ,

ದಿನಾಂಕ: ೧೦.೦೮.೨೦೧೭

ನಿನ್ನ ಮಗಳು ಪ್ರತೀಕ್ಷಾ ಮಾಡುವ ನಮಸ್ಕಾರಗಳು.

ನಾನು ಇಲ್ಲಿ ಆರೋಗ್ಯವಾಗಿ ನೆಮ್ಮದಿಯಿಂದ ಇದ್ದೇನೆ. ನಾನು ಓದುತ್ತಿರುವ ಶಾಲೆಯ ಪರಿಸರ ಚೆನ್ನಾಗಿದೆ. ನಾನು ಚೆನ್ನಾಗಿ ಓದುತ್ತಿದ್ದೇನೆ. ನಿನ್ನ ನೆನಪು ಯಾವಾಗಲೂ ಕಾಡುತ್ತಿರುತ್ತದೆ. ನಾನು ಓದಬೇಕೆಂದು ನೀನು ಮಾಡಿದ ಕೆಲಸ ನಿನಗೆ ಸರಿ ಅನ್ನಿಸಿದರೂ, ನಿಮ್ಮಿಂದ ನಾನು ದೂರ ಇರುವುದು ನನಗೆ ಆಗಾಗ ಬೇಸರವೆನಿಸುತ್ತದೆ.

ನೀನು ಹೂ ಕಟ್ಟಿ ಮಾರಿದ ಹಣದಿಂದ ನನ್ನ ಓದಿಗೆ ಹಣ ಕೊಡುತ್ತಿರುವುದು ಅಭಿಮಾನದ ಸಂಗತಿಯಾಗಿದೆ. ಅಪ್ಪ ಬಾರಿಸುವ ಡೊಳ್ಳಿನ ಬಗ್ಗೆ ಊರಿನಲ್ಲಿದ್ದಾಗ ನನಗೆ ತಿರಸ್ಕಾರ ಇತ್ತು. ನಾಚಿಕೆ ಎನಿಸುತ್ತಿತ್ತು. ಅಪ್ಪನ ಕಲೆಯ ಬೆಲೆ ಇಂದು ಗೊತ್ತಾಗಿ, ಅವರ ಬಗ್ಗೆ ಗೌರವ, ಆದರ ಹೆಚ್ಚಾಗಿದೆ. ನನ್ನ ಕಲಿಕೆಗೆ ಅಪ್ಪನೇ ಗುರುವಾಗಿದ್ದಾರೆ. ನೀನು ಕಲಿಸಿದ ಜಾನಪದ ಹಾಡುಗಳನ್ನು ನಮ್ಮ ಶಾಲೆಯಲ್ಲಿ ಹಾಡಿದೆ. ಎಲ್ಲರೂ ಮೆಚ್ಚಿಕೊಂಡರು. ನಾನು ಕಲಿಸಿದ ನಮ್ಮ ಊರಿನ ಆಟಗಳನ್ನು ಎಲ್ಲರೂ ಆಡುತ್ತಾರೆ. ನಮ್ಮ ಊರಿಗೆ ಬರಬೇಕೆಂದು ಆಸೆ ಪಡುತ್ತಾರೆ.

ಅಮ್ಮ ನಾನು ಡೊಳ್ಳುಕುಣಿತದ ನಾಯಕಿಯಾಗಿದ್ದೇನೆ. ನಮ್ಮ ತಂಡ ದೆಹಲಿಗೆ ಹೋಗುತ್ತಲಿದೆ. ದೆಹಲಿಯ ಡೊಳ್ಳುಕುಣಿತದ ಪ್ರದರ್ಶನದಿಂದ ಬಂದ ನಂತರ ಮತ್ತೆ ಕಾಗದ ಬರೆಯುತ್ತೇನೆ. ಪದಕ ಗೆದ್ದು ತಂದೇ ತರುತ್ತೇನೆ. ಅಕ್ಕ ಮತ್ತು ತಮ್ಮನಿಗೆ ನನ್ನ ನೆನಪುಗಳನ್ನು ತಿಳಿಸಿ.

ಇತಿ ನಮಸ್ಕಾರಗಳು

ನಿಮ್ಮ ಪ್ರೀತಿಯ ಮಗಳು
ಪ್ರತೀಕ್ಷಾ
ಏಳನೆಯ ತರಗತಿ, ಬಿ–ವಿಭಾಗ

©KTBS Not to be republished

## ಮರು ಓಲೆ



ಶ್ರೀಮತಿ ಭಾಗ್ಯ
ಸಾಲುಮರದ ಬೀದಿ, ಬಿಡದಿ,
ರಾಮನಗರ ತಾಲ್ಲೂಕು,
ದಿನಾಂಕ: ೨೦.೦೮.೨೦೧೪

ಪ್ರೀತಿಯ ಪ್ರತೀಕ್ಷಾಳಿಗೆ,

ನಿನ್ನ ತಾಯಿ ಮಾಡುವ ಆಶೀರ್ವಾದಗಳು.

ನಿನ್ನ ಕಾಗದ ತಲುಪಿದ್ದು, ನಮಗೆಲ್ಲ ಸಂತೋಷವಾಗಿದೆ. ಮನೆಯಲ್ಲಿ ಎಲ್ಲರೂ ಆರೋಗ್ಯವಾಗಿದ್ದಾರೆ. ಓದಿನಲ್ಲಿ ಜಾಣೆಯಾದ ನಿನ್ನನ್ನು ಓದಿಸುವುದು ಕಷ್ಟವಾದರೂ, ನಿನ್ನ ಉತ್ತಮ ಓದು ನಮಗೆ ಖುಷಿ ತಂದಿದೆ. ನಿನ್ನ ಓದಿನಿಂದ ನಮ್ಮ ಹಳ್ಳಿಗೆ ಒಳ್ಳೆಯ ಹೆಸರು ಬರುತ್ತದೆ ಎಂದು ನಂಬಿದ್ದೇವೆ. ನೀನು ಡೊಳ್ಳುಕುಣಿತದ ಕಲೆಯ ಪ್ರದರ್ಶನಕ್ಕಾಗಿ ದೆಹಲಿಗೆ ಹೋಗುತ್ತಿರುವುದು ಅಪ್ಪನಿಗಂತೂ ತುಂಬಾ ಸಂತೋಷವಾಗಿದೆ. ಅಪ್ಪ ನಿನ್ನ ಆರೋಗ್ಯ – ಓದಿನ ಬಗ್ಗೆ ಹೆಚ್ಚಿನ ಗಮನ ತೆಗೆದುಕೊಳ್ಳುವಂತೆ ತಿಳಿಸಿದ್ದಾರೆ.

ನೀನು ಡೊಳ್ಳು ಕುಣಿತದಲ್ಲಿ ಸಾಧನೆ ಮಾಡುತ್ತಿರುವ ಬಗ್ಗೆ, ನಿನ್ನ ಓದಿನ ಬಗ್ಗೆ ಅಕ್ಕ–ಪಕ್ಕದವರೆಲ್ಲರಿಗೂ ನೆಂಟರಿಷ್ಟರೆಲ್ಲರಿಗೂ ತಿಳಿಸಿದ್ದೇನೆ. ನೀನು ನಮ್ಮ ಜನಪದ ಕಲೆಯನ್ನ ಮುಂದುವರೆಸಿಕೊಂಡು ಹೋಗುತ್ತಿರುವುದು, ನಮ್ಮೆಲ್ಲರಿಗೂ ಸಂತೋಷ ತಂದಿದೆ. ನಿನ್ನ ತಮ್ಮನು ತನಗೂ ಡೊಳ್ಳುಕುಣಿತ ಕಲಿಸಿ ಕೊಡುವಂತೆ ಅಪ್ಪನನ್ನು ಪೀಡಿಸುತ್ತಿದ್ದಾನೆ. ಡೊಳ್ಳು ಕುಣಿತ ಕಲಿತು ಈ ಸಲದ ಜಾತ್ರೆಯಲ್ಲಿ ಪ್ರದರ್ಶನ ಮಾಡಬೇಕೆಂದು ಬಯಸಿದ್ದಾನೆ.

ಡೊಳ್ಳು ಕುಣಿತ ಕಲಿ ಎಂದಾಗ ಇದು ಹಳ್ಳಿಯ ವಾದ್ಯ ಎಂದ ನೀನು ಅದೇ ಕಲೆಯ ಕಾರಣವಾಗಿ ದೆಹಲಿಗೆ ಹೋಗುತ್ತಿರುವೆ. ನಿನಗೆ ಶುಭವಾಗಲಿ. ನಮ್ಮ ಊರು, ನಮ್ಮ ಜನ, ನಮ್ಮ ಆಟ, ನಮ್ಮ ಕಲೆಯ ಬಗ್ಗೆ ಅಭಿಮಾನ ಇಟ್ಟುಕೊಂಡಿರುವುದು ನಿಜವಾಗಿಯೂ ಹೆಮ್ಮೆ ಎನಿಸುತ್ತದೆ.

ಆಶೀರ್ವಾದಗಳೊಂದಿಗೆ

ಇತಿ ನಿನ್ನ ಪ್ರೀತಿಯ ಅಮ್ಮ
ಭಾಗ್ಯ

©KTBS Not to be republished

| | |
|---|---|
| **ಕ್ಷೇತ್ರ** | : ಓದುವುದು |
| **ಸಾಮರ್ಥ್ಯ** | : ಕೈಬರಹದ ಬರವಣಿಗೆಯನ್ನು ಓದುವುದು. |

## ಪದಗಳ ಅರ್ಥ

ಅಂದ – ಸುಂದರ;

ಕದಡು – ಕಲಕು, ಚಂಚಲ;

ಕುಶಲ – ಕ್ಷೇಮ;

ಕೊರತೆ – ಕಡಿಮೆ ಇಲ್ಲದಿರುವುದು;

ಡೊಳ್ಳು – ಒಂದು ಪ್ರಕಾರದ ಚರ್ಮವಾದ್ಯ.

ತವರು – ತಾಯಿಯ ಮನೆ;

ನೆಮ್ಮದಿ – ಸಂತೃಪ್ತಿ;

ನೋವು – ಸಂಕಟ;

ಹಂಬಲ – ತವಕ, ಒತ್ತಾಸೆ;

## ಅಭ್ಯಾಸ

**ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಪ್ರತೀಕ್ಷಾ ಯಾರಿಗೆ ಪತ್ರ ಬರೆದಳು?

___

೨. ಪ್ರತೀಕ್ಷಾಳಿಗೆ ಆಗಾಗ ಬೇಸರವಾಗುತ್ತಿತ್ತು ಏಕೆ?

___

೩. ಪ್ರತೀಕ್ಷಾಳಿಗೆ ಯಾವುದು ಅಭಿಮಾನದ ಸಂಗತಿಯಾಗಿತ್ತು?

___

೪. ಪ್ರತೀಕ್ಷಾಳ ತಂದೆ ಬಾರಿಸುತ್ತಿದ್ದ ವಾದ್ಯ ಯಾವುದು?

___

೫. ಪ್ರತೀಕ್ಷಾ ದೆಹಲಿಗೆ ಏಕೆ ಹೊರಟಿದ್ದಳು?

___

©KTBS Not to be republished

ಆ) ಕೆಳಗಿನ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

೧. ತಂದೆಯ ಕಲೆಯ ಬೆಲೆಯು ಪ್ರತೀಕ್ಷಾಳಿಗೆ ಗೊತ್ತಾಗಿದ್ದು ಹೇಗೆ?

________________________________________

________________________________________

________________________________________

೨. ಪ್ರತೀಕ್ಷಾಳ ತಮ್ಮನ ಬಯಕೆ ಏನಾಗಿತ್ತು?

________________________________________

________________________________________

________________________________________

೩. ಹೆಮ್ಮೆಯ ವಿಷಯ ಯಾವುದೆಂದು ಪ್ರತೀಕ್ಷಾಳ ತಾಯಿಯು ಹೇಳಿದಳು?

________________________________________

________________________________________

________________________________________

©KTBS Not to be republished

## ಭಾಷಾಭ್ಯಾಸ

**ಅ) ಕೆಳಗಿನ ಬರೆಹವನ್ನು ಓದಿ ಬರೆಯಿರಿ.**

1. ನಿನ್ನ ಕಾಗದ ತಲುಪಿದ್ದು, ನಮಗೆಲ್ಲ ಸಂತೋಷವಾಗಿದೆ.

2. ನಿನ್ನ ಉತ್ತಮ ಓದು ನಮಗೆ ಖುಷಿ ತಂದಿದೆ.

3. ನಾನು ಓದುತ್ತಿರುವ ಶಾಲೆಯ ಪರಿಸರ ಚೆನ್ನಾಗಿದೆ.

**ಆ) ಕೆಳಗಿನ ಪದಗಳಿಗೆ ಅನ್ಯಲಿಂಗ ಬರೆಯಿರಿ.**

ತಮ್ಮ, ಅಕ್ಕ, ತಾಯಿ, ಅಮ್ಮ.

## ಭಾಷಾ ಚಟುವಟಿಕೆ

**ಅ) ಕೆಳಗಿನ ವಾಕ್ಯವೃಂದವನ್ನು ಓದಿ ಶಿಕ್ಷಕರ ಸಹಾಯದಿಂದ ಅರ್ಥೈಸಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ.**

ಕಾಲದ ಸದುಪಯೋಗವನ್ನು ಬಲ್ಲವರೆಲ್ಲರೂ ಗಡಿಯಾರದ ಉಪಯೋಗವನ್ನು ಬಲ್ಲರು. ನೂರಾರು ವರ್ಷಗಳ ಹಿಂದೆ ಗಡಿಯಾರಗಳು ಇರಲಿಲ್ಲ. ಆಗ ಕಾಲವನ್ನು ಕಂಡು ಹಿಡಿಯುವುದೇ ಕಷ್ಟವಾಗಿದ್ದಿತು. ಬಹಳ ಹಿಂದೆ ಜನರು ಸೂರ್ಯನ ಚಲನೆ ಆಧಾರದಿಂದ ಕಾಲವನ್ನು ಕಂಡುಹಿಡಿಯುತ್ತಿದ್ದರು. ಬರಬರುತ್ತ ಛಾಯಾಯಂತ್ರದ ಉಪಯೋಗವು ರೂಢಿಗೆ ಬಂದಿತು. ಬಿಸಿಲು ಕಾಲಕ್ಕೆ ಮಾತ್ರ ಛಾಯಾಯಂತ್ರವು ಉಪಯೋಗವಾಗಿತ್ತು. ಮೋಡ ಕಟ್ಟಿದ ದಿನಗಳಲ್ಲಿ ಇದರಿಂದ ಪ್ರಯೋಜನವಿರಲಿಲ್ಲ.

೧. ಗಡಿಯಾರದ ಉಪಯೋಗವನ್ನು ಯಾರು ಬಲ್ಲರು?

೨. ನೂರು ವರ್ಷಗಳ ಹಿಂದೆ ಕಾಲವನ್ನು ಕಂಡುಹಿಡಿಯುವುದು ಏಕೆ ಕಷ್ಟವಾಗಿತ್ತು?


೩. ಗಡಿಯಾರಗಳು ಇಲ್ಲದಿದ್ದ ಕಾಲದಲ್ಲಿ ಯಾವುದರ ಸಹಾಯದಿಂದ ಸಮಯವನ್ನು ಕಂಡುಹಿಡಿಯುತ್ತಿದ್ದರು?


೪. ಛಾಯಾಯಂತ್ರವು ಯಾವ ಕಾಲದಲ್ಲಿ ಮಾತ್ರ ಉಪಯೋಗಕರವಾಗಿತ್ತು?


©KTBS Not to be republished


ಆ) ಊರಿನಲ್ಲಿರುವ ನಿಮ್ಮ ಸಂಬಂಧಿಕರಿಗೆ ಶಿಕ್ಷಕರ ನೆರವಿನಿಂದ ಪತ್ರಗಳನ್ನು ಬರೆಯಿರಿ.

ಕೆಳಗಿನ ನಮೂನೆಗಳ ಅಂಚೆಪತ್ರ / ಲಕೋಟೆಗಳನ್ನು ಸಂಗ್ರಹಿಸಿ, ನಿನ್ನ ಸ್ನೇಹಿತರಿಗೆ ಪತ್ರವನ್ನು ಬರೆ.





## ವ್ಯಾಕರಣ

## ಭಾಗ– 'ಅ'

### ಸಂಯುಕ್ತಾಕ್ಷರ

"ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಂಜನಗಳ ಜೊತೆ ಒಂದು ಸ್ವರ ಸೇರಿದಾಗ ಆಗುವ ಅಕ್ಷರಗಳೇ ಸಂಯುಕ್ತಾಕ್ಷರಗಳು."

[ವ್ಯಂಜನ+ವ್ಯಂಜನ+ಸ್ವರ=ಸಂಯುಕ್ತಾಕ್ಷರ]

**ಸಂಯುಕ್ತಾಕ್ಷರಗಳಲ್ಲಿ ಎರಡು ವಿಧ:**

೧) ಸಜಾತೀಯ ಸಂಯುಕ್ತಾಕ್ಷರ.

೨) ವಿಜಾತೀಯ ಸಂಯುಕ್ತಾಕ್ಷರ.

©KTBS Not to be republished

## ೧. ಸಜಾತೀಯ ಸಂಯುಕ್ತಾಕ್ಷರಗಳು

ಒಂದೇ ಜಾತಿಯ (ಸಜಾತೀಯ) ಎರಡು ವ್ಯಂಜನಗಳು ಸೇರಿ ಆಗುವ ಅಕ್ಷರವು ಸಜಾತೀಯ ಸಂಯುಕ್ತಾಕ್ಷರವೆನಿಸುವುದು. ಇದನ್ನು ದ್ವಿತ್ವವೆಂದೂ ಕರೆಯುತ್ತಾರೆ.

ಕ್ಕ ಖ್ಖ ಗ್ಗ ಘ್ಘ

ಚ್ಚ ಛ್ಛ ಜ್ಜ ಝ್ಝ

ಟ್ಟ ಠ್ಠ ಡ್ಡ ಢ್ಢ ಣ್ಣ

ತ್ತ ಥ್ಥ ದ್ದ ಧ್ಧ ನ್ನ

ಪ್ಪ ಫ್ಫ ಬ್ಬ ಭ್ಭ ಮ್ಮ

ಯ್ಯ ರ್ರ ಲ್ಲ ವ್ವ ಶ್ಶ ಷ್ಷ ಸ್ಸ ಹ್ಹ ಳ್ಳ

ಕ್ + ಕ್ + ಓ = ಕ್ಕೋ
ಣ್ + ಣ್ + ಅ = ಣ್ಣ
ಜ್ + ಜ್ + ಉ = ಜ್ಜು
ಟ್ + ಟ್ + ಇ = ಟ್ಟಿ
ತ್ + ತ್ + ಔ = ತ್ತೌ

©KTBS Not to be republished

## ೨. ವಿಜಾತೀಯ ಸಂಯುಕ್ತಾಕ್ಷರ

ಬೇರೆಬೇರೆ ಜಾತಿಯ ಎರಡು ಅಥವಾ ಹೆಚ್ಚು ವ್ಯಂಜನಗಳು ಸೇರಿ ಆಗುವ ಅಕ್ಷರಕ್ಕೆ ವಿಜಾತೀಯ ಸಂಯುಕ್ತಾಕ್ಷರ ಎನ್ನುತ್ತಾರೆ.

ಸ್ತ್ರ = ಸ್ + ತ್ + ರ್ + ಅ

ಕ್ಷ = ಕ್ + ಷ್ + ಅ

ಜ್ಞಾ = ಜ್ + ಞ್ + ಆ

ಸ್ವಾರ್ಥ = ಸ್ + ವ್ +ಆ, ರ್ + ಥ್ + ಅ

ಕ್ತಿ = ಕ್ + ತ್ + ಇ

## ಭಾಗ– 'ಆ'

**ಅ. ಕೆಳಗಿನ ಹೇಳಿಕೆಗಳಿಗೆ ಸರಿ ಹೊಂದುವ ಸೂಕ್ತ ಉತ್ತರವನ್ನು ಕೊಟ್ಟಿರುವ ಪರ್ಯಾಯ ಪದಗಳಲ್ಲಿ ಗುರುತಿಸಿ ಬರೆಯಿರಿ.**

೧. ಸಂಯುಕ್ತಾಕ್ಷರಗಳಲ್ಲಿರುವ ವಿಧಗಳು---------

ಅ. ನಾಲ್ಕು ಆ. ಎರಡು ಇ. ಮೂರು ಈ. ಒಂದು

೨. ಸಜಾತೀಯ ಸಂಯುಕ್ತಾಕ್ಷರಕ್ಕೆ ಉದಾಹರಣೆ----------

ಅ. ಚಂದ್ರ ಆ. ಸ್ವರ ಇ. ಅಕ್ಕ ಈ. ಭಕ್ತ

೩. ವಿಜಾತೀಯ ಸಂಯುಕ್ತಾಕ್ಷರಕ್ಕೆ ಉದಾಹರಣೆ--------

ಅ. ಬಸಪ್ಪ ಆ. ದೊಡ್ಡಪ್ಪ ಇ. ಅಕ್ಕ ಈ. ಸಂಗ್ರಹ

©KTBS Not to be republished

# ೬. ನೆನೆವುದೆನ್ನ ಮನ

**ಡಾ॥ ಎಚ್. ಎಸ್. ಅನುಪಮಾ**

**ಪ್ರವೇಶ:** 'ಭಾರತ ರತ್ನ' ಪ್ರಶಸ್ತಿ ಪಡೆದ ರಾಯ್ ಅವರ ಜನ್ಮದಿನವನ್ನು ವೈದ್ಯರ ದಿನವೆಂದು ಆಚರಿಸಲಾಗುತ್ತಿದೆ. ಪ್ರಸಿದ್ಧ ವೈದ್ಯರಾಗಿದ್ದ ಡಾ॥ ಬಿ. ಸಿ. ರಾಯ್ ಕೇವಲ ರೋಗಿಗಳ ಬೇನೆಯನ್ನು ಉಪಚರಿಸಿದವರಲ್ಲ; ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದವರು. 'ಕಾಯಿಲೆಗಳ ತವರುಮನೆ' ಎಂದು ಕುಖ್ಯಾತವಾಗಿದ್ದ ಬಂಗಾಳದಲ್ಲಿ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಿ ಜನರ ನೋವಿಗೆ ಮಿಡಿದವರು. ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದವರು. ಅವರ ಕಿರುಪ-ರಿಚಯವನ್ನು ಈ ಲೇಖನವು ಒಳಗೊಂಡಿದೆ.


ಡಾ॥ ಬಿಧಾನ್ ಚಂದ್ರ ರಾಯ್ (ಬಿ.ಸಿ.ರಾಯ್) ಅವರ ನೆನಪಿನಲ್ಲಿ ಪ್ರತಿ ವರ್ಷ ಜುಲೈ ಒಂದರಂದು ವೈದ್ಯರ ದಿನಾಚರಣೆಯನ್ನಾಗಿ ಆಚರಿಸಲಾಗುತ್ತದೆ. ಭಾರತ ಕಂಡ ಮೇಧಾವಿ ವೈದ್ಯ, ರಾಜಕಾರಣಿ, ಸ್ವಾತಂತ್ರ್ಯ ಹೋರಾಟಗಾರ, ಉತ್ತಮ ಆಡಳಿತಗಾರರಾದ ಬಿ.ಸಿ. ರಾಯ್ ಅವರ ಜೀವನವೃತ್ತಾಂತವನ್ನು ಬರಿಯ ವೈದ್ಯರಷ್ಟೇ ಅಲ್ಲ, ಈಗಿನ ಯುವ ಪೀಳಿಗೆಯೂ ತಿಳಿದುಕೊಳ್ಳಬೇಕಾದ ಆವಶ್ಯಕತೆಯಿದೆ.

೧೮೮೨ ಜುಲೈ ಒಂದರಂದು ಬಿಹಾರದ ಪಾಟ್ನಾದಲ್ಲಿ ಹುಟ್ಟಿದ ಬಿಧಾನ್ ಚಂದ್ರ ರಾಯ್ ಪಾಟ್ನಾ ಹಾಗೂ ಕೋಲ್ಕತಾಗಳಲ್ಲಿ ಆರಂಭ ವಿದ್ಯಾಭ್ಯಾಸ ಮುಗಿಸಿ ನಂತರ ಕೋಲ್ಕತಾ ಮೆಡಿಕಲ್ ಕಾಲೇಜಿನಲ್ಲಿ ವೈದ್ಯಕೀಯ ಪದವಿ ಪಡೆದರು. ಉನ್ನತ ವಿದ್ಯಾಭ್ಯಾಸಕ್ಕಾಗಿ ಲಂಡನ್ನಿಗೆ ತೆರಳುವ ಮಹತ್ವಾಕಾಂಕ್ಷೆ ಇದ್ದರೂ ಆರ್ಥಿಕ ಬಲವಿಲ್ಲದೇ ಕೆಲಸಕ್ಕೆ ಸೇರಿದ್ದರು. ಪ್ರವೇಶ ಪರೀಕ್ಷೆಗಳನ್ನು ಎಷ್ಟು ಬಾರಿ ಬರೆದು ಅರ್ಹತೆಗಳಿಸಿಕೊಂಡರೂ ನಾನಾ ಸಬೂಬುಹೇಳಿ ಲಂಡನ್ನಿನಲ್ಲಿ ಸೀಟು ದೊರೆಯಲಿಲ್ಲ. ಛಲ ಬಿಡದೇ ೩೦ ಬಾರಿ ಅರ್ಜಿ ಹಾಕಿದ ಮೇಲೆ, ಅಂತೂ ವಿದ್ಯಾಭ್ಯಾಸಕ್ಕಾಗಿ ಸೀಟು ಸಿಗುತ್ತದೆ. ಅವಕಾಶ ಸಿಕ್ಕಿದ್ದೇ ಕಠಿಣ. ತಪಸ್ಸಿನ ಹಾಗೆ ಓದಿ ಕೇವಲ ೨ ವರ್ಷ ಮೂರು ತಿಂಗಳಲ್ಲಿ FRCS ಹಾಗೂ MRCP ಪದವಿಗಳನ್ನು ಪೂರೈಸಿದರು. ಅಷ್ಟು ಕಡಿಮೆ ಅವಧಿಯಲ್ಲಿ, ಮೆಡಿಸಿನ್ ಹಾಗೂ ಸರ್ಜರಿಗಳೆಂಬ ಎರಡು ಭಿನ್ನ ವೈದ್ಯಕೀಯ ಸ್ನಾತಕೋತ್ತರ ಪದವಿಗಳನ್ನು ಏಕಕಾಲದಲ್ಲಿ ಪೂರೈಸಿದ ಮೊದಲಿಗರು ಅವರು. ನಂತರ ಕೋಲ್ಕತಾಗೆ ಹಿಂದಿರುಗಿ ಮೆಡಿಕಲ್ ಕಾಲೇಜಿನಲ್ಲಿ ಅಧ್ಯಾಪಕರಾಗಿ ಕೆಲಸಕ್ಕೆ ಸೇರಿಕೊಂಡರು.

ಕೆಲವೇ ವರ್ಷಗಳಲ್ಲಿ ಉನ್ನತ ಹುದ್ದೆಗೇರಿ ಕೋಲ್ಕತಾ ವಿಶ್ವವಿದ್ಯಾಲಯದ ಉಪಕುಲಪತಿಯಾಗಿ ಹತ್ತಾರು ಆಧುನಿಕ ವೈದ್ಯಕೀಯ ಪದ್ಧತಿಯ ಆಸ್ಪತ್ರೆಗಳನ್ನೂ, ಮೆಡಿಕಲ್ ಕಾಲೇಜುಗಳನ್ನೂ ತೆರೆದರು. ಬಂಗಾಳವೆಂದರೆ ಸಾಂಕ್ರಾಮಿಕ ಕಾಯಿಲೆಗಳ ತವರೆಂದೇ ಕುಖ್ಯಾತವಾಗಿ ಬ್ರಿಟಿಷ್ ಆಫೀಸರುಗಳು ಪೋಸ್ಟಿಂಗ್ ಮೇಲೆ ಕೋಲ್ಕತಾಗೆ ಹೋಗಲು ಹೆದರುತ್ತಿದ್ದ ಕಾಲವದು. ಜನರ

© KTBS Not to be republished

ಆರೋಗ್ಯ ಸುಧಾರಿಸದೇ ಮತ್ಯಾವ ಸುಧಾರಣೆಗೂ ಅರ್ಥವಿಲ್ಲವೆಂದು ಅರಿತ ಬಿ. ಸಿ. ರಾಯ್ ಆರೋಗ್ಯಸೇವೆ ಎಲ್ಲರ ಕೈಗೆಟುಕುವ ಹಾಗೆ ಸಾರ್ವಜನಿಕ ಆಸ್ಪತ್ರೆಗಳನ್ನು ತೆರೆದು ವೈದ್ಯಕೀಯ ಸೌಲಭ್ಯ ಕಲ್ಪಿಸಿದರು. ಲಕ್ನೋ ವಿಶ್ವವಿದ್ಯಾಲಯವನ್ನೂ ಆರಂಭಿಸಿದರು.



ಸ್ವಾತಂತ್ರ್ಯ ಚಳುವಳಿ ಕಾವು ಯಾರನ್ನೂ ಬಿಡದ ಕಾಲ ಅದು. ಬಿ.ಸಿ. ರಾಯ್ ಗಾಂಧೀ-ಜಿಯವರ ನೆಚ್ಚಿನ ಸೇನಾಪತಿಗಳಲ್ಲೊಬ್ಬರು. ಪೂನಾದಲ್ಲಿ ಅಸ್ವಸ್ಥರಾಗಿ ಮಲಗಿದ್ದ ಗಾಂಧಿಯನ್ನು ನೋಡಲು ಹೋದಾಗ, "ನೀವು ಭಾರತದ ೪೦ ಮಿಲಿಯ ಜನರಿಗೆ ಉಚಿತವಾಗಿ ಔಷಧಿ ಕೊಡುವಿರಾದರೆ ನಾನೂ ತೆಗೆದುಕೊಳ್ಳಬಯಸುವೆ" ಎಂದು ಗಾಂಧಿ ವಿಶೇಷ ಚಿಕಿತ್ಸೆ ನಿರಾಕರಿಸಿದರು. "ಭಾರತದ ೪೦ ಮಿಲಿಯ ಜನರ ಬಳಿ ಹೋಗಬಲ್ಲೆನೋ ಇಲ್ಲವೋ, ಆದರೆ ಅವರ ಪ್ರತಿನಿಧಿಯಾದ ನಿಮಗೆ ಚಿಕಿತ್ಸೆ ನೀಡಬೇಕೆಂದೇ ಬಂದಿರುವೆ" ಎಂದುತ್ತರಿಸಿದ ರಾಯ್ ಅಂದಿನಿಂದ ಗಾಂಧೀಜಿಯ ನಿಕಟ ಸಹವರ್ತಿಯಾದರು. ೧೯೨೩ರಲ್ಲಿ ರಾಜಕೀಯ ಪ್ರವೇಶಿಸಿ ಬಾರಕ್‌ಪೋರ್ ನಿಂದ ಗೆದ್ದ ಬಳಿಕ, ಹೂಗ್ಲಿ ನದಿಯ ನೀರು ಕಲುಷಿತಗೊಳ್ಳುತ್ತಿದ್ದು, ಅದರ ಶುದ್ಧೀಕರಣ ಯೋಜನೆ ಕೈಗೊಳ್ಳಬೇಕೆಂದು ಒತ್ತಾಯ ತಂದರು. ದಂಡಿ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಲು ಹೋದಾಗ "ನೀವೂ ನಮ್ಮ ಜೊತೆ ಜೈಲು ಸೇರುವುದು ಬೇಡ, ನಿಮ್ಮ ಕೆಲಸ ಜೈಲಿನ ಹೊರಗೆ, ಜನಪರ ಕೆಲಸ ಮಾಡುತ್ತ ನಮ್ಮ ಬೆಂಬಲಕ್ಕಿರಿ" ಎಂದು ಗಾಂಧೀಜಿ ಹಿಂದೆ ಕಳುಹಿಸಿದರು.

ಸ್ವಾತಂತ್ರ್ಯಾನಂತರ ೧೯೪೮ರಲ್ಲಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಾಗಿ, ಅನಂತರ ೧೪ ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದರು. ಅವರು ಮುಖ್ಯಮಂತ್ರಿಯಾದ ಅವಧಿಯಲ್ಲಿ ನಿರಾಶ್ರಿತರು, ಸಾಂಕ್ರಾಮಿಕ ರೋಗಗಳು, ಕೋಮುಗಲಭೆ, ನಿರುದ್ಯೋಗ ಇವೆಲ್ಲ

©KTBS Not to be republished

ಬಂಗಾಳವನ್ನು ಕ್ಷೋಭೆಗೊಳಪಡಿಸಿದ್ದ ಕಾಲ, ಕೇವಲ ೩ ವರ್ಷಗಳಲ್ಲಿ ಕಟ್ಟುನಿಟ್ಟಾದ ಹಾಗೂ ಶಿಸ್ತಿನ ಆಡಳಿತದಿಂದ ಅವೆಲ್ಲವನ್ನೂ ತಹಬಂದಿಗೆ ತಂದ ಅವರನ್ನು 'ಪಶ್ಚಿಮ ಬಂಗಾಳದ ಪಿತಾಮಹ' ಎಂದೇ ಕರೆಯಲಾಗುತ್ತದೆ. ಬಿ ಸಿ ರಾಯ್ ಅವರಿಗೆ ೧೯೬೧ರಲ್ಲಿ ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ೧೯೬೨ರ ಜುಲೈ ಒಂದರ ಬೆಳಿಗ್ಗೆ ರೋಗಿಗಳನ್ನು ನೋಡುತ್ತಿದ್ದಾಗಲೇ ಕೊನೆಯುಸಿರೆಳೆದ ಕಾಯಕಜೀವಿ ಬಿ.ಸಿ.ರಾಯ್, ಅವರು ಹುಟ್ಟಿದ ಹಾಗೂ ಮರಣ ಹೊಂದಿದ ದಿನವಾದ ಜುಲೈ ಒಂದನ್ನು ವೈದ್ಯರ ದಿನವೆಂದೇ ಕರೆಯಲಾಗುತ್ತದೆ.



**ಕೃತಿಕಾರರ ಪರಿಚಯ:**

ಡಾ.ಎಚ್.ಎಸ್. ಅನುಪಮಾ ವೃತ್ತಿಯಲ್ಲಿ ವೈದ್ಯರು. ಇವರ ಸ್ಥಳ ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲೂಕಿನ ಹೆಬ್ಬಾಗಿಲು. ಜನಿಸಿದ್ದು ೬-೨-೧೯೭೦ರಲ್ಲಿ. 'ಕಾಡುಹಕ್ಕಿಯ ಹಾಡು' ಮತ್ತು 'ಸಹಗಮನ' (ಕವನ ಸಂಕಲನಗಳು) 'ಹೂವರಳಿದ್ದಕ್ಕೆ ಯಾಕೆ ಸಾಕ್ಷಿ?' (ಕಥಾ ಸಂಕಲನ) 'ಜೀವಕೋಶ' 'ವೈದ್ಯಲೋಕದ ಕಥನ', 'ನೈಲ್ ನದಿಯಗುಂಟ' 'ಶರಾವತಿಯನರಸುತ್ತ' ಮತ್ತು 'ಅಂಡಮಾನ್: ಕಂಡ ಹಾಗೆ' (ಪ್ರವಾಸ ಕಥನಗಳು), 'ನೋಯುವ ಹಲ್ಲಿಗೆ ಹೊರಳುವ ನಾಲಿಗೆ' ಅಂಕಣ ಬರಹ, 'ಛತ್ರಪತಿ ಶಾಹೂ: ಜನರ ನೋವಿಗೆ ಮಿಡಿದ ಪ್ರಾಣಮಿತ್ರ' ಮತ್ತು 'ಕ್ರಾಂತಿಜ್ಯೋತಿ ಸಾವಿತ್ರಿಬಾಯಿ ಫುಲೆ' (ಜೀವನ ಚರಿತ್ರೆ )ಮುಂತಾದವು ಇವರ ಪ್ರಮುಖ ಕೃತಿಗಳು.

ಪ್ರಸ್ತುತ ಗದ್ಯಭಾಗವನ್ನು ಡಾ. ಎಚ್. ಎಸ್. ಅನುಪಮಾ ಅವರು ಬರೆದಿರುವ 'ಜೀವಕೋಶ' ಎಂಬ ವೈದ್ಯಲೋಕದ ಕಥನದಿಂದ ಆರಿಸಿಕೊಳ್ಳಲಾಗಿದೆ.

**ಕ್ಷೇತ್ರ:** ಓದುವುದು

**ಸಾಮರ್ಥ್ಯ :** ೨೦೦೦ ಪದಗಳನ್ನು ಓದಿ ಗ್ರಹಿಸುವುದು.

## ಪದಗಳ ಅರ್ಥ

ಅಂಕೆ–ಕಡಿವಾಣ, ನಿಯಂತ್ರಣ;

ಅಸ್ವಸ್ಥ–ಆರೋಗ್ಯವಿಲ್ಲದ;

ಕಠಿಣ–ಕಷ್ಟಕರವಾದ;

ಕಲುಷಿತ–ಕೊಳಕಾದ, ಬಗ್ಗಡವಾದ;

ಕೈಗೆಟುಕು–ಸುಲಭವಾಗಿ ದೊರೆಯುವುದು;

ಚಳುವಳಿ– ಆಂದೋಲನ;

ತವರು–ಜನ್ಮಸ್ಥಳ, ನೆಲೆ;

ತಹಬಂದಿ–ಹತೋಟಿ;

ನಿರಾಶ್ರಿತರು–ಆಶ್ರಯವಿಲ್ಲದ;

ನಿಕಟ–ಸಮೀಪ, ಹತ್ತಿರ;

ಪಿತಾಮಹ–ಬ್ರಹ್ಮ, ಅಜ್ಜ, ಜನ್ಮನೀಡಿದವ;

ಮೇಧಾವಿ–ಬುದ್ಧಿವಂತ;

ಸಬೂಬು–ನೆವ, ಕಾರಣ;

ಸೌಲಭ್ಯ–ಸೌಕರ್ಯ.

©KTBS Not to be republished

## ಟಿಪ್ಪಣಿ

**FRCS ಹಾಗೂ MRCP** ಪದವಿಗಳ ವಿಸ್ತೃತರೂಪ: Fellowship of the Royal colleges of sergeons ಹಾಗೂ Membership of the Royal colleges of physicians of the UK

**FRCS:** ಲಂಡನ್ನಿನ ರಾಯಲ್ ಕಾಲೇಜಿನಿಂದ ಸರ್ಜರಿಯಲ್ಲಿ ನೀಡುತ್ತಿದ್ದ ಪದವಿ.

**MRCP:** ಬ್ರಿಟನ್ನಿನ ರಾಯಲ್ ಕಾಲೇಜಿನ ವೈದ್ಯರಾಗಿ ಸದಸ್ಯತ್ವ.

**ದಂಡಿ ಸತ್ಯಾಗ್ರಹ:** ೧೯೩೦ರಲ್ಲಿ ಗಾಂಧೀಜಿಯವರ ನೇತೃತ್ವದಲ್ಲಿ ನಡೆದ ಉಪ್ಪಿನ ಸತ್ಯಾಗ್ರಹ.

**ಶುದ್ಧೀಕರಣ ಯೋಜನೆ:** ಕಲುಷಿತವಾಗಿರುವುದನ್ನು ಶುದ್ಧಗೊಳಿಸಲು ಹಾಕಿಕೊಂಡಿರುವ ಯೋಜನೆ.

**ಸಾಂಕ್ರಾಮಿಕ ರೋಗ:** ಒಬ್ಬರಿಂದ ಒಬ್ಬರಿಗೆ ಹರಡುವ ರೋಗ.

**ನಿರಾಶ್ರಿತರು:** ಮನೆ ಮಠ, ಆಸ್ತಿ ಎಲ್ಲವನ್ನೂ ಕಳೆದುಕೊಂಡವರು.

©KTBS Not to be republished

## ಅಭ್ಯಾಸ

**ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಜುಲೈ ಒಂದರಂದೇ 'ವೈದ್ಯರ ದಿನಾಚರಣೆ'ಯನ್ನು ಏಕೆ ಆಚರಿಸಲಾಗುತ್ತಿದೆ?

________________________________________

೨. ಕೇವಲ ಎರಡು ವರ್ಷ ಮೂರು ತಿಂಗಳ ಅವಧಿಯಲ್ಲಿ ಬಿ.ಸಿ. ರಾಯ್ ಅವರು ಪಡೆದ ಸ್ನಾತಕೋತ್ತರ ಪದವಿಗಳಾವುವು?

________________________________________

೩. ಆರೋಗ್ಯಸೇವೆಯು ಎಲ್ಲರ ಕೈಗೆಟುಕುವಂತೆ ಮಾಡಲು ಬಿ.ಸಿ. ರಾಯ್ ಅವರು ಕೈಗೊಂಡ ಕ್ರಮ ಯಾವುದು?

________________________________________

೪. ಬಿ. ಸಿ. ರಾಯ್ ಅವರು ಬಾರಕ್‌ಪೋರ್ ನಿಂದ ಗೆದ್ದ ಬಳಿಕ ಯಾವ ಯೋಜನೆಯನ್ನು ಕೈಗೊಳ್ಳಬೇಕೆಂದು ಒತ್ತಾಯ ಮಾಡಿದರು?

________________________________________

**ಆ) ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಯುವ ಪೀಳಿಗೆಯು ಬಿ. ಸಿ. ರಾಯ್ ಅವರ ಜೀವನ ವೃತ್ತಾಂತವನ್ನು ತಿಳಿದುಕೊಳ್ಳಬೇಕು ಏಕೆ?

________________________________________

________________________________________

________________________________________

೨. ಬಿ. ಸಿ. ರಾಯ್ ಅವರು ಗಾಂಧೀಜಿಯವರಿಗೆ ನಿಕಟವರ್ತಿಗಳಾದುದು ಹೇಗೆ?

________________________________________

________________________________________

________________________________________

೩. ಬಿ. ಸಿ. ರಾಯ್ ಅವರನ್ನು 'ಪಶ್ಚಿಮ ಬಂಗಾಳದ ಪಿತಾಮಹ' ಎಂದು ಏಕೆ ಕರೆಯುತ್ತಾರೆ?

________________________________________

________________________________________

________________________________________

**ಇ) ಬಿಟ್ಟಿರುವ ಸ್ಥಳಗಳನ್ನು ಸೂಕ್ತಪದಗಳಿಂದ ಭರ್ತಿಮಾಡಿರಿ.**

೧. ಬಿ. ಸಿ. ರಾಯ್ ಅವರು ಕೋಲ್ಕತಾ ವಿಶ್ವವಿದ್ಯಾಲಯದ ------------ಆದರು.

೨. ಬಿ. ಸಿ. ರಾಯ್ --------------ಅವರ ನೆಚ್ಚಿನ ಸೇನಾಪತಿಗಳಲ್ಲೊಬ್ಬರು.

೩. ಬಿ. ಸಿ. ರಾಯ್ ಅವರನ್ನು ------------ಎಂದು ಕರೆಯಲಾಗುತ್ತದೆ.

೪. ಬಿ. ಸಿ. ರಾಯ್ ಅವರಿಗೆ ಸಂದ ಪ್ರಶಸ್ತಿ ------------

©KTBS Not to be republished

ಈ) ಹಿಂದು ಮುಂದಾಗಿರುವ ಪದಗಳನ್ನು ಅರ್ಥಪೂರ್ಣವಾಕ್ಯ ಆಗುವಂತೆ ಕ್ರಮದಲ್ಲಿ ಬರೆಯಿರಿ.

೧. ಲಂಡನ್ನಿಗೆ ವಿದ್ಯಾಭ್ಯಾಸಕ್ಕಾಗಿ ಉನ್ನತ ಕೆಲಸಕ್ಕೆ ಆರ್ಥಿಕ ಬಲವಿಲ್ಲದೇ ಇದ್ದರೂ ತೆರಳುವ ಮಹತ್ವಾಕಾಂಕ್ಷೆ.

______________________________

______________________________

೨. ಅವರು ಪೂರೈಸಿದ ಪದವಿಗಳನ್ನು ವೈದ್ಯಕೀಯ ಭಿನ್ನ ಸ್ನಾತಕೋತ್ತರ ಎರಡು ಏಕಕಾಲದಲ್ಲಿ ಮೊದಲಿಗರು.

______________________________

______________________________

೩. ಬಿಡದ ಕಾವು ಚಳುವಳಿಯ ಯಾರನ್ನೂ ಸ್ವಾತಂತ್ರ್ಯ ಅದು ಕಾಲ.

______________________________

______________________________

**ಭಾಷಾ ಚಟುವಟಿಕೆ**

ಅ) ನಿಮ್ಮ ಶಿಕ್ಷಕರ ಸಹಾಯದಿಂದ 'ದಂಡಿ ಸತ್ಯಾಗ್ರಹ' ಕುರಿತು ಲಘು ಟಿಪ್ಪಣಿ ಬರೆಯಿರಿ.

ಆ) ಹತ್ತು ಜನಕ್ಕೆ ಕಡಿಮೆ ಇಲ್ಲದಂತೆ ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಪ್ರಖ್ಯಾತ ಸ್ತ್ರೀ ಮತ್ತು ಪುರುಷರ ಭಾವಚಿತ್ರಗಳನ್ನು ಸಂಗ್ರಹಿಸಿರಿ.

©KTBS Not to be republished

## ವ್ಯಾಕರಣ

### ಭಾಗ– 'ಅ'

ನಾವು ಆಡುವ ಮಾತುಗಳಲ್ಲಿ ಅನೇಕ ಬಗೆಯ ಶಬ್ದಗಳಿರುತ್ತವೆ. ಆ ಶಬ್ದಗಳನ್ನು ವ್ಯಾಕರಣದಲ್ಲಿ ಮುಖ್ಯವಾಗಿ ಮೂರು ಗುಂಪುಗಳಾಗಿ ವಿಂಗಡಿಸಿದ್ದಾರೆ.

(೧) ನಾಮಪದ (೨) ಕ್ರಿಯಾಪದ (೩) ಅವ್ಯಯ –ಇವೇ ಆ ಮೂರು ಗುಂಪುಗಳು.

ನಾಮಪದಗಳಲ್ಲಿ ಅನೇಕ ವಿಧಗಳಿವೆ. ಅವುಗಳಲ್ಲಿ ವಸ್ತುವಾಚಕವೂ ಒಂದು. ವಸ್ತುವಾಚಕಗಳಲ್ಲಿ ಮೂರು ವಿಧ

**೧ ರೂಢನಾಮ** **೨ ಅಂಕಿತನಾಮ** **೩ ಅನ್ವರ್ಥನಾಮ**

೧ ರೂಢಿಯಿಂದ ಬಂದ ಹೆಸರುಗಳು ರೂಢನಾಮ

೨ ಗುರುತಿಗಾಗಿ ಹಾಗೂ ವ್ಯವಹಾರದ ಉಪಯೋಗಕ್ಕಾಗಿ ಇಟ್ಟುಕೊಂಡ ಹೆಸರುಗಳು ಅಂಕಿತನಾಮ

೩ ರೂಪ, ಗುಣ, ಸ್ವಭಾವ, ವಿಶೇಷವಾದ ಅರ್ಥಕ್ಕೆ ಅನುಗುಣವಾಗಿ ಇಟ್ಟ ಹೆಸರುಗಳು ಅನ್ವರ್ಥನಾಮ.

### ಭಾಗ– 'ಆ'

**ಅ) ಕೆಳಗಿನ ವಾಕ್ಯಗಳಲ್ಲಿ ಅಡಿಗೆರೆ ಹಾಕಿರುವ ನಾಮಪದಗಳ ವಿಧಗಳನ್ನು ತಿಳಿಸಿರಿ.**

೧. <u>ವಿದ್ಯಾರ್ಥಿಗಳು</u> ಚೆನ್ನಾಗಿ ಓದುತ್ತಾರೆ

೨. <u>ರೂಪ</u> ಸ್ವಲ್ಪ ಬೇಗ ಬಂದಳು.

೩. <u>ಜಿಂಕೆ</u> ಚಂಗನೆ ಜಿಗಿಯಿತು.

೪. <u>ಗಡಿಯಾರ</u> ಕೆಟ್ಟು ಹೋಗಿದೆ.

©KTBS Not to be republished

**ಆ) ಕೆಳಗಿನ ವಾಕ್ಯಗಳಲ್ಲಿ ನಾಮಪದಗಳಿಗೆ ಅಡಿಗೆರೆ ಹಾಕಿರಿ.**

೧. ಶಿಲ್ಪ ಹಾಡುತ್ತಿದ್ದಾಳೆ.

೨. ನಾಯಿ ಓಡಿಹೋಯಿತು.

೩. ಕಲ್ಲುಬಂಡೆ ಉರುಳಿ ಹೋಯಿತು.

೪. ಕಾರವಾರ ನಮ್ಮನ್ನು ಕೈಬೀಸಿ ಕರೆಯುತ್ತದೆ.

**ಇ) ಕೆಳಗಿನ ಹೇಳಿಕೆಗಳಿಗೆ ಸರಿ ಹೊಂದುವ ಸೂಕ್ತ ಉತ್ತರವನ್ನು ಗುರುತಿಸಿ ಬರೆಯಿರಿ.**

೧. ವ್ಯಕ್ತಿ, ವಸ್ತು, ಸ್ಥಳ ಮತ್ತು ಪ್ರಾಣಿಗಳ ಹೆಸರನ್ನು ಸೂಚಿಸುವ ಪದ

ಅ. ಕ್ರಿಯಾವಿಶೇಷಣ ಆ. ಸರ್ವನಾಮ ಇ. ಕ್ರಿಯಾಪದ ಈ. ನಾಮಪದ

೨. ರೂಢನಾಮ ಪದಕ್ಕೆ ಉದಾಹರಣೆ

ಅ. ರೋಗಿ ಆ. ನದಿ ಇ. ಕಾವೇರಿ ಈ. ದಾವಣಗೆರೆ

೩. ಅಂಕಿತನಾಮ ಪದಕ್ಕೆ ಉದಾಹರಣೆ

ಅ. ಪರ್ವತ ಆ. ಶಾಲೆ ಇ. ಶಿಕ್ಷಕ ಈ. ಕಾವೇರಿ

೪. ಅನ್ವರ್ಥನಾಮ ಪದಕ್ಕೆ ಉದಾಹರಣೆ

ಅ. ಪುಸ್ತಕ ಆ. ಅರಸ ಇ. ಮನೆ ಈ. ವ್ಯಾಪಾರಿ

©KTBS Not to be republished

# ೭. ತಾಯ ಬರವು

– ಕಾವ್ಯಾನಂದ

**ಪ್ರವೇಶ:** ಕವಿಗಳು ಕನ್ನಡ ನಾಡನ್ನು ಅಭಿಮಾನ ಪೂರ್ವಕವಾಗಿ ಹಾಡಿ ಹೊಗಳಿದ್ದಾರೆ. ಕರ್ನಾಟಕದ ಹಲವು ಭಾಗಗಳ ಉಲ್ಲೇಖಗಳೊಂದಿಗೆ ಪ್ರತಿ ಪ್ರದೇಶದ ವಿಶಿಷ್ಟತೆ ಮತ್ತು ಕೊಡುಗೆಗಳನ್ನು ಕಾವ್ಯಾನಂದರು ಮನೋಜ್ಞವಾಗಿ ವರ್ಣಿಸಿದ್ದಾರೆ. ನಾಡಿನ ಬಗ್ಗೆ ಪ್ರೀತಿ ಹುಟ್ಟಿಸುವುದು ಈ ಕವನದ ಆಶಯವಾಗಿದೆ.

ಸೂರ್ಯ ಚಂದ್ರರೆ ಸಾಕ್ಷಿ ಸಪ್ತ ಸಾಗರ ಸಾಕ್ಷಿ
ಗಿರಿ ಸರೋವರ ಸಾಕ್ಷಿ ವನದೇವಿ ಸಾಕ್ಷಿ
ಗೋಮಟೇಶ್ವರ ಉಗ್ರನರಸಿಂಹರೇ ಸಾಕ್ಷಿ
ಶ್ರೀ ವಿರೂಪಾಕ್ಷನೀ ಗೋಪುರವೆ ಸಾಕ್ಷಿ ॥೧॥



ಕೈಲಾಸವೇ ಸಾಕ್ಷಿ ಕಲ್ಯಾಣವೇ ಸಾಕ್ಷಿ
ಶೃಂಗೇರಿಯೇ ಸಾಕ್ಷಿ ಚಾಮುಂಡಿ ಸಾಕ್ಷಿ
ಬಾದಾಮಿ ಬೇಲೂರು ಉಡುಪಿ ಉಡುತಡಿ ಸಾಕ್ಷಿ
ಹೇಳುವೆನು ನಿಜವನ್ನೆ ಕನ್ನಡದ ಸಾಕ್ಷಿ ॥೨॥

ಯೋಗನಿದ್ರೆಯ ತೊರೆದು ಪೂರ್ಣರೂಪವ ತಳೆದು
ಮತ್ತೆ ಮೈದೋರುವಳು ಕನ್ನಡದ ತಾಯಿ
ಬನ್ನಿ ತಾಯ್ನಾಡಿಗರೆ ತಾಯಡಿಯ ಪೂಜೆಗೆ
ತನ್ನಿ ತನಿವಗೆಯೆಂಬ ಹೂವು ಕಾಯಿ ॥೩॥

ಕಾಲು ತೊಳೆಯಲು ಬನ್ನಿ ಕಾವೇರಿ ಕೃಷ್ಣೆಯರೆ
ಮೈದೊಳೆಯ ಬನ್ನಿ ಓ ಭೀಮೆಗೋದೆಯರೆ
ತಾಯ ನೈವೇದ್ಯಕ್ಕೆ ನಿಮ್ಮೆದೆಯ ಸೊದೆ ತನ್ನಿ
ಕನ್ನಡದ ಗೋಕುಲದ ಕೃಷ್ಣ ರಾಧೆಯರೆ ॥೪॥

©KTBS Not to be republished

ಮಲೆನಾಡೆ ತಾ ನಿನ್ನ ಪಚ್ಚ ಪಸುರಿನ ಸೀರೆ
ಕೊಡುಗೆ ಕೊಡು ರಂಜಿಸುವ ಮಂಜು ರವಿಕೆ
ಕಾರಾವಾರವೆ ತಾರ ತೋರಮುತ್ತಿನ ಹಾರ
ಮಂಗಳೂರಿಡು ನಿನ್ನ ವಜ್ರದಂಗುಲಿಕೆ ॥೫॥

ಮುಡಿಗೆ ತಾ ಮೈಸೂರೆ ಮನ ಸೆಳೆವ ಮಲ್ಲಿಗೆಯ
ಕೋಲಾರ ಕೊಡು ನಿನ್ನ ಚಿನ್ನದೋಲೆ
ಬೆಳುವಲದ ಒಕ್ಕಲತಿ ಉಡಿಯಕ್ಕಿಯನು ತುಂಬು
ಹಾವೇರಿ ತಾ ನಿನ್ನ ಯಾಲಕ್ಕಿಮಾಲೆ ॥೬॥

ತಿಪಟೂರೆ ತೆಂಗು ಒಡೆ ಶಿವಮೊಗ್ಗ ಅಡಕೆ ಕೊಡು
ಸಹ್ಯಾದ್ರಿ ಮದಗಜವೆ ಚವರಿ ಬೀಸು
ನೀಲಗಿರಿ ತೊಡೆ ನಿನ್ನ ಶ್ರೀಗಂಧಲೇಪವನು
ಬಳ್ಳಾರಿ ಹರಳುಗಳ ಹಾಸಿಗೆಯ ಹಾಸು ॥೭॥

ಓ ಶರಾವತಿ ಸಾರು ಶಿವಸಮುದ್ರವೆ ಸಾರು
ತುಂಗಭದ್ರೆಯೆ ಸಾರು ತಾಯ ಬರವ
ಇನ್ನು ಫಲವೀಯುವುವು ಈ ನಾಡ ಗಣಿ ಕಣಿವೆ
ಜಲಪಾತ ಹೊನಲುಗಳು ಕಳೆದು ಬರವ ॥೮॥

**ಕ್ಷೇತ್ರ:** ಆಲಿಸುವುದು
**ಸಾಮರ್ಥ್ಯ :** ಸಮರ್ಪಕವಾಗಿ ಕಂಠಪಾಠ ಒಪ್ಪಿಸುವುದು

©KTBS Not to be republished

**ಕೃತಿಕಾರರ ಪರಿಚಯ:**



ಕನ್ನಡ, ಉರ್ದು, ಇಂಗ್ಲಿಷ್ ಮೂರೂ ಭಾಷೆಗಳಲ್ಲೂ ಪರಿಣತರಾಗಿದ್ದ ಸಿದ್ಧಯ್ಯ ಪುರಾಣಿಕರು 'ಕಾವ್ಯಾನಂದ' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿದ್ದಾರೆ. ಕೊಪ್ಪಳ ಜಿಲ್ಲೆಯ ದ್ಯಾಂಪುರದವರಾದ ಇವರು ೧೯೧೮ನೆಯ ಸೆಪ್ಟೆಂಬರ್ ೧೮ರಂದು ಜನಿಸಿದರು. 'ಜಲಪಾತ', 'ಮಾನಸ ಸರೋವರ', 'ಮೊದಲು ಮಾನವನಾಗು', 'ಹಾಲ್ದೆನೆ', 'ಕರುಣಾ ಶ್ರಾವಣ' (ಕವನ ಸಂಕಲನಗಳು), 'ಭಾರತವೀರ', 'ಆತ್ಮಾರ್ಪಣೆ', 'ಗಿರಿಜಾಕಲ್ಯಾಣ' (ನಾಟಕಗಳು), ಗುಲಬರ್ಗಾದಲ್ಲಿ (೧೯೮೭) ಜರುಗಿದ ೫೮ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿಗಳೂ ಇವರಿಗೆ ಲಭ್ಯವಾಗಿವೆ.

ತಾಯ ಬರವು ಪದ್ಯಭಾಗವನ್ನು ಸಿದ್ಧಯ್ಯ ಪುರಾಣಿಕರ 'ಕಾವ್ಯಾನಂದ ಸಮಗ್ರ ಕಾವ್ಯ'ದಿಂದ ಆರಿಸಿಕೊಳ್ಳಲಾಗಿದೆ.

## ಪದಗಳ ಅರ್ಥ

ಅಂಗುಲಿಕೆ–ಬೆರಳ ಆಭರಣ, ಉಂಗುರ;
ಆಣೆ–ಪ್ರತಿಜ್ಞಾ ಸೂಚಕವಾದ ಮಾತು;
ಉಗ್ರ–ತೀಕ್ಷ್ಣವಾದ, ಭಯಂಕರವಾದ;
ಉಡಿಯಕ್ಕಿ–ಮಡಿಲು ತುಂಬಲು ಬಳಸುವ ಅಕ್ಕಿ;
ಕರ–ಕೈ, ಹಸ್ತ;
ಗಿರಿ– ಪರ್ವತ, ಬೆಟ್ಟ;
ಚವರಿ–ಚಮರೀಮೃಗದ ಕೂದಲು, ಬೀಸಣಿಗೆ;
ತನಿವಗೆ–ಕಂಪಿನ ಕೂಡಿದ, ರುಚಿಯಾದ, ಪಕ್ವವಾದ;
ತಾರ–ತೆಗೆದುಕೊಂಡು ಬಾ;
ನೈವೇದ್ಯ–ದೇವರಿಗೆ ಸಮರ್ಪಣೆ ಮಾಡುವ ಹಣ್ಣು, ಕಾಯಿ,
ಪಚ್ಚೆ–ಪಚ್ಚೆ, ಹಸಿರು ಬಣ್ಣ;
ಬಾನಿನುಲಿ–ಬಾನುಲಿ, ರೇಡಿಯೊ, ಆಕಾಶವಾಣಿ;
ಮದಗಜ–ಸೊಕ್ಕಿದ ಆನೆ, ಅಮಲೇರಿದ ಆನೆ;
ಸಪ್ತ– ಒಂದು ಸಂಖ್ಯೆ, ಏಳು;
ಸಾಕ್ಷಿ– ಪುರಾವೆ, ರುಜುವಾತು, ಪ್ರತ್ಯಕ್ಷನೋಡಿದವರು;
ಹೊನಲು– ಹೊಳೆ, ಪ್ರವಾಹ.

©KTBS Not to be republished

## ಅಭ್ಯಾಸ

**ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ತಾಯಡಿಯ ಪೂಜೆಗೆ ತಾಯ್ನಾಡಿಗರು ಏನನ್ನು ತರಬೇಕೆಂದು ಕಾವ್ಯಾನಂದ ಹೇಳುತ್ತಿದ್ದಾರೆ?

_______________________________________________

_______________________________________________

೨. ಕನ್ನಡಮ್ಮನ ನೈವೇದ್ಯಕ್ಕೆ ಏನನ್ನು ತರಬೇಕೆಂದು ಸಿದ್ಧಯ್ಯ ಪುರಾಣಿಕರು ಬಯಸುತ್ತಾರೆ?

_______________________________________________

_______________________________________________

೩. ಸ್ವರ್ಗದಲೇ ನಿಂತು ಕನ್ನಡಮ್ಮನಿಗೆ ಯಾರು ಕೈಮುಗಿಯುವರೆಂದು ಸಿದ್ಧಯ್ಯ ಪುರಾಣಿಕರು ಹೇಳಿದ್ದಾರೆ?

_______________________________________________

_______________________________________________

೪. ಕನ್ನಡಮ್ಮನಿಗೆ ಚವರಿ ಬೀಸಲು ಕವಿಯು ಯಾರನ್ನು ಕರೆದಿದ್ದಾರೆ?

_______________________________________________

_______________________________________________

©KTBS Not to be republished

೫. ಕವಿಯು ನೀಲಗಿರಿಯನ್ನು ಏನೆಂದು ಬೇಡಿದ್ದಾರೆ?

_______________________________________________

_______________________________________________

೬. ಸಪ್ತ ಸಾಗರಗಳು ಯಾವುವು?

_______________________________________________

_______________________________________________

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

೧. ಕನ್ನಡಮ್ಮನ ಬರುವಿಕೆಗೆ ಯಾರು ಯಾರು ಸಾಕ್ಷಿ ಎಂದು ಕಾವ್ಯಾನಂದರು ಹೇಳಿದ್ದಾರೆ?

_______________________________________________

_______________________________________________

_______________________________________________

_______________________________________________

೨. ಕನ್ನಡನಾಡಿನ ಪ್ರಾದೇಶಿಕ ವೈವಿಧ್ಯತೆಯು 'ತಾಯ ಬರುವು' ಕವನದಲ್ಲಿ ಹೇಗೆ ವ್ಯಕ್ತವಾಗಿದೆ?

_______________________________________________

_______________________________________________

_______________________________________________

_______________________________________________

©KTBS Not to be republished

ಇ) ಮೊದಲೆರಡು ಪದಗಳಿಗೆ ಇರುವ ಸಂಬಂಧವನ್ನು ಮೂರನೆಯ ಪದಕ್ಕೆ ಕಲ್ಪಿಸಿ ಬರೆಯಿರಿ.

೧. ಮಲೆನಾಡು : ಪಚ್ಚ ಪಸುರಿನ ಸೀರೆ : : ಕೊಡಗು :----------

೨. ಕಾಲು ತೊಳೆಯಲು : ಕಾವೇರಿ ಕೃಷ್ಣೆಯರು : : ಮೈದೊಳೆಯಲು :--------

೩. ಮಂಗಳೂರು : ವಜ್ರದುಂಗುರ : : ಕಾರವಾರ :-------------

೪. ಮೈಸೂರು : ಮಲ್ಲಿಗೆ : : ಕೋಲಾರ :---------------

೫. ಹಾವೇರಿ : ಯಾಲಕ್ಕಿಮಾಲೆ : : ಬೆಳುವಲ :-----------

೬. ಶಿವಮೊಗ್ಗ : ಅಡಕೆ : : ತಿಪಟೂರು :------------

## ಭಾಷಾಭ್ಯಾಸ

ಅ) ಕೆಳಗಿನ ಪದಗಳಿಗೆ ತತ್ಸಮಗಳಿಗೆ ತದ್ಭವಗಳನ್ನು, ತದ್ಭವಗಳಿಗೆ ತತ್ಸಮಗಳನ್ನು ಬರೆಯಿರಿ.

೧. ಸೂರ್ಯ ----------

೨. ಚಂದ್ರ ------------

೩. ವನ -------------

೪. ಮಲ್ಲಿಗೆ -----------

೫. ಸೊದೆ ------------.

©KTBS Not to be republished

ಆ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿರಿ.

**ಮಾದರಿ:** ಸಹ್ಯಾದ್ರಿ

ಕುವೆಂಪುರವರು ಸಹ್ಯಾದ್ರಿಯ ಅಗಣಿತ ಚೆಲುವನ್ನು ಮನೋಜ್ಞವಾಗಿ ವರ್ಣಿಸಿದ್ದಾರೆ.

೧. ಸಾಕ್ಷಿ : ------------------------------------

೨. ಕೈಲಾಸ : ------------------------------------

೩. ಯೋಗನಿದ್ರೆ : ------------------------------------

೪. ನೈವೇದ್ಯ: ------------------------------------

೫. ರಂಜಿಸು : ------------------------------------

೬. ಸಹ್ಯಾದ್ರಿ. : ------------------------------------

ಇ) ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.

ಮಾದರಿ: ನಿಮ್ಮೆದೆ = ನಿಮ್ಮ + ಎದೆ

ಗೊಮ್ಮಟೇಶ್ವರ ------------------------------------

ಮೈದೋರು ------------------------------------

ತನಿವಗೆ ------------------------------------

ನಿಮ್ಮೆದೆ ------------------------------------

ಉಡಿಯಕ್ಕಿ. ------------------------------------

©KTBS Not to be republished

## ಭಾಷಾ ಚಟುವಟಿಕೆ

ಅ) ಕನ್ನಡ ನಾಡು ನುಡಿಯನ್ನು ಕುರಿತಂತೆ ನೀವು ಓದಿರುವ/ಕೇಳಿರುವ ಕವನಗಳನ್ನು ತರಗತಿಯಲ್ಲಿ ಸಾಮೂಹಿಕವಾಗಿ ಹಾಡಿರಿ. ಯಾವುದಾದರು ಒಂದು ಕವನವನ್ನು ಬರೆಯಿರಿ.

______________________________

______________________________

______________________________

______________________________

______________________________

______________________________

______________________________

______________________________

______________________________

______________________________

ಆ) ಕನ್ನಡ ನಾಡಿನ ಹಿರಿಮೆಯನ್ನು ಬಿಂಬಿಸುವ ಚಿತ್ರಗಳನ್ನು ಸಂಗ್ರಹಿಸಿ ಒಂದು ಆಲ್ಬಮ್ ತಯಾರಿಸಿರಿ.

©KTBS Not to be republished

# ೮. ಆರ್ಕಿಮಿಡೀಸ್

– ಸಂಗ್ರಹ

ಪ್ರವೇಶ: ಮಕ್ಕಳೇ, ನೀವು ವಿಜ್ಞಾನದ ಆವಿಷ್ಕಾರಗಳ ಹಿಂದಿನ ಕಥೆಯನ್ನು ಕೇಳಿದ್ದೀರಾ? ಏನೋ ಮಾಡಲು ಹೋಗಿ ಮತ್ತಿನ್ನೇನನ್ನೋ ಕಂಡು ಹಿಡಿದ ಕಥೆ ತಿಳಿದಿದ್ದೀರಾ? ಗಣಿತಜ್ಞ ವಿಜ್ಞಾನಿಯೊಬ್ಬರ ಕುಶಲಮತಿ, ಸಕಾಲಿಕ ಆಲೋಚನೆ, ಮುಂದಾಲೋಚನೆ ದೇಶವನ್ನು ರಕ್ಷಿಸಿದ ಬಗೆ ಹಾಗೂ ವಿಜ್ಞಾನದ ಆವಿಷ್ಕಾರಗಳ ರೋಚಕ ಘಟನೆಗಳನ್ನು ಈ ಗದ್ಯಭಾಗದಲ್ಲಿ ಕಾಣಬಹುದಾಗಿದೆ.

ಆರ್ಕಿಮಿಡೀಸ್ ಕ್ರಿ.ಪೂ. ೨೮೭ ರಲ್ಲಿ ಸಿಸಿಲಿ ದ್ವೀಪದ ಸಿರಾಕ್ಯೂಸ್‌ನಲ್ಲಿ ಜನಿಸಿದನು. ಅಲ್ಲಿಯ ದೊರೆಯಾದ ಎರಡನೆಯ ಹೈರೋಗೆ ಇವನು ಸಂಬಂಧಿಯಾಗಿದ್ದನು. ಈ ದೊರೆಯೇ ಆರ್ಕಿಮಿಡೀಸನಿಗೆ ಆಶ್ರಯ ನೀಡಿದ್ದನು. ಈತನ ಪ್ರಾಥಮಿಕ ವಿದ್ಯಾಭ್ಯಾಸವು ಸಿಸಿಲಿಯಲ್ಲಿಯೇ ನಡೆಯಿತು. ನಂತರ ಈಜಿಪ್ಟ್ ದೇಶದ ಅಲೆಕ್ಸಾಂಡ್ರಿಯಾ ವಿಶ್ವವಿದ್ಯಾನಿಲಯದಲ್ಲಿ ಅಭ್ಯಾಸ ಮಾಡಿ ಸಿಸಿಲಿಗೆ ವಾಪಸ್ಸಾದನು. ಆರ್ಕಿಮಿಡೀಸನ ತಂದೆ ಫಿಡಿಯಾಸ್. ಇವನು ಆ ಕಾಲದ ಶ್ರೇಷ್ಠ ಖಗೋಳಶಾಸ್ತ್ರಜ್ಞರಾಗಿದ್ದನು. ಬಹುಶಃ ಆರ್ಕಿಮಿಡೀಸನ ವೈಜ್ಞಾನಿಕ ಮನೋಭಾವಕ್ಕೆ ಆತನ ತಂದೆಯೇ ಪ್ರೇರಣೆಯಾಗಿರಬಹುದು. ಬಾಲ್ಯದಲ್ಲಿ ಇವನು ಪ್ರತಿಯೊಂದು ವಸ್ತುವನ್ನು ಗಮನಿಸುತ್ತಾ ಇದು ಏಕೆ ಹೀಗೆ ವರ್ತಿಸುತ್ತದೆ? ಈ ವಸ್ತು ಪ್ರತಿಯೊಂದು ನಿಮಿಷದಲ್ಲಿಯೂ ಹೀಗೇ ವರ್ತಿಸುತ್ತದೆಯೇ ಎಂದು ಸದಾ ಕಾಲ ಯೋಚಿಸುತ್ತಿದ್ದನು. ಇವನ ಈ ಯೋಚನಾ ವಿಧಾನವೇ ಮುಂದಿನ ಸಂಶೋಧನೆಗಳಿಗೆ ಕಾರಣವಾಯಿತು.

ಒಮ್ಮೆ ಸಿರಾಕ್ಯೂಸ್‌ನ ರಾಜ ಎರಡನೆಯ ಹೈರೋ ಒಬ್ಬ ಅಕ್ಕಸಾಲಿಗನಿಗೆ ಒಂದು ಚಿನ್ನದ ಕಿರೀಟ ಮಾಡಲು ತಿಳಿಸಿದನು. ಕೆಲವು ದಿನಗಳ ನಂತರ ಅಕ್ಕಸಾಲಿಗನು ಕುಶಲತೆಯಿಂದ ತಯಾರಿಸಿದ ಕಿರೀಟವನ್ನು ರಾಜನಿಗೆ ಒಪ್ಪಿಸಿದನು. ಆದರೆ ರಾಜನಿಗೆ ಒಂದು ಅನುಮಾನ ಕಾಡಿತು. ಅದೇನೆಂದರೆ ಈ ಕಿರೀಟವು ಶುದ್ಧ ಚಿನ್ನದಲ್ಲಿಯೇ ತಯಾರಿಸಿದೆಯೋ, ಇದಕ್ಕೆ ಬೆಳ್ಳಿ, ತಾಮ್ರವನ್ನು ಬೆರೆಸಿದೆಯೋ ಎಂದು. ಆದರೆ ಇದನ್ನು ತಿಳಿಯಲು ಕಿರೀಟವನ್ನು ಪೂರ್ಣವಾಗಿ ಕರಗಿಸಬೇಕಾಗುತ್ತಿತ್ತು. ರಾಜನಿಗೆ ಸುಂದರವಾದ ಕಿರೀಟ ಕರಗಿಸುವುದು ಇಷ್ಟವಿರಲಿಲ್ಲ. ಅವನು ಆರ್ಕಿಮಿಡೀಸನನ್ನು ಕರೆದು ಕಿರೀಟವನ್ನು ಕರಗಿಸದೇ ಶುದ್ಧ ಚಿನ್ನದಲ್ಲಿ ತಯಾರಿಸಿದೆಯೇ ಇಲ್ಲವೇ? ಎಂದು ಪರೀಕ್ಷಿಸಲು ಹೇಳಿದನು. ಇದೇ ವಿಷಯವನ್ನು ತಲೆಯಲ್ಲಿ ಹೊತ್ತು ಆರ್ಕಿಮಿಡೀಸನು ಹಗಲು ರಾತ್ರಿ ಯೋಚಿಸಲಾರಂಭಿಸಿದನು. ಒಂದು ದಿನ ಆತ ಸ್ನಾನ ಮಾಡಲು ನೀರು ತುಂಬಿದ ಸ್ನಾನದ ತೊಟ್ಟಿಯಲ್ಲಿ ಇಳಿದನು. ಕೂಡಲೇ ಸ್ವಲ್ಪ ನೀರು ತೊಟ್ಟಿಯಿಂದ ಹೊರಚೆಲ್ಲಿತು. ಅದನ್ನು ನೋಡಿದ ಆರ್ಕಿಮಿಡೀಸನ ತಲೆಯಲ್ಲಿ ಚಿನ್ನದ ಕಿರೀಟದ ಉತ್ತರ ಹೊಳೆಯಿತು. ತಕ್ಷಣ ಆತನು ಸ್ನಾನದ ತೊಟ್ಟಿಯಿಂದ ಹಾಗೇ ರಸ್ತೆಯಲ್ಲಿ "ಯುರೇಕಾ ಯುರೇಕಾ" ಎಂದು ಕೂಗಿಕೊಳ್ಳುತ್ತಾ ರಾಜನ ಬಳಿಗೆ ಓಡೋಡಿ ಬಂದನು. ಗ್ರೀಕ್ ಭಾಷೆಯಲ್ಲಿ ಯುರೇಕಾ ಎಂದರೆ "ನಾನು ಕಂಡು ಹಿಡಿದೆ" ಎಂದು.

"ಆರ್ಕಿಮಿಡೀಸನ ಪ್ರಕಾರ ಒಂದು ವಸ್ತುವನ್ನು ನೀರಿನಲ್ಲಿ ಮುಳುಗಿಸಿದಾಗ ಅದು ಅಷ್ಟೇ ಪ್ರಮಾಣದ ನೀರನ್ನು ಹೊರಚೆಲ್ಲುತ್ತದೆ." ಇದನ್ನು ಜಗತ್ಪ್ರಸಿದ್ಧವಾದ 'ಆರ್ಕಿಮಿಡೀಸ್ ತತ್ವ' ಎಂದು ಕರೆಯುತ್ತಾರೆ. ಈ ತತ್ವದಿಂದ ಆತ ಕಿರೀಟದ ಸಮಸ್ಯೆಯನ್ನು ಬಗೆಹರಿಸಿದನು.

©KTBS Not to be republished

ಇವನು ಒಬ್ಬ ಶ್ರೇಷ್ಠ ಗಣಿತಜ್ಞ ಹಾಗೂ ವಿಜ್ಞಾನಿ. ನೀರಿಗೂ ಮೇಲ್ಮುಖ ಬಲವಿದೆ ಎಂದು ತೋರಿಸಿಕೊಟ್ಟವನು. ದೇಶ ದೇಶಗಳನ್ನು ಸಂಪರ್ಕಿಸುವ ಸಾಧನಗಳಲ್ಲಿ ಒಂದಾದ ಹಡಗುಗಳ ಚಲನೆಯ ತತ್ವವು ಆರ್ಕಿಮಿಡೀಸ್‌ನನ್ನು ವಿಶ್ವದ ಶ್ರೇಷ್ಠ ವಿಜ್ಞಾನಿಯನ್ನಾಗಿಸಿತು.

ಒಮ್ಮೆ ಸಿರಾಕ್ಯುಸ್ ದ್ವೀಪದ ಮೇಲೆ ಶತ್ರುಗಳು ದಾಳಿ ನಡೆಸಿದ್ದರು. ಅದು ದ್ವೀಪವಾದ ಕಾರಣ ಸಮುದ್ರದ ಮೂಲಕ ಧಾಳಿ ನಡೆಸಲು ಸಜ್ಜಾಗಿ, ದ್ವೀಪದ ಸುತ್ತಲೂ ದೊಡ್ಡ ದೊಡ್ಡ ಹಡಗುಗಳಲ್ಲಿ ಶತ್ರುಗಳು ಬಂದರು. ಆ ಸಣ್ಣ ದ್ವೀಪದ ರಾಜನಿಗೆ ಏನು ಮಾಡಬೇಕೆಂದು ತೋಚಲಿಲ್ಲ. ಆತ ಎದೆಗುಂದದೆ ತನಗೆ ಆಪ್ತನಾಗಿದ್ದ ವಿಜ್ಞಾನಿ ಆರ್ಕಿಮಿಡೀಸನನ್ನು ಕರೆಸಿದನು. ಇಬ್ಬರೂ ಸೇರಿ ಏನು ಮಾಡಬೇಕೆಂಬುದನ್ನು ಚರ್ಚಿಸಿದರು. ಕೂಡಲೇ ಆರ್ಕಿಮಿಡೀಸ್ ಒಂದು ಉಪಾಯ ಮಾಡಿದನು.



© KTBS Not to be republished

ಸಮುದ್ರಕ್ಕಿಂತ ಎತ್ತರವಾದ ಭಾಗಗಳಲ್ಲಿ ಅರ್ಧಗೋಲಾಕಾರದ ದೊಡ್ಡ ದೊಡ್ಡ ತಗ್ಗುಗನ್ನಡಿಗಳನ್ನು ನಿರ್ದಿಷ್ಟ ಕೋನಗಳಲ್ಲಿ ನಿಲ್ಲಿಸಲು ಸೇವಕರಿಗೆ ಸೂಚಿಸಿದನು. ಹಾಗೆ ನಿಲ್ಲಿಸಿದ ಆ ಕನ್ನಡಿಗಳಿಂದ ಸೂರ್ಯನ ಬೆಳಕನ್ನು ಶತ್ರುಗಳ ಹಡಗುಗಳ ಮೇಲೆ ಒಟ್ಟಾಗಿ ಬೀಳುವಂತೆ ಜೋಡಿಸಲಾಗಿತ್ತು. ಶತ್ರುಗಳ ಸೈನ್ಯ ದ್ವೀಪದ ಹತ್ತಿರಕ್ಕೆ ಬರತೊಡಗಿದಂತೆ ಕನ್ನಡಿಗಳು ಸೂರ್ಯನ ಕಿರಣಗಳನ್ನು ಆ ಹಡಗುಗಳ ಹಾಯಿ ಬಟ್ಟೆಗಳ ಮೇಲೆ ಕೇಂದ್ರೀಕರಿಸಿ, ಹಡಗುಗಳು ಹತ್ತಿ ಉರಿಯತೊಡಗಿದವು. ಆರ್ಕಿಮಿಡೀಸನ ವೈಜ್ಞಾನಿಕ ಚಿಂತನೆ ಸಮರ್ಪಕವಾಗಿ ಕೆಲಸ ಮಾಡಿತ್ತು. ಶತ್ರುಗಳ ಸೈನ್ಯ ಸಂಪೂರ್ಣವಾಗಿ ಸೋತು ಹಿಮ್ಮೆಟ್ಟಿತ್ತು.

ಮರಣ ಹೊಂದಿದಾಗ ಆತನಿಗೆ ಎಪ್ಪತ್ತೈದು ವರ್ಷ ವಯಸ್ಸಾಗಿತ್ತು. ಎರಡನೆಯ ಪ್ಯೂನಿಕ್ ಯುದ್ಧದಲ್ಲಿ ರೋಮನ್ನರು ಸಿರಾಕ್ಯುಸ್ ನಗರವನ್ನು ಆಕ್ರಮಿಸಿದರು. ಸಂಶೋಧನೆಯಲ್ಲಿ ಆರ್ಕಿಮಿಡೀಸ್ ತೊಡಗಿದ್ದ ಕಾರಣ ರೋಮನ್ ಸೈನಿಕರ ಮಾತನ್ನು ಆತ ಕೇಳಲಿಲ್ಲ. ಆಗ ಸೈನಿಕರು ಕತ್ತಿಯಿಂದ ಇರಿದು

ಆರ್ಕಿಮಿಡೀಸನನ್ನು ಕೊಂದರು. ತನ್ನ ಜೀವಿತದ ಅವಧಿಯಲ್ಲಿ ಆರ್ಕಿಮಿಡೀಸ್ ದೇಶವನ್ನು ರಕ್ಷಿಸಲು ರಾಜನಿಗೆ ಅನೇಕ ಬಾರಿ ಸಹಾಯ ಮಾಡಿದ್ದನು. ಅದಕ್ಕಾಗಿ ಹಲವಾರು ಯುದ್ಧ ಯಂತ್ರಗಳನ್ನು ಕಂಡು ಹಿಡಿದಿದ್ದನು. ಆರ್ಕಿಮಿಡೀಸನ ಮಹತ್ವದ ಸಂಶೋಧನೆಯನ್ನು ನೆನಪಿಸುವಂತೆ ಮತ್ತು ಆತನ ಇಚ್ಛೆಯಂತೆ ಅವನ ಸಮಾಧಿಯ ಮೇಲೆ ಒಂದು ಸಿಲಿಂಡರ್ ಹಾಗೂ ಗೋಳವನ್ನು ಇರಿಸಲಾಗಿದೆ.

**ಕ್ಷೇತ್ರ** : ಮಾತನಾಡುವುದು

**ಸಾಮರ್ಥ್ಯ** : ಪದ್ಯದಲ್ಲಿರುವ ಮುಖ್ಯ ವಿಷಯ ಹಾಗೂ ಘಟನಾವಳಿಗಳಲ್ಲಿರುವ ಮುಖ್ಯ ಕಾರ್ಯಕಾರಣ ಸಂಬಂಧ ಗುರುತಿಸುವುದು.

## ಪದಗಳ ಅರ್ಥ

ಆಪ್ತ–ಆತ್ಮೀಯ, ಹತ್ತಿರದ;

ಆಶ್ರಯ–ಆಸರೆ, ಆಧಾರ;

ಉರಿ–ಸುಡು;

ಎದೆಗುಂದು–ಅಧೀರನಾಗು, ಹೆದರು;

ಕಾರ್ಯೋನ್ಮುಖ–ಕೆಲಸದಲ್ಲಿ ನಿರತ;

ಕುಶಲತೆ–ನೈಪುಣ್ಯ;

ಕೋನ–ಎರಡು ಸಮತಲಗಳು ಕೂಡುವ ಜಾಗ;

ಕೇಂದ್ರೀಕರಿಸು–ಒಂದೇ ಸ್ಥಳದಲ್ಲಿ ನಿಲ್ಲಿಸು;

ಕ್ಷಿಪ್ರ–ವೇಗ;

ಗಣಿತಜ್ಞ–ಗಣಿತ ವಿಷಯದಲ್ಲಿ ಪಾಂಡಿತ್ಯ ಪಡೆದಿರುವವ;

ಚಿಂತನೆ–ಆಲೋಚನೆ;

ತೋಳು–ಹೊಳೆ;

ದ್ವೀಪ–ನಡುಗಡ್ಡೆ, ಸುತ್ತಲೂ ನೀರಿನಿಂದ ಆವೃತವಾದ ಭೂಪ್ರದೇಶ;

ನಿರ್ದಿಷ್ಟ–ನಿಖರ;

ಬಹುಶಃ–ಬಹುತೇಕ;

ಮೊರೆ–ವಿನಂತಿ, ಬೇಡಿಕೆ;

ಸತತ–ನಿರಂತರ;

ಸಮಾಧಿ–ಗೋರಿ;

ಸಂಶೋಧನೆ–ಹೊಸದರ ಹುಡುಕುವಿಕೆ;

ಖಗೋಳಶಾಸ್ತ್ರಜ್ಞ–ಆಕಾಶ ಕಾಯಗಳ ಮಾಹಿತಿ ತಜ್ಞ;

ಶ್ರೇಷ್ಠ–ಪ್ರಸಿದ್ಧ, ಹೆಸರಾಂತ;

ಹಾಯಿಬಟ್ಟೆ–ಗಾಳಿಯ ಸಹಾಯದಿಂದ ಹಡಗು ಚಲಿಸಲು ಕಟ್ಟುವ ಬಟ್ಟೆ;

ಹಿಮ್ಮೆಟ್ಟು–ಹಿಂಜರಿ, ಬೆನ್ನು ತೋರಿಸು.

©KTBS Not to be republished

## ಅಭ್ಯಾಸ

**ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

೧. ಸಿರಾಕ್ಯುಸ್‌ನ ರಾಜನ ಹೆಸರೇನು?

______________________________________

೨. 'ಯುರೇಕಾ' – ಇದು ಯಾವ ಭಾಷೆಯ ಪದ?

______________________________________

೩. ಶತ್ರುಗಳು ಆಕ್ರಮಣ ಮಾಡಿದಾಗ ರಾಜನು ಯಾರ ಮೊರೆ ಹೋದನು?

______________________________________

೪. ಕನ್ನಡಿಗಳು ಸೂರ್ಯನ ಕಿರಣಗಳನ್ನು ಎಲ್ಲಿ ಕೇಂದ್ರೀಕರಿಸುವಂತೆ ಆರ್ಕಿಮಿಡೀಸನು ಮಾಡಿದನು?

______________________________________

೫. ಆರ್ಕಿಮಿಡೀಸನ ಸಮಾಧಿಯ ಮೇಲೆ ಆತನ ಇಚ್ಛೆಯಂತೆ ಏನನ್ನು ಇರಿಸಲಾಗಿದೆ?

______________________________________

**ಆ) ಪ್ರಶ್ನೆಗಳಿಗೆ ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ಆರ್ಕಿಮಿಡೀಸನ ಸಂಶೋಧನೆಗಳಿಗೆ ಅವನ ತಂದೆ ಹೇಗೆ ಪ್ರೇರಣೆ ನೀಡಿದರು?

______________________________________

______________________________________

______________________________________

©KTBS Not to be republished

೨. ಆರ್ಕಿಮಿಡೀಸನು ಶತ್ರು ಸೇನೆಯನ್ನು ಹಿಮ್ಮೆಟ್ಟಿಸಲು ಮಾಡಿದ ಉಪಾಯವೇನು?

_______________________________________________

_______________________________________________

_______________________________________________

೩. ಆರ್ಕಿಮಿಡೀಸ್ ಕೊಲೆಗೆ ಕಾರಣವಾದ ಪ್ರಸಂಗವನ್ನು ತಿಳಿಸಿ.

_______________________________________________

_______________________________________________

_______________________________________________

**ಇ) ಬಿಟ್ಟ ಸ್ಥಳಗಳನ್ನು ಸೂಕ್ತವಾದ ಪದಗಳಿಂದ ಭರ್ತಿ ಮಾಡಿ.**

೧. ಆರ್ಕಿಮಿಡೀಸ್‌ನ ಪ್ರಾಥಮಿಕ ಶಿಕ್ಷಣ ನಡೆದ ಸ್ಥಳ ____________

೨. 'ಯುರೇಕಾ' ಪದದ ಅರ್ಥ ____________

೩. ಆರ್ಕಿಮಿಡೀಸನು ಜನಿಸಿದ ಸ್ಥಳ________

೪. ರೋಮನ್ನರು ಸಿರಾಕ್ಯುಸ್ ನಗರವನ್ನು ಆಕ್ರಮಿಸಿಕೊಂಡ ಯುದ್ಧ ______

## ಭಾಷಾಭ್ಯಾಸ

**ಅ) ಕೆಳಗಿನ ಪದಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸಿ ಬರೆಯಿರಿ.**

೧. ಎದೆಗುಂದು : _______________________________________

೨. ಹಿಮ್ಮೆಟ್ಟು : _______________________________________

೩. ಆಶ್ರಯದಾತ : _______________________________________

೪. ತೋಚು : _______________________________________

©KTBS Not to be republished

**ಆ) ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

ತಗ್ಗುಗನ್ನಡಿ, ವಿದ್ಯಾಭ್ಯಾಸ, ಕಿರೀಟವನ್ನು, ತೊಟ್ಟಿಯಿಂದ, ಗೋಲಾಕಾರ.

**ಇ) ಕೊಟ್ಟಿರುವ ಶಬ್ದಗಳಿಗೆ ಅದೇ ಅರ್ಥ ಕೊಡುವ ಎರಡು ಶಬ್ದಗಳನ್ನು ನಿಘಂಟಿನ ಸಹಾಯದಿಂದ ಬರೆಯಿರಿ.**

**ಮಾದರಿ : ರಾಜ : ಅರಸು, ದೊರೆ.**

ಯುದ್ಧ : ______________ , ______________

ನೀರು : ______________ , ______________

ಆಕಾಶ : ______________ , ______________

## ಭಾಷಾ ಚಟುವಟಿಕೆ

**ಅ) ಮಾದರಿಯಲ್ಲಿ ಸೂಚಿಸಿದಂತೆ ಪದಗಳನ್ನು ರಚಿಸಿ.**

ಮಾದರಿ. ಗ __ __ : ಗ ದ ಗ

೧. ಕಿ __ __  ೨. ಚ __ __  ೩. ಸ __ __

**ಆ) ಕೊಟ್ಟಿರುವ ವಿಷಯಗಳ ಕುರಿತು ಮಾತನಾಡಿರಿ.**

೧. ನನ್ನ ಶಾಲೆ  ೨. ನನಗೆ ಇಷ್ಟವಾದ ಪ್ರಾಣಿ  ೩. ನಾನು ವಿಜ್ಞಾನಿಯಾದರೆ

**ಇ) ಕೆಳಗಿನ ಹೇಳಿಕೆಗಳಿಗೆ ಸರಿ ಹೊಂದುವ ಪ್ರಶ್ನೆಗಳನ್ನು ರಚಿಸಿರಿ.**

೧. ರಮೇಶನು ತಳ್ಳಿದ ಕಾರಣ ರಾಜೇಶನು ಕೆಳಗೆ ಬಿದ್ದನು.

ಪ್ರಶ್ನೆ : ______________________________

೨. ಮಳೆಯಲ್ಲಿ ನೆನೆದದ್ದರಿಂದ ರಾಗಿಣಿಗೆ ಶೀತ ಬಂದಿತು.

ಪ್ರಶ್ನೆ : ______________________________

©KTBS Not to be republished

೩. ಮಂಜುನಾಥನು ಕಾಯಿಲೆ ಬಿದ್ದ ಕಾರಣ ಪರೀಕ್ಷೆಗೆ ಗೈರುಹಾಜರಾದನು.

ಪ್ರಶ್ನೆ : ______________________________

**ಈ) ಮೇಲೆ ಇರುವ ಹೇಳಿಕೆಗಳಿಗೆ ಸಂಬಂಧಿಸಿದಂತೆ ಈ ಪ್ರಶ್ನೆಗಳಿಗೆ ವಾಕ್ಯರೂಪದಲ್ಲಿ ಉತ್ತರಿಸಿ.**

೧. ರಮೇಶನು ತಳ್ಳದಿದ್ದರೆ ರಾಜೇಶನು ಕೆಳಗೆ ಬೀಳುತ್ತಿದ್ದನೇ?

ಉತ್ತರ : ______________________________

೨. ಮಳೆಯಲ್ಲಿ ನೆನೆಯದಿದ್ದರೆ ರಾಗಿಣಿಗೆ ಶೀತವಾಗುತ್ತಿತ್ತೇ?

ಉತ್ತರ : ______________________________

೩. ಮಂಜುನಾಥ ಕಾಯಿಲೆ ಬೀಳದಿದ್ದರೆ ಪರೀಕ್ಷೆಗೆ ಗೈರುಹಾಜರಾಗುತ್ತಿದ್ದನೇ?

ಉತ್ತರ : ______________________________

**ಉ) ಆರ್ಕಿಮಿಡೀಸ್‌ನಂತೆ ವಿಜ್ಞಾನ ಕ್ಷೇತ್ರಕ್ಕೆ ಕೊಡುಗೆ ನೀಡಿದ ವಿಜ್ಞಾನಿಗಳ ಚಿತ್ರಗಳನ್ನು ಸಂಗ್ರಹಿಸಿರಿ. ಸೂಕ್ತ ಶೀರ್ಷಿಕೆಗಳನ್ನು ಬರೆಯಿರಿ.**

**ಊ) ಕರ್ನಾಟಕದ ವಿಜ್ಞಾನಿಗಳ ಸಾಧನೆಗಳನ್ನು ತಿಳಿಯಿರಿ. ಅವರ ಚಿತ್ರಗಳನ್ನು ಕಲೆ ಹಾಕಿರಿ.**

## ವ್ಯಾಕರಣ

### ಭಾಗ– 'ಅ'

### ಲೇಖನ ಚಿಹ್ನೆಗಳು

ಹಿಂದಿನ ತರಗತಿಯಲ್ಲಿ ಕೆಲವು ಲೇಖನ ಚಿಹ್ನೆಗಳ ಬಗೆಗೆ ಈಗಾಗಲೇ ತಿಳಿದಿದ್ದೀರಿ. ಅದರ ಬಗೆಗೆ ಮತ್ತಷ್ಟು ಮಾಹಿತಿಯನ್ನು ತಿಳಿದುಕೊಳ್ಳೋಣ.

ಬರವಣಿಗೆಯ ವಾಕ್ಯಗಳಲ್ಲಿ ಅರ್ಥಸ್ಪಷ್ಟತೆ ಇರಬೇಕು. ಸಂದೇಹ, ಗೊಂದಲ ಇರಬಾರದು. ಅದಕ್ಕಾಗಿ ವಾಕ್ಯಗಳಲ್ಲಿ ಉಚಿತ ಸ್ಥಳಗಳಲ್ಲಿ ಬಳಸುವ ಚಿಹ್ನೆಗಳೇ ಲೇಖನ ಚಿಹ್ನೆಗಳು.

**ಪೂರ್ಣವಿರಾಮ**(.)=ಸಂಪೂರ್ಣ ಅರ್ಥವನ್ನು ಕೊಡುವ ಪೂರ್ಣಕ್ರಿಯೆಯಿಂದ ಕೂಡಿದ ವಾಕ್ಯದ ಕೊನೆಯಲ್ಲಿ ಬಳಸುವ ಲೇಖನ ಚಿಹ್ನೆ.

**ಅರ್ಧವಿರಾಮ**(;)=ಒಂದು ಪ್ರಧಾನವಾಕ್ಯದಲ್ಲಿ ಅನೇಕ ಉಪವಾಕ್ಯಗಳಿದ್ದರೆ, ಉಪವಾಕ್ಯಗಳ ಕೊನೆಯಲ್ಲಿ ಬಳಸುವ ಲೇಖನ ಚಿಹ್ನೆ.

©KTBS Not to be republished

**ಅಲ್ಪವಿರಾಮ**(,)=ಸಂಬೋಧನ ವಿಭಕ್ತಿಯ ಮುಂದೆ ಹಾಗೂ ಕರ್ತೃ, ಕರ್ಮ ಮತ್ತು ಕ್ರಿಯಾ ಪದಗಳಿಗೆ ವಿಶೇಷಣಗಳು ಬಂದಾಗ, ಕೊನೆಯ ಪದವನ್ನು ಬಿಟ್ಟು ಉಳಿದ ಪದಗಳ ಮುಂದೆ ಉಪಯೋಗಿಸುವ ಲೇಖನ ಚಿಹ್ನೆ.

**ಪ್ರಶ್ನಾರ್ಥಕ ಚಿಹ್ನೆ**(?)=ಪ್ರಶ್ನಾರ್ಥಕ ವಾಕ್ಯಗಳ ಕೊನೆಯಲ್ಲಿ ಬಳಸುವ ಲೇಖನ ಚಿಹ್ನೆ.

**ಭಾವಸೂಚಕ ಚಿಹ್ನೆ**(!)=ವಾಕ್ಯದಲ್ಲಿ ಸಂತೋಷ, ಆಶ್ಚರ್ಯ, ದುಃಖ, ಕೋಪ ಮೊದಲಾದ ಭಾವನೆಗಳನ್ನು ವ್ಯಕ್ತಪಡಿಸುವಾಗ ಉಪಯೋಗಿಸುವ ಚಿಹ್ನೆ.

**ಉದ್ಧರಣ ಚಿಹ್ನೆ**(“ ”)=ವಾಕ್ಯದಲ್ಲಿ ಇನ್ನೊಬ್ಬರು ಹೇಳಿದ ಮಾತುಗಳನ್ನು ಅವರು ಹೇಳಿದಂತೆಯೇ ಬರೆದು ತಿಳಿಸುವಾಗ ಬಳಸುವ ಲೇಖನ ಚಿಹ್ನೆ.

**ವಿವರಣಾತ್ಮಕ ಚಿಹ್ನೆ**(:–) = ವಾಕ್ಯದಲ್ಲಿ ಒಂದು ವಿಷಯದ ವಿವರಣೆಯು ಮುಂದೆ ತಿಳಿಸುವಂತಿದೆ ಎಂದು ಸೂಚಿಸುವಾಗ ಬಳಸುವ ಚಿಹ್ನೆ.

**ಆವರಣ ಚಿಹ್ನೆ**(()) = ವಾಕ್ಯದಲ್ಲಿ ಒಂದು ಪದವನ್ನು ಹೇಳಿ ಅದಕ್ಕೆ ಸಮಾನ ಅರ್ಥದ ಪದವನ್ನು ಹೇಳಬೇಕಾದರೆ, ಅದಕ್ಕೆ ಸಂಬಂಧಿಸಿದ ಇತರ ಮಾಹಿತಿಗಳನ್ನು ನೀಡಬೇಕಾದರೆ ಬಳಸುವ ಲೇಖನ ಚಿಹ್ನೆ.

## ಭಾಗ– ‘ಆ’

**ಅ) ಕೆಳಗಿನ ‘ಅ’ ಪಟ್ಟಿಯಲ್ಲಿರುವ ಲೇಖನ ಚಿಹ್ನೆಗಳ ಹೆಸರನ್ನು ‘ಬ’ ಪಟ್ಟಿಯಲ್ಲಿರುವ ಲೇಖನ ಚಿಹ್ನೆಗಳೊಂದಿಗೆ ಹೊಂದಿಸಿ ಬರೆಯಿರಿ.**

| ‘ಅ’ | | ‘ಬ’ |
|---|---|---|
| ೧. ಪೂರ್ಣವಿರಾಮ | ಅ) | ? |
| ೨. ಆವರಣ ಚಿಹ್ನೆ | ಆ) | ; |
| ೩. ಅಲ್ಪವಿರಾಮ | ಇ) | . |
| ೪. ವಿವರಣಾತ್ಮಕ ಚಿಹ್ನೆ | ಈ) | ! |
| ೫. ಉದ್ಧರಣ ಚಿಹ್ನೆ | ಉ) | () |
| ೬. ಭಾವಸೂಚಕ ಚಿಹ್ನೆ | ಊ) | \|\| |
| ೭. ಪ್ರಶ್ನಾರ್ಥಕ ಚಿಹ್ನೆ | ಋ) | “ ” |
| ೮. ಅರ್ಧವಿರಾಮ | ಎ) | :– |
| | ಏ) | * |
| | ಐ) | , |

**ಆ) ಕೆಳಗಿನ ವಾಕ್ಯಗಳಿಗೆ ಸೂಕ್ತ ಲೇಖನ ಚಿಹ್ನೆಗಳನ್ನು ಹಾಕಿರಿ.**

೧. ಅಬ್ಬಾ ವಿಧಾನಸೌಧ ಎಷ್ಟೊಂದು ಸುಂದರವಾದ ಕಟ್ಟಡ.

೨. ಹಳೆಬೀಡಿನಲ್ಲಿರುವ ದೇವಾಲಯ ಯಾವುದು.

೩. ಮಕ್ಕಳೇ ನೀವು ಪ್ರತಿದಿನವೂ ಬೆಳಗ್ಗೆ ಬೇಗನೆ ಏಳಲೇ ಬೇಕು ಎಂದು ಗುರುಗಳು ಹೇಳಿದರು.

©KTBS Not to be republished

# ೯. ಅಕ್ಕನ ವಚನ

**– ಅಕ್ಕಮಹಾದೇವಿ**

ಪ್ರವೇಶ: ವಚನ ಸಾಹಿತ್ಯ ಜನಸಾಮಾನ್ಯರಿಗೆ ಅರ್ಥವಾಗುವ ಸಾಹಿತ್ಯ. ಶರಣ–ಶರಣೆಯರು ವಚನ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಯನ್ನು ನೀಡಿದ್ದಾರೆ. ಕನ್ನಡದ ಪ್ರಥಮ ಕವಯಿತ್ರಿ ಆದ ಅಕ್ಕಮಹಾದೇವಿ ಈ ವಚನದಲ್ಲಿ ಜಲ–ನೆಲ–ಆಕಾಶ ಒಂದೇ ಆದರೂ ಹಲವು ದ್ರವ್ಯಗಳು ಕೂಡಿ ವಸ್ತುಗಳ ರುಚಿಯಲ್ಲಿ ಭಿನ್ನತೆಯನ್ನು ಹಾಗೂ ಈ ಭಿನ್ನತೆಯ ಕಾರಣವನ್ನು ಮಾರ್ಮಿಕವಾಗಿ ನಿರೂಪಿಸಿರುವುದನ್ನು ಕಾಣಬಹುದಾಗಿದೆ.



ಈಳೆ ನಿಂಬೆ ಮಾವು ಮಾದಲಕ್ಕೆ
ಹುಳಿ ನೀರನೆರೆದವರಾರಯ್ಯಾ?
ಕಬ್ಬು, ಬಾಳೆ–ಹಲಸು, ನಾರಿವಾಳಕ್ಕೆ
ಸಿಹಿನೀರನೆರೆದವರಾರಯ್ಯಾ?

ಕಳವೆ, ರಾಜಾನ್ನ, ಶಾಲ್ಯಾನ್ನಕ್ಕೆ
ಓಗರದುದಕವನೆರೆದವರಾರಯ್ಯಾ?
ಮರುಗ ಮಲ್ಲಿಗೆ ಪಚ್ಚೆ ಮುಡಿವಾಳಕ್ಕೆ
ಪರಿಮಳದುದಕವನೆರೆದವರಾರಯ್ಯಾ?

ಇಂತೀ ಜಲವು ಒಂದೆ, ನೆಲವು ಒಂದೆ ಆಕಾಶವು ಒಂದೆ,
ಜಲವು ಹಲವು ದ್ರವ್ಯಂಗಳ ಕೂಡಿ
ತನ್ನ ಪರಿಬೇರಾಗಿಹ ಹಾಗೆ,
ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯನು
ಹಲವು ಜಗಂಗಳ ಕೂಡಿಕೊಂಡಿರ್ದಡೇನು? ತನ್ನ ಪರಿಬೇರೆ

©KTBS Not to be republished

**ಕ್ಷೇತ್ರ :** ಬರೆಯುವುದು

**ಸಾಮರ್ಥ್ಯ :** ಅಕ್ಷರ ಮತ್ತು ಪದಗಳನ್ನು ಸರಿಯಾದ ವಿನ್ಯಾಸ, ಸೂಕ್ತ ಅಂತರದೊಂದಿಗೆ ಸ್ಫುಟವಾಗಿ ಬರೆಯುವುದು.




## ಕೃತಿಕಾರರ ಪರಿಚಯ

ಶಿವಶರಣೆಯರಲ್ಲಿ ಪ್ರಮುಖಳಾದ ಅಕ್ಕಮಹಾದೇವಿಯ ಕಾಲ ಕ್ರಿ.ಶ. ಸುಮಾರು ೧೧೬೦. ಈಕೆಯ ಜನ್ಮಸ್ಥಳ ಶಿಕಾರಿಪುರ ತಾಲೂಕಿನ ಉಡುತಡಿ. ಪ್ರಸಿದ್ಧ ವಚನಕಾರ್ತಿ ಹಾಗೂ ಕವಯಿತ್ರಿಯಾದ ಅಕ್ಕಮಹಾದೇವಿಯ ಅಂಕಿತ ಮತ್ತು ಆರಾಧ್ಯದೈವ ಚೆನ್ನಮಲ್ಲಿಕಾರ್ಜುನ. ಶ್ರೀಶೈಲದ ಕದಳಿಯ ಗುಹೆಯಲ್ಲಿ ಅಕ್ಕ ತನ್ನ ಕೊನೆಯ ದಿನಗಳನ್ನು ಕಳೆದಳು.

## ಪದಗಳ ಅರ್ಥ

ಈಳೆ – ಕಿತ್ತಳೆ, ಮೊದಲಾದ ವರ್ಗಕ್ಕೆ ಸೇರಿದ ಮರ ಮತ್ತು ಹಣ್ಣು;
ಉದಕ – ನೀರು;
ಎರೆ – ಸುರಿ;
ಓಗರ – ಬೇಯಿಸಿದ ಆಹಾರ, ಸುವಾಸನೆ;
ಕಳವೆ – ಭತ್ತ;
ದ್ರವ್ಯ – ವಸ್ತು, ಸಂಪತ್ತು;
ನಾರಿವಾಳ – ತೆಂಗಿನಮರ ಮತ್ತು ಅದರ ಕಾಯಿ;
ಶರಣೆ – ಶಿವಭಕ್ತೆ.

## ಟಿಪ್ಪಣಿ

ಶಾಲ್ಯಾನ್ನ – ಗಂಧಶಾಲಿ ಅಕ್ಕಿಯನ್ನು ನೈವೇದ್ಯಕ್ಕಾಗಿ ಹಾಲಿನಲ್ಲಿ ಬೇಯಿಸಿಮಾಡಿದ ಸಿಹಿ ಅನ್ನ
ಮಾದಲ – ಒಂದು ಜಾತಿಯ ಮರ ಮತ್ತು ಅದರ ಹಣ್ಣು
ಮರುಗ – ಸುವಾಸನೆಯ ಎಲೆಗಳುಳ್ಳ ಒಂದು ಜಾತಿಯ ಸಸ್ಯ
ಪಚ್ಚೆ – ಒಂದು ಜಾತಿಯ ಸುವಾಸನೆಯ ಗಿಡ ಮತ್ತು ಅದರಲ್ಲಿ ಬಿಡುವ ತೆನೆ

©KTBS Not to be republished

## ಅಭ್ಯಾಸ

**ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಅಕ್ಕನ ವಚನದಲ್ಲಿ ಹೆಸರಿಸಿರುವ ಹುಳಿ ಹಣ್ಣುಗಳಾವುವು?

______________________________

೨. ಪರಿಮಳವನ್ನು ಬೀರುವ ಯಾವ ಸಸ್ಯ ಹಾಗೂ ಹೂಗಳ ಹೆಸರುಗಳನ್ನು ಅಕ್ಕನ ವಚನದಲ್ಲಿ ಪ್ರಸ್ತಾಪಿಸಲಾಗಿದೆ?

______________________________

೩. ಅಕ್ಕನ ವಚನಗಳಲ್ಲಿ ಹೇಳಿರುವ ಸಿಹಿ ಹಣ್ಣುಗಳಾವುವು?

______________________________

೪. ಅಕ್ಕಮಹಾದೇವಿಯ ವಚನಗಳ ಅಂಕಿತ ಯಾವುದು?

______________________________

**ಆ) ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ಅಕ್ಕಮಹಾದೇವಿಯ ವಚನದಲ್ಲಿ ಎಲ್ಲವೂ ಒಂದೇ ಎಂಬ ಭಾವನೆ ಹೇಗೆ ವ್ಯಕ್ತವಾಗಿದೆ?

______________________________

______________________________

©KTBS Not to be republished

೨. ಚೆನ್ನಮಲ್ಲಿಕಾರ್ಜುನನ ಪರಿಯನ್ನು ಕವಯಿತ್ರಿ ಹೇಗೆ ವಿವರಿಸಿದ್ದಾರೆ?

______________________________________________

______________________________________________

**ಇ) ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ.**

ಕಳವೆ ________________

________________ ರಾರಯ್ಯ?

ಮರುಗ ________________

________________ ರಾರಯ್ಯ?

**ಭಾಷಾಭ್ಯಾಸ**

**ಅ) ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.**

೧. ನೀರು:------------------------------

೨. ಆಕಾಶ:------------------------------

**ಆ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.**

೧. ಸಿಹಿ - ------------

೨. ಹಲವು - ------------

**ಇ) ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

೧. ಪರಿಮಳದುದಕ

೨. ಓಗರದುದಕ

©KTBS Not to be republished

## ಭಾಷಾ ಚಟುವಟಿಕೆ

**ಅ) ವಚನಕಾರ್ತಿಯರ ಚಿತ್ರಗಳನ್ನು ಸಂಗ್ರಹಿಸಿರಿ.**

**ಆ) ಕೆಳಗಿನವರ ವಚನಗಳ ಅಂಕಿತವನ್ನು ಶಿಕ್ಷಕರ ಸಹಾಯದಿಂದ ಅರಿಯಿರಿ.**

| | | |
|---|---|---|
| ೧. ಬಸವಣ್ಣ | ೨. ಚನ್ನಬಸವಣ್ಣ | ೩. ಅಲ್ಲಮಪ್ರಭು |
| ೪. ಮುಕ್ತಾಯಕ್ಕ | ೫. ಲಿಂಗಮ್ಮ | ೬. ಅಕ್ಕಮ್ಮ |

## ವ್ಯಾಕರಣ

### ಭಾಗ– 'ಅ'

**ಲಿಂಗಗಳು**

ಲಿಂಗಗಳಲ್ಲಿ ಮುಖ್ಯವಾಗಿ ಮೂರು ವಿಧ

೧) ಪುಲ್ಲಿಂಗ

೨) ಸ್ತ್ರೀಲಿಂಗ

೩) ನಪುಂಸಕಲಿಂಗ

**ಪುಲ್ಲಿಂಗ:–** ಯಾವ ಶಬ್ದ ಪ್ರಯೋಗ ಮಾಡಿದಾಗ ಮನುಷ್ಯವಾಚಕದಲ್ಲಿ 'ಗಂಡು' ಎಂಬರ್ಥ ಮನಸ್ಸಿಗೆ ಹೊಳೆಯುವುದೋ ಅದು ಪುಲ್ಲಿಂಗವೆನಿಸುವುದು.

**ಉದಾಹರಣೆಗೆ:–** ಚಿಕ್ಕವನು, ಅಜ್ಜ, ಕಳ್ಳ, ಮೋಹನ, ಹುಡುಗ, ರಾಜ, ಶಕ್ತಿವಂತ, ತಮ್ಮ, ಚಿಕ್ಕಪ್ಪ, ಸಚಿವ, ಮದುಮಗ, ದಾಸ, ಕವಿ, ವಿಮರ್ಶಕ ಮುಂತಾದವು.

**ಸ್ತ್ರೀಲಿಂಗ:–** ಯಾವ ಶಬ್ದ ಪ್ರಯೋಗ ಮಾಡಿದಾಗ ಮನುಷ್ಯವಾಚಕದಲ್ಲಿ ನಮ್ಮ ಭಾವನೆಗೆ 'ಹೆಣ್ಣು' ಎಂಬ ಅರ್ಥವು ಹೊಳೆಯುವುದೋ ಅದು ಸ್ತ್ರೀಲಿಂಗ ಎನಿಸುವುದು.

**ಉದಾಹರಣೆಗೆ:–** ದೊಡ್ಡವಳು, ಅಜ್ಜಿ, ಕಳ್ಳಿ, ಲಲಿತಾ, ಹುಡುಗಿ, ರಾಣಿ, ಶಕ್ತಿವಂತೆ, ತಂಗಿ, ಚಿಕ್ಕಮ್ಮ, ಸಚಿವೆ, ಮದುಮಗಳು, ದಾಸಿ, ಕವಯಿತ್ರಿ, ಕಲಾವಿದೆ ಮುಂತಾದವು.

©KTBS Not to be republished

**ನಪುಂಸಕಲಿಂಗ :–** ಯಾವ ಶಬ್ದವನ್ನು ಪ್ರಯೋಗ ಮಾಡಿದಾಗ ಗಂಡು ಹೆಣ್ಣು ಎರಡೂ ಅಲ್ಲದ ಅರ್ಥವು ಮನಸ್ಸಿಗೆ ಹೊಳೆಯುವುದೋ ಅದು ನಪುಂಸಕಲಿಂಗ ಎನಿಸುವುದು.

**ಉದಾಹರಣೆಗೆ:–** ಹುಲಿ, ಹಸು, ಎತ್ತು, ಕಾಗೆ, ಚಿರತೆ, ನರಿ, ಮರ, ಮನೆ, ಮುಂತಾದವು.

ಕನ್ನಡದಲ್ಲಿ ಎಲ್ಲಾ ಪ್ರಾಣಿಗಳೂ ನಪುಂಸಕ ಲಿಂಗಗಳೇ ಆಗುತ್ತವೆ.

## ಭಾಗ– 'ಆ'

**ಅ) ಕೆಳಗಿನ ಸ್ತ್ರೀಲಿಂಗ ರೂಪಗಳಿಗೆ ಪುಲ್ಲಿಂಗ ಪದಗಳನ್ನು ಬರೆಯಿರಿ.**

೧. ಧೈರ್ಯವಂತೆ ____________

೨. ವಿದ್ಯಾವಂತೆ ____________

೩. ಗುಣವಂತೆ ____________

೪. ಬುದ್ಧಿವಂತೆ ____________

©KTBS Not to be republished

# ೧೦. ಉತ್ತರಕುಮಾರನ ಜಂಭ

**ಪ್ರವೇಶ:**
ಶೌರ್ಯ, ಪರಾಕ್ರಮ ಸಾಹಸಿಗಳ ಸ್ವತ್ತು. ತುಂಬಿದ ಕೊಡ ತುಳುಕದು. ಬೇರೆಯವರೆದುರು ಸ್ವಪ್ರತಿಷ್ಠೆ ಬಡಾಯಿ ಕೊಚ್ಚಿಕೊಳ್ಳುವುದು ಕೆಲವರ ಹವ್ಯಾಸವಾಗಿರುತ್ತದೆ. ಇವರಲ್ಲಿ ಗಟ್ಟಿತನ ಲವಲೇಶವೂ ಇರದು. ಎಲ್ಲವೂ ಟೊಳ್ಳು. ಇಂತಹ ತೋರುಗಾರಿಕೆಯ ಒಣ ಪ್ರತಿಷ್ಠೆಯ ಉತ್ತರಕುಮಾರನ ಕಥೆ ನಾಟಕ ರೂಪದಲ್ಲಿ ಇಲ್ಲಿ ಒಡಮೂಡಿದೆ.

## ದೃಶ್ಯ – ೧

*(ವಿರಾಟನಗರದ ಅರಮನೆ. ಅಲ್ಲಿ ವಿರಾಟರಾಯನ ಮಗ ಯುವರಾಜ ಉತ್ತರಕುಮಾರ ಸಿಂಹಾಸನಾರೂಢನಾಗಿದ್ದಾನೆ. ಅವನ ಸುತ್ತಲೂ ಅನೇಕ ಸುಂದರಿಯರು ಇರುವರು. ಅವರಲ್ಲಿ ಅವನ ತಂಗಿ ಉತ್ತರೆಯೂ ಇದ್ದಾಳೆ. ಅವರೆಲ್ಲರೂ ಸಂತೋಷದಿಂದ ಹಾಡಿ ಕುಣಿಯುತ್ತಾ ಮಾತನಾಡುತ್ತಿರುವರು. ಆಗ ಆಸ್ಥಾನಕ್ಕೆ ವಿರಾಟನಗರದ ಗೋಪಾಲಕನು ಓಡೋಡುತ್ತಾ ಬರುತ್ತಾನೆ.)*



**ಗೋಪಾಲಕ** : ಯುವರಾಜ ಉತ್ತರಕುಮಾರರಿಗೆ ಜಯವಾಗಲಿ. ಕೌರವರು ನಮ್ಮ ದನಕರುಗಳನ್ನು ಸೆರೆ ಹಿಡಿದಿದ್ದಾರೆ! ಅಲ್ಲದೇ ನಮ್ಮ ಮೇಲೆ ಯುದ್ಧಕ್ಕೆ ಬಂದಿದ್ದಾರೆ ದಯಮಾಡಿ ತಾವು ಬಂದು ನಮ್ಮ ದನಕರುಗಳನ್ನು ಬಿಡಿಸಿರಿ!

**ಉತ್ತರಕುಮಾರ** : ಎಲೈ ಹೇಡಿ ಗೋಪಾಲಕನೆ, ಅಂಜುಬುರುಕನೆ, ಯುದ್ಧಕ್ಕೆ ಹೆದರಿ ಓಡಿಬಂದಿರುವೆಯಾ? (ಚಪ್ಪಾಳೆ ತಟ್ಟಿ) ಈ ಹೇಡಿ ದನಗಾಹಿಯನ್ನು ಹೊರಗೆ ಹಾಕಿರಿ.

**ಗೋಪಾಲಕ** : ಸ್ವಾಮೀ, ನಾನು ಹೆದರಿ ಬಂದ ಹೇಡಿಯಲ್ಲ. ನಿಮ್ಮ ಸಹಾಯವನ್ನು ಬೇಡಿ ಬಂದಿರುವ ಸೇವಕ. ಈಗ ನೀವು ಯುದ್ಧ ಮಾಡಿ ಕೌರವರನ್ನು ಓಡಿಸಬೇಕು. ದನಕರುಗಳನ್ನು ಬಿಡಿಸಬೇಕು. ಗೋವುಗಳು ಇಲ್ಲದಿದ್ದರೆ ಮಕ್ಕಳು ಹಸಿವಿನಿಂದ ಸಾಯಬೇಕಾಗುತ್ತದೆ.



© KTBS Not to be Republished

**ಉತ್ತರಕುಮಾರ** : (ಸುಂದರಿಯರ ಮುಖಗಳನ್ನು ನೋಡುತ್ತಾ) ನಾನು ಯುದ್ಧಕ್ಕೆ ಬಂದರೆ ಆಯಿತು, ಕೌರವರ ಸೈನ್ಯ ಒಂದೇ ಕ್ಷಣದಲ್ಲಿ ನಾಶ. ಆ ಬುದ್ಧಿಗೇಡಿ ಕೌರವರಿಗೆ ಅಷ್ಟೂ ತಿಳಿಯಬೇಡವೇ? ಉತ್ತರಕುಮಾರನೆಂದರೆ ಅವರು ಏನೆಂದು ತಿಳಿದಿದ್ದಾರೆ?

**ಗೋಪಾಲಕ** : ಹೌದು ಸ್ವಾಮಿ, ಮೂರು ಲೋಕಗಳಲ್ಲಿಯೂ ನಿಮ್ಮಂಥ ಶೂರರಿಲ್ಲ. ಕೌರವರಿಗೆಲ್ಲಿ ಗೊತ್ತು ಈ ವಿಚಾರ!

**ಉತ್ತರಕುಮಾರ** : ಹೌದು. ಆ ಕೌರವರು ಮಲಗಿದ್ದ ಸಿಂಹವನ್ನು ಕೆರಳಿಸಿದ್ದಾರೆ. ಹಸಿದ ಹುಲಿಯನ್ನು ಕೆಣಕಿದ್ದಾರೆ. ಹುತ್ತದ ಬಾಯಿಗೆ ಕೈಹಾಕಿದ್ದಾರೆ. ಹ್ಞೂಂ! ಈಗ ನಾನು ಯುದ್ಧಕ್ಕೆ ಹೊರಡಬೇಕು. ಎಲೈ ಗೋಪಾಲಕನೇ, ಕೌರವರ ಕಡೆ ಯಾರು ಯಾರು ಬಂದಿದ್ದಾರೆ?

**ಗೋಪಾಲಕ** : ಸ್ವಾಮಿ... ಕೌರವರ ಕಡೆಯಿಂದ ಭೀಷ್ಮ, ದ್ರೋಣ, ಕರ್ಣ ಮೊದಲಾದವರೆಲ್ಲಾ ಬಂದಿದ್ದಾರೆ.

**ಉತ್ತರಕುಮಾರ** : ನಾನೀಗ ಅಲ್ಲಿ ಯಾರೊಡನೆ ಯುದ್ಧ ಮಾಡಬೇಕು. ನನಗೆ ಎದುರಾಗಿ ನಿಲ್ಲುವವರು ಇವರಲ್ಲಿ ಯಾರಿದ್ದಾರೆ?

**ಉತ್ತರೆ** : ಅಣ್ಣಾ.. ನೀನು ಕೌರವರ ಸೈನ್ಯದ ಮುಖಂಡನಾದ ಭೀಷ್ಮನೊಡನೆ ಯುದ್ಧಮಾಡು. ಅವನನ್ನು ಸೋಲಿಸು.

**ಉತ್ತರಕುಮಾರ** : ಛೆ! ಛೆ! ಅವನೊಬ್ಬ ಮುದುಕ. ನಾನೋ ನವಯುವಕ!

**ಉತ್ತರೆ** : ಹಾಗಾದರೆ ಅಣ್ಣ, ದ್ರೋಣರೊಂದಿಗೆ ಯುದ್ಧ ಮಾಡು.

**ಉತ್ತರಕುಮಾರ** : ನಾನಾದರೋ ಕ್ಷತ್ರಿಯ ವೀರ. ಅವನೋ ಬ್ರಾಹ್ಮಣ. ಅವನೊಡನೆ ಯುದ್ಧಮಾಡುವುದೇ? ಇಂಥವನನ್ನು ಕೊಂದು ನಾನು ಯಾವ ಪಾಪ ಕಟ್ಟಿಕೊಳ್ಳಲಿ?

**ಉತ್ತರೆ** : ಹಾಗಾದರೆ, ಮಹಾಶೂರನೆಂದು ಖ್ಯಾತಿ ಪಡೆದಿರುವ ಕರ್ಣನನ್ನಾದರೂ ಸೋಲಿಸು.

**ಉತ್ತರ ಕುಮಾರ** : (ಗಹಗಹಿಸಿ ನಗುತ್ತಾ) ಛೆ! ಛೆ! ಅವನು ಸೂತಪುತ್ರ.

**ಉತ್ತರೆ** : ಹಾಗಾದರೆ, ಕೌರವರ ಸೈನ್ಯದ ಮೇಲೆಯೇ ಧಾಳಿ ಮಾಡಿಬಿಡು.

**ಉತ್ತರಕುಮಾರ** : ಮೂಕಪ್ರಾಣಿಗಳ ಮೇಲೆ ಧಾಳಿ ಮಾಡಿದ ಆ ಕೌರವರ ಸೈನ್ಯ ಅದೆಂತಹ ಸೈನ್ಯ?

**ಉತ್ತರೆ** : ಅಣ್ಣ ನಿನ್ನಂಥ ವೀರಾಧಿವೀರರು ಯಾರೂ ಇಲ್ಲ. ಬೇಗನೆ ಯುದ್ಧಕ್ಕೆ ಹೋಗಿ ನಮ್ಮ ಗೋವುಗಳನ್ನು ಬಿಡಿಸಿಕೊಂಡು ಬಾ.

©KTBS Not to be republished

**ಉತ್ತರಕುಮಾರ** : ಎಲ್ಲೈ ಸೇವಕರೇ, ನನ್ನ ಖಡ್ಗವೆಲ್ಲಿ? ಬಿಲ್ಲು, ಬಾಣ, ಬತ್ತಳಿಕೆ ಎಲ್ಲವನ್ನೂ ಈಗಲೇ ತನ್ನಿ. ಎಲ್ಲೈ ಗೋಪಾಲಕ ನೀನು ಹೋಗಿ ಕೌರವ-ರಿಗೆ 'ನಾನು ಉತ್ತರಕುಮಾರ ಯುದ್ಧಕ್ಕೆ ಬರುವೆನೆಂದು ತಿಳಿಸು'. ಇಂದು ಕೌರವರ ಸೈನ್ಯ ಧೂಳಿಪಟವಾದಂತೆಯೇ ಸರಿ. ಆದರೆ......

**ಗೋಪಾಲಕ** : ಆದರೆ ಏನು ಯುವರಾಜರೇ..?

**ಉತ್ತರಕುಮಾರ** : ನಾನೇನೋ ಯುದ್ಧಕ್ಕೆ ಸಿದ್ಧ, ನನ್ನ ರಥ ಬಿಲ್ಲುಬಾಣಗಳೂ ಸಿದ್ಧ. ನನ್ನ ರಥದ ಸಾರಥಿಯೇ ಇಲ್ಲವಲ್ಲ! ಹಿಂದಿನ ಯುದ್ಧದಲ್ಲಿ ಅವನು ಮರಣ ಹೊಂದಿದ್ದಾನೆ. ಈಗ ನನಗೊಬ್ಬ ಒಳ್ಳೆಯ ಸಾರಥಿ ಸಿಕ್ಕರೆ ಕೌರವರ ಸೈನ್ಯವನ್ನು ಸಂಪೂರ್ಣ ನಾಶಮಾಡಿಬಿಡುತ್ತೇನೆ.

(ಅದೇ ಸಮಯಕ್ಕೆ ಸರಿಯಾಗಿ ಅಲ್ಲಿಗೆ ಉತ್ತರೆಯ ನಾಟ್ಯವಿದ್ಯೆಯ ಗುರುವಾದ ಬೃಹನ್ನಳೆ ಬರುವಳು.)

**ಬೃಹನ್ನಳೆ** : ರಾಜಕುಮಾರಿ ಉತ್ತರಾ, ಏನು ಯಾವುದೋ ಗಂಭೀರ ಚಿಂತನೆಯಲ್ಲಿರುವ ಹಾಗಿದೆಯಲ್ಲಾ?

**ಉತ್ತರೆ** : ಹೌದು, ಕೌರವರು ನಮ್ಮ ಗೋವುಗಳನ್ನು ಸೆರೆಹಿಡಿದಿದ್ದಾರೆ. ನಮ್ಮ ಮೇಲೆ ಯುದ್ಧಕ್ಕೂ ಬಂದಿದ್ದಾರೆ. ಈಗ ನನ್ನಣ್ಣನಿಗೆ ಒಬ್ಬ ಸಾರಥಿ ಬೇಕಾಗಿದೆ.

**ಬೃಹನ್ನಳೆ** : ಮಗಳೇ, ನನಗೆ ನೃತ್ಯವಿದ್ಯೆಯನ್ನು ಕಲಿಸುವುದು ಮಾತ್ರ ಗೊತ್ತು.

**ಉತ್ತರೆ** : ನೀವು ಹಿಂದೊಮ್ಮೆ ಅರ್ಜುನನ ಸಾರಥಿಯಾಗಿದ್ದೀರೆಂದು ನನಗೆ ಹೇಳಿದ್ದೀರಿ ಅಲ್ಲವೇ? ಶೂರನಾದ ನನ್ನಣ್ಣನಿಗೆ ನೀವೀಗ ಸಾರಥಿಯಾಗಬೇಕು.

**ಬೃಹನ್ನಳೆ** : ಆಗಲಿ. ನಿನ್ನಣ್ಣನಿಗೆ ತಿಳಿಸು ನಾನು ಅವರ ಸಾರಥಿಯಾಗುತ್ತೇನೆಂದು.

## ದೃಶ್ಯ – ೨



*(ಯುದ್ಧಭೂಮಿಯ ಒಂದು ಭಾಗ. ಉತ್ತರಕುಮಾರ ಕೌರವರ ಸೈನ್ಯವನ್ನು ಕಂಡು ಹೆದರಿ ರಥದಿಂದ ಹಾರಿ ಓಡಿಹೋಗುತ್ತಿದ್ದಾನೆ. ಅವನ ಬೆನ್ನು ಹತ್ತಿ ಸಾರಥಿ ಬೃಹನ್ನಳೆ ಓಡಿ ಬರುತ್ತಿದ್ದಾಳೆ.)*

© KTBS Not to be republished

ಬೃಹನ್ನಳೆ : ನಿಲ್ಲು! ಉತ್ತರಕುಮಾರ ನಿಲ್ಲು!

ಉತ್ತರಕುಮಾರ : ನಾನು ನಿಲ್ಲುವುದಿಲ್ಲ. ಈ ಯುದ್ಧ ನನ್ನಿಂದ ಸಾಧ್ಯವಿಲ್ಲ. ಅಬ್ಬಾ! ಅದೆಂತಹ ದೊಡ್ಡ ಸೈನ್ಯ! ನಾನು ಯುದ್ಧ ಮಾಡುವುದು ಖಂಡಿತಾ ಸಾಧ್ಯವಿಲ್ಲ.

(ಬೃಹನ್ನಳೆ ಉತ್ತರಕುಮಾರನನ್ನು ಹಿಡಿದು ನಿಲ್ಲಿಸಿ)

ಬೃಹನ್ನಳೆ : ಯುವರಾಜ, ಯುದ್ಧಭೂಮಿಯಿಂದ ಓಡುವುದು ನಿನಗೆ ಉಚಿತವಲ್ಲ.

ಉತ್ತರಕುಮಾರ : ನೀನೆಂಥ ಸಾರಥಿ? ನಾನು ಆಜ್ಞೆ ಮಾಡಿದರೂ ನೀನೇಕೆ ರಥವನ್ನು ನಿಲ್ಲಿಸಲಿಲ್ಲ? ನೀನು ನನ್ನ ಸೇವಕನೆಂದು ತಿಳಿದಿಲ್ಲವೆ? ರಥ ನಿಲ್ಲಿಸದ ಕಾರಣ ರಥದಿಂದ ಜಿಗಿದೆ. ನೋಡಿದವರೆಲ್ಲಾ ನಗುವಂತೆ ಮಾಡಿದ್ದೀಯ. ನಡೆ ನನ್ನ ಮುಂದೆ ನಿಲ್ಲಬೇಡ.

ಬೃಹನ್ನಳೆ : ಎಲೈ ಉತ್ತರಕುಮಾರ, ಅರಮನೆಯಲ್ಲಿ ಸುಂದರಿಯರ ಎದುರಿಗೆ ಏನೆಂದು ಜಂಭಕೊಚ್ಚಿಕೊಂಡೆ? ಈಗ ಆ ಶೌರ್ಯ ಎಲ್ಲಿ ಹೋಯಿತು?

ಉತ್ತರಕುಮಾರ : ಅದೆಲ್ಲ ನಿನಗೇಕೆ? ನನಗೆ ಈ ಯುದ್ಧ ಬೇಡ. ರಥವನ್ನು ವಿರಾಟನಗರಕ್ಕೆ ಹಿಂದಿರುಗಿಸು.

ಬೃಹನ್ನಳೆ : ನಾನು ನಿನ್ನನ್ನು ಬಿಡುವುದಿಲ್ಲ. ಈ ಖಡ್ಗ ತೆಗೆದುಕೋ. ನಡೆ ಯುದ್ಧಕ್ಕೆ.

ಉತ್ತರಕುಮಾರ : ಅಯ್ಯೋ, ಸಾರಥಿ. ನಾನು ಯುದ್ಧದಲ್ಲಿ ಸಾಯುವ ಬದಲು, "ಇದೋ ತೆಗೆದುಕೋ ಈ ಖಡ್ಗವನ್ನು, ನೀನೇ ನನ್ನನ್ನು ಕೊಂದುಬಿಡು."

ಬೃಹನ್ನಳೆ : ಉತ್ತರಕುಮಾರ ಇದೆಂತಹ ಮಾತುಗಳನ್ನಾಡುತ್ತಿದ್ದೀಯೆ? ನಾನಿದ್ದೇನೆ ಹೆದರಬೇಡ.

ಉತ್ತರಕುಮಾರ : ಹಾಗಾದರೆ ನೀನೇ ಯುದ್ಧ ಮಾಡುವೆಯಾ?

ಬೃಹನ್ನಳೆ : ಹೌದು. ನಾನೇ ಯುದ್ಧ ಮಾಡುವೆ. ನೀನು ನನಗೆ ಸಾರಥಿಯಾಗು.

ಉತ್ತರಕುಮಾರ : ನೀನೇನು ಅರ್ಜುನನ ಸಾರಥಿಯೋ? ಅಥವಾ ನೀನೇ ಅರ್ಜುನನೋ?

ಬೃಹನ್ನಳೆ : ಹೌದು. ನಾನೇ ಅರ್ಜುನ. ಹೆದರಬೇಡ. ನನಗೆ ಸಾರಥಿಯಾಗು ನಡೆ.

ಉತ್ತರಕುಮಾರ : ಆಗಲಿ. ನೀನು ಹೇಳಿದಂತೆ ಕೇಳುತ್ತೇನೆ.

(ಉತ್ತರ ಕುಮಾರನು ಸಾರಥಿಯ ಸ್ಥಾನದಲ್ಲಿ ಕುಳಿತು ರಥ ಹೊರಡಿಸುತ್ತಾನೆ. ಅಂದಿಗೆ ಒಂದು ವರ್ಷದ ಅಜ್ಞಾತವಾಸ ಮುಗಿಯಿತು. ಅರ್ಜುನನು ಬೃಹನ್ನಳೆಯ ವೇಷ ತೆಗೆದು ರಣರಂಗದಲ್ಲಿ ವೀರಾವೇಶದಿಂದ ಹೋರಾಡಿದನು. ಕೌರವರ ಸೈನ್ಯ ದಿಕ್ಕೆಟ್ಟು ಓಡಿತು. ಗೋವುಗಳನ್ನು ಬಿಡಿಸಿಕೊಂಡು ಬಂದ ಅರ್ಜುನ ವಿಜಯದ ಉತ್ಸಾಹದಿಂದ ಪುರಪ್ರವೇಶ ಮಾಡುತ್ತಾನೆ.)

©KTBS Not to be republished

**ಕ್ಷೇತ್ರ :** ಬರೆಯುವುದು

**ಸಾಮರ್ಥ್ಯ :** ಅಪರಿಚಿತ ಸನ್ನಿವೇಶಗಳಲ್ಲಿನ ಸರಳ ಸಂಭಾಷಣೆ ಮತ್ತು ಸಂವಾದಗಳನ್ನು ಅರ್ಥಮಾಡಿಕೊಳ್ಳುವುದು.

## ಪದಗಳ ಅರ್ಥ

ಅರಮನೆ–ರಾಜನ ಮನೆ;

ಆಸ್ಥಾನ–ರಾಜಸಭೆ;

ಉಚಿತವಲ್ಲ–ಯೋಗ್ಯವಲ್ಲ;

ಉತ್ತರೆ–ಮತ್ಸ್ಯದೇಶದ ಅರಸನಾದ ವಿರಾಟ ರಾಜನ ಮಗಳು, ಉತ್ತರನ ಸಹೋದರಿ;

ಕೌರವರು–ಕುರುವಂಶದ ಧೃತರಾಷ್ಟ್ರನ ಮಕ್ಕಳು;

ಗೋವು–ದನಕರು;

ಜಗಿ–ಹಾರು, ನೆಗೆ;

ದನಗಾಹಿ–ದನಗಳನ್ನು ಕಾಯುವವನು;

ಧೂಳಿಪಟ–ನಾಶ;

ಬುದ್ಧಿಗೇಡಿ–ಬುದ್ಧಿ ಇಲ್ಲದವ, ಮೂರ್ಖ;

ಬೃಹನ್ನಳೆ–ಅಜ್ಞಾತವಾಸದಲ್ಲಿದ್ದ ಅರ್ಜುನನು ವಿರಾಟನ ಮಗಳಿಗೆ ನಾಟ್ಯ ವಿದ್ಯೆ ಕಲಿಸುವಾಗ ಈ ಹೆಸರನ್ನು ಇಟ್ಟುಕೊಂಡಿದ್ದ;

ಮುಖಂಡ–ನೇತಾರ, ಮುಖ್ಯಸ್ಥ;

ಮೂರು ಲೋಕ–ಸ್ವರ್ಗ, ಮರ್ತ್ಯ ಮತ್ತು ಪಾತಾಳ ಲೋಕಗಳು;

ಸಾರಥಿ–ಚಾಲಕ.

©KTBS Not to be republished

## ಅಭ್ಯಾಸ

**ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಗೋಪಾಲಕನು ಉತ್ತರಕುಮಾರನಲ್ಲಿ ಏನೆಂದು ವಿನಂತಿಸಿದನು?

________________________________________

೨. ಕೌರವರ ಕಡೆಯಿಂದ ಯುದ್ಧಕ್ಕೆ ಯಾರು ಯಾರು ಬಂದಿದ್ದಾರೆಂದು ಉತ್ತರಕುಮಾರನಿಗೆ ಗೋಪಾಲಕ ಹೇಳಿದನು?

________________________________________

೩. ಉತ್ತರೆಯು ತನ್ನ ಅಣ್ಣನಿಗೆ ಮೊದಲು ಯಾರೊಡನೆ ಯುದ್ಧ ಮಾಡಬೇಕೆಂದು ಹೇಳಿದಳು?

________________________________________

೪ ಉತ್ತರಕುಮಾರನು ರಥದಿಂದ ಹಾರಿ ಓಡಿಹೋದನು, ಏಕೆ?

________________________________________

**ಆ) ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಗೋಪಾಲಕನನ್ನು ಹೊರಗೆ ಹಾಕಿ ಎಂದು ಉತ್ತರಕುಮಾರ ಹೇಳಿದ್ದೇಕೆ?

________________________________________
________________________________________
________________________________________

೨. ಉತ್ತರಕುಮಾರ ಭೀಷ್ಮ, ದ್ರೋಣ, ಕರ್ಣರೊಂದಿಗೆ ಯುದ್ಧ ಮಾಡಲು ನಿರಾಕರಿಸಿದ್ದು ಏಕೆ?

________________________________________
________________________________________
________________________________________

**ಇ) ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರದಿಂದ ತುಂಬಿರಿ.**

೧. ಕೌರವರು ದನಕರುಗಳನ್ನು ಸೆರೆಹಿಡಿದಿದ್ದಾರೆಂದು ಉತ್ತರಕುಮಾರನಿಗೆ __________ ತಿಳಿಸಿದರು.

೨. ಉತ್ತರಕುಮಾರನ ತಂದೆಯ ಹೆಸರು __________ .

೩. ಕೌರವರ ಸೈನ್ಯದ ಮುಖಂಡತ್ವವನ್ನು ವಹಿಸಿದವರು __________ .

೪. ಉತ್ತರೆಯ ನಾಟ್ಯ ಗುರು __________

**ಈ) ಕೆಳಗಿನ ಮಾತುಗಳನ್ನು ಯಾರು ಹೇಳಿದರೆಂದು ಹೊಂದಿಸಿ ಬರೆಯಿರಿ.**

| ಅ | ಆ |
|---|---|
| ೧. "ಮೂರು ಲೋಕಗಳಲ್ಲಿಯೂ ನಿಮ್ಮಂಥ ಶೂರರಿಲ್ಲ." | ಅ. ಕೌರವ |
| ೨. "ಶೂರನಾದ ನನ್ನಣ್ಣನಿಗೆ ಸಾರಥಿಯಾಗಬೇಕು." | ಆ. ಉತ್ತರಕುಮಾರ |
| ೩. "ನೀನೇನು ಅರ್ಜುನನ ಸಾರಥಿಯೋ?" | ಇ. ಬೃಹನ್ನಳೆ |
| ೪. "ಹೌದು. ನಾನೇ ಅರ್ಜುನ." | ಈ. ಗೋಪಾಲಕ |
| | ಉ. ಉತ್ತರೆ |

©KTBS Not to be republished

## ಭಾಷಾಭ್ಯಾಸ

**ಅ) ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.**

ಶೂರ : ____________ , ____________

ಅಪ್ಪ : ____________ , ____________

ಸಾಗರ : ____________ , ____________

ಯುದ್ಧ : ____________ , ____________

**ಆ) ಕೊಟ್ಟಿರುವ ಪದ/ಪದಗುಚ್ಛಗಳನ್ನು ಬಳಸಿಕೊಂಡು ಸ್ವಂತ ವಾಕ್ಯ ರಚನೆ ಮಾಡಿರಿ.**

೧. ಎದುರು ನಿಲ್ಲು : ____________________________

೨. ಗಹಗಹಿಸಿ ನಗು : ____________________________

೩. ಸೆರೆಹಿಡಿ : ____________________________

೪. ಬೆನ್ನುಹತ್ತು : ____________________________

೫. ದಿಕ್ಕೆಟ್ಟು ಓಡು : ____________________________

**ಇ) ಕೆಳಗಿನ ಪದಗಳನ್ನು ಸರಿಯಾಗಿ ಜೋಡಿಸಿ ಅರ್ಥಪೂರ್ಣ ವಾಕ್ಯ ರಚಿಸಿರಿ.**

೧. ಸೆರೆಹಿಡಿದಿದ್ದಾರೆ ನಮ್ಮ ಕೌರವರು ಗೋವುಗಳನ್ನು

____________________________________________

೨. ಯುದ್ಧ ಹಾಗಾದರೆ ಮಾಡುವೆಯಾ? ನೀನೇ

____________________________________________

೩. ಯಾರೂ ಅಣ್ಣ ವೀರಾಧಿವೀರರು ನಿನ್ನಂಥ ಇಲ್ಲ

____________________________________________

©KTBS Not to be republished

೪. ಮಾಡಿ ಓಡಿಸಬೇಕು ನೀವು ಯುದ್ಧ ಕೌರವರನ್ನು

______________________________

**ಈ) ಕೆಳಗಿನ ಸಂಭಾಷಣೆಯನ್ನು ಗಮನಿಸಿ ನಾಟಕದ ಧಾಟಿಯಲ್ಲಿ ಹೇಳಿರಿ.**

**ಗೋಪಾಲಕ** : ಯುವರಾಜ ಉತ್ತರಕುಮಾರರಿಗೆ ಜಯವಾಗಲಿ. ಕೌರವರು ನಮ್ಮ ದನಕರುಗಳನ್ನು ಹಿಡಿದಿದ್ದಾರೆ! ಅಲ್ಲದೇ ನಮ್ಮ ಮೇಲೆ ಯುದ್ಧಕ್ಕೆ ಬಂದಿದ್ದಾರೆ. ದಯಮಾಡಿ ತಾವು ಬಂದು ನಮ್ಮ ದನಕರುಗಳನ್ನು ಬಿಡಿಸಿರಿ!

**ಉತ್ತರಕುಮಾರ** : ಎಲೈ ಹೇಡಿ ಗೋಪಾಲಕನೇ, ಅಂಜುಬುರುಕನೇ, ಯುದ್ಧಕ್ಕೆ ಹೆದರಿ ಓಡಿಬಂದಿರುವೆಯಾ? (ಚಪ್ಪಾಳೆ ತಟ್ಟಿ) ಈ ಹೇಡಿ ದನಗಾಹಿಯನ್ನು ಹೊರಗೆ ಹಾಕಿ.

**ಉ) ಕೆಳಗಿನ ಪ್ರಶ್ನೆಗಳಿಗೆ ಸೂಕ್ತ ಉತ್ತರ ಬರೆಯಿರಿ.**

೧. ರಾಜನ ಸಹಾಯ ಬೇಡಿ ಬಂದವರು ಯಾರು?

______________________________

೨. ಸಹಾಯ ಬೇಡಿ ಬಂದವನಿಗೆ ರಾಜ ನೀಡಿದ ಪ್ರತಿಕ್ರಿಯೆ ಏನು?

______________________________

೩. ದನಕರುಗಳನ್ನು ಹಿಡಿದವರು ಯಾರು?

______________________________

## ಭಾಷಾ ಚಟುವಟಿಕೆ

**ಅ) 'ಉತ್ತರಕುಮಾರನ ಜಂಭ' ನಾಟಕವನ್ನು ಅಭಿನಯಿಸಿರಿ.**

## ವ್ಯಾಕರಣ

### ಭಾಗ– 'ಅ'

**ಕ್ರಿಯಾಪದ**

ಕ್ರಿಯೆಯ ಅರ್ಥವನ್ನು ಕೊಡುವ ಪದಗಳೆಲ್ಲವೂ ಕ್ರಿಯಾಪದಗಳು. ಕ್ರಿಯಾಪದದ ಮೂಲರೂಪವನ್ನು ಧಾತು ಎಂದು ಕರೆಯುತ್ತಾರೆ. ಧಾತುಗಳಲ್ಲಿ ಎರಡು ವಿಧ.

©KTBS Not to be republished

೧) ಅಕರ್ಮಕಧಾತು                ೨) ಸಕರ್ಮಕಧಾತು

**ಅಕರ್ಮಕ ಧಾತು:** ಕರ್ಮಪದದ ಅಪೇಕ್ಷೆಯಿಲ್ಲದ ಧಾತುಗಳೆಲ್ಲ ಅಕರ್ಮಕ ಧಾತುಗಳು.

**ಉದಾಹರಣೆ:** ಮಲಗು, ಓಡು, ಇರು, ಬದುಕು, ಬಾಳು, ಹೋಗು, ಬರು, ನಾಚು ಇತ್ಯಾದಿ.

**ಸಕರ್ಮಕ ಧಾತು:** ಕರ್ಮಪದವನ್ನು ಅಪೇಕ್ಷಿಸುವ ಧಾತುಗಳೆಲ್ಲ ಸಕರ್ಮಕ ಧಾತುಗಳು.

**ಉದಾಹರಣೆ:** ಮಾಡು, ಕೊಡು, ಬಿಡು, ಉಣ್ಣು, ದಾಟು, ತಿನ್ನು, ತುಂಬು, ಹೊಡೆ, ಹೀರು, ಕಡಿ, ಮುಚ್ಚು, ತೆರೆ, ಕತ್ತರಿಸು ಮುಂತಾದವು.

ಅಕರ್ಮಕ ಮತ್ತು ಸಕರ್ಮಕ ವಾಕ್ಯಗಳಿಗೆ ಉದಾಹರಣೆಗಳು

| ಅಕರ್ಮಕ ವಾಕ್ಯಗಳು. | ಸಕರ್ಮಕ ವಾಕ್ಯಗಳು. |
|---|---|
| (ಇಲ್ಲಿ ಕರ್ಮಪದದ ಆವಶ್ಯಕತೆ ಇಲ್ಲ) | (ಇಲ್ಲಿ ಕರ್ಮಪದ ಬೇಕೇ ಬೇಕು) |
| ೧. ಗೌರಿ ಮಲಗಿದಳು. | ಗೌರಿ ಹಾಲನ್ನು ಕುಡಿದಳು. |
| ೨. ಸಂಗೀತ ಓಡಿದಳು. | ಸಂಗೀತ ಪುಸ್ತಕವನ್ನು ಓದಿದಳು. |
| ೩. ನಾಯಿ ಇದೆ. | ನಾಯಿ ಊಟವನ್ನು ಮಾಡುತ್ತದೆ. |
| ೪. ಅವಳು ಬದುಕಿದಳು | ಅವಳು ತಾಯಿಯನ್ನು ನೆನೆದಳು. |
| ೫. ಅಣ್ಣ ಬಂದನು | ಅಣ್ಣ ಅಡಿಗೆಯನ್ನು ಮಾಡಿದನು |

ಧಾತುಗಳಿಗೆ ಪ್ರತ್ಯಯಗಳು ಸೇರಿ ಕ್ರಿಯಾಪದವಾಗುವುದು.

## ಭಾಗ– 'ಆ'

**ಅ) ಮಾದರಿಯಂತೆ ಬರೆಯಿರಿ.**

ಮಾದರಿ  ಬರುತ್ತಾನೆ – ಬರು + ಉತ್ತ + ಆನೆ

೧. ಹೋದನು

೨. ನೋಡುವಳು

೩. ಕೊಡುತ್ತದೆ.

©KTBS Not to be republished

# ೧೧. ಬಂದೆವಿದೋ

– ಡಿ. ಎಸ್. ಕರ್ಕಿ

**ಪ್ರವೇಶ:** 'ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ' ಜನನಿ ಮತ್ತು ಜನ್ಮಭೂಮಿ ಸ್ವರ್ಗಕ್ಕಿಂತಲೂ ಮಿಗಿಲಾದವು. ಪ್ರತಿಯೊಬ್ಬರೂ ತಾಯಿ ಮತ್ತು ತಾಯಿನಾಡಿನ ಸೇವೆಗೆ ತ್ಯಾಗ, ಬಲಿದಾನಗಳಿಗೂ ಸದಾಸಿದ್ಧರಾಗಿರಬೇಕು. ಅಂತೆಯೇ ಭಾರತಾಂಬೆಯ ಗೌರವವನ್ನು ಕಾಪಾಡಲು ನಾವೆಲ್ಲರೂ ಕಂಕಣ ಬದ್ಧರಾಗಿರಬೇಕು ಎಂಬ ಸಂದೇಶ ಈ ಕವನದಲ್ಲಿದೆ.

ಬಂದೆವಿದೋ ಬಂದೆವಿದೋ ತಾಯೆ ನಿನ್ನ ಕರೆಗೆ
ನಮ್ಮ ಧಮನಿಯಲ್ಲಿ ರಕುತ ಧುಮುಕುತಿರುವವರೆಗೆ
ವೀರಮಾತೆ ಧೀರರಾಗಿ ನಿನ್ನ ಗೌರವಕ್ಕೆ
ಕಾದಿ ವಿಜಯಮಾಲೆ ಹಿಡಿದು ಬಹೆವು ನಿನ್ನ ಅಡಿಗೆ॥



ನಮ್ಮ ಪ್ರಾಣ ನಮ್ಮ ತ್ರಾಣ ಅರ್ಪಣ ತವಪದಕೆ
ಎದೆಯ ನೆಚ್ಚು ಭುಜದ ಕೆಚ್ಚು ದರ್ಪಣ ತವಜಯಕೆ
ಬಂದೆವಿದೋ ಭಾರತಾಂಬೆ ಧ್ವಜವನೆತ್ತಿ ಬಾನಿಗೆ
ಕಾದಿ ವೀರ ವಿಜಯಮಾಲೆ ತಹೆವು ನಿನ್ನ ಮುಡಿಗೆ॥

ನೀನೆ ಇತ್ತ ಶೌರ್ಯಧೈರ್ಯ ತಾಯೆ ನಿನಗೆ ಕಾಣಿಕೆ
ತಳೆದು ಬಂದೆವಿದೋ ಮಾತೆ ಬಂಧುರತೆಯ ರೆಕ್ಕೆ
ಮಾತೃಭಕ್ತಿ ಸ್ಫೂರ್ತಿಯಾಗೆ ವಿಜಯ ವೀರ ಸಿರಿಗೆ
ಕಾದಿ ಜಯದ ಮಾಲೆ ಹಿಡಿದು ಬಹೆವು ನಿನ್ನ ಪದಕೆ॥

©KTBS Not to be republished

## ಕೃತಿಕಾರರ ಪರಿಚಯ



'ಹಚ್ಚೇವು ಕನ್ನಡದ ದೀಪ' ಎಂಬ ಪ್ರಸಿದ್ಧ ಗೀತೆಯನ್ನು ರಚಿಸಿದ ಡಿ. ಎಸ್. ಕರ್ಕಿಯವರ ಪೂರ್ಣ ಹೆಸರು ದುಂಡಪ್ಪ ಸಿದ್ಧಪ್ಪ ಕರ್ಕಿ. ಇವರು ಬೆಳಗಾವಿ ಜಿಲ್ಲೆಯ ಹಿರೆಕೊಪ್ಪ ಗ್ರಾಮ ದಲ್ಲಿ ೫.೧೧.೧೯೦೭ರಲ್ಲಿ ಜನಿಸಿದರು. 'ನಕ್ಷತ್ರಗಾನ', 'ಭಾವತೀರ್ಥ', 'ಗೀತ ಗೌರವ', 'ನಮನ', 'ಕರಿಕೆ–ಕಣಗಲು', 'ಕನ್ನಡ ಛಂದೋವಿಕಾಸ', 'ನಾಲ್ದೆಸೆಯ ನೋಟ' ಮುಂತಾದವು ಪ್ರೊ. ಕರ್ಕಿ ಅವರ ಪ್ರಮುಖ ಕೃತಿಗಳು. 'ಬಣ್ಣದ ಚೆಂಡು ಮತ್ತು ತನನ ತೋಂ' ಇವರ ಮಕ್ಕಳ ಕವನಗಳು. ಇವರ 'ಗೀತ ಗೌರವ' ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಂದಿದೆ. ಶ್ರೀ ಕರ್ಕಿಯವರು ೧೬.೧.೧೯೮೪ರಲ್ಲಿ ನಿಧನರಾದರು.

**ಕ್ಷೇತ್ರ** : ಓದುವುದು

**ಸಾಮರ್ಥ್ಯ** : ಪದ್ಯವನ್ನು ಓದಿದ ಬಳಿಕ ಯಾರು? ಎಲ್ಲಿ? ಏನು? ಏಕೆ? ಪ್ರಶ್ನೆಗಳಿಗೆ ಉತ್ತರಿಸುವುದು.

### ಪದಗಳ ಅರ್ಥ

ಅರ್ಪಣ–ಸಮರ್ಪಣೆ;
ಕಾದಿ–ಕಾದಾಡಿ, ಹೋರಾಡಿ;
ಕೆಚ್ಚು–ಧೈರ್ಯ, ಸಾಹಸ;
ತವ–ನಿನ್ನ;
ತ್ರಾಣ–ಶಕ್ತಿ, ಬಲ, ಕಸುವು;
ದರ್ಪಣ–ಕನ್ನಡಿ ಮುಕುರ;
ಧಮನಿ–ರಕ್ತನಾಳ ನರ;
ನೆಚ್ಚು– ನಂಬಿಕೆ, ವಿಶ್ವಾಸ;
ಪದಕೆ–ಪಾದಕ್ಕೆ;
ಬಂಧುರತೆ–ಸುಂದರವಾದ;
ಬಾನು–ಆಕಾಶ–ಗಗನ;
ಮಾತೃ–ತಾಯಿ, ಜನನಿ;
ಮುಡಿ–ತಲೆ, ಶಿರ, ತುದಿ, ಶಿಖರ;
ರಕುತ–ನೆತ್ತರು, ರಕ್ತ;
ಸಿರಿ–ಸಂಪತ್ತು, ಐಶ್ವರ್ಯ.

### ಅಭ್ಯಾಸ

**ಅ) ಬಿಟ್ಟಿರುವ ಖಾಲಿ ಜಾಗಗಳನ್ನು ಸೂಕ್ತವಾದ ಪದಗಳಿಂದ ಭರ್ತಿ ಮಾಡಿರಿ.**

೧. ವೀರಮಾತೆ ನಿನ್ನ ಗೌರವಕ್ಕೆ–––––––––––––ಆಗಿ ಬಹೆವು.

(ಧೀರರಾಗಿ, ಭಕ್ತಿಯಿಂದ, ನಮ್ರರಾಗಿ, ವಿಧೇಯರಾಗಿ)

©KTBS Not to be republished

೨. ಬಂದೆವಿದೋ ಭಾರತಾಂಬೆ ------------ ಎತ್ತಿ ಬಾನಿಗೆ.

(ಕತ್ತಿ, ಹೂವಿನ ಹಾರ, ಕೋವಿ, ಧ್ವಜ)

೩. ವೀರರಾಗಿ ಕಾದಾಡಿ ನಿನ್ನ ಮುಡಿಗೆ -------------ತರುವೆವು.

(ಹೂಮಾಲೆ, ಮುತ್ತಿನಮಾಲೆ, ವಿಜಯಮಾಲೆ, ಏಲಕ್ಕಿಮಾಲೆ)

೪. ತಾಯೆ ನೀನೇ ಇತ್ತ ------------ಅನ್ನು ನಿನಗೆ ಕಾಣಿಕೆಯಾಗಿ ನೀಡುತ್ತೇವೆ.

(ಹಣ್ಣು ಹಾಲು, ಶೌರ್ಯಧೈರ್ಯ, ಕತ್ತಿ ಗುರಾಣಿ, ನೆಲ ಜಲ)

**ಆ) ಕೆಳಗಿನ ಪದ್ಯದ ಸಾಲುಗಳನ್ನು ಪೂರ್ಣಗೊಳಿಸಿ ಬರೆಯಿರಿ.**

೧. ನಮ್ಮ ಧಮನಿಯಲ್ಲಿ ರಕುತ ____________________

೨. ಕಾದಿ ಜಯದ ಮಾಲೆ ____________________

೩. ತಳೆದು ಬಂದೆವಿದೋ ಮಾತೆ ____________________

೪. ಎದೆಯ ನೆಚ್ಚು ಭುಜದ ಕೆಚ್ಚು ____________________

**ಇ) ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಬಂದೆವಿದೋ ಕವನದಲ್ಲಿ ಹೇಳಿರುವಂತೆ ವಿಜಯ ವೀರ ಸಿರಿಗೆ ಯಾವುದು ಸ್ಫೂರ್ತಿಯಾಗಿದೆ?

____________________

೨. ತಾಯಿಗೆ ನೀಡುತ್ತಿರುವ ಕಾಣಿಕೆ ಯಾವುದೆಂದು ಡಿ.ಎಸ್. ಕರ್ಕಿಯವರು ಹೇಳಿದ್ದಾರೆ?

____________________

೩. ಬಂದೆವಿದೋ ಪದ್ಯದಲ್ಲಿ ಹೇಳಿರುವಂತೆ ತಾಯಿಯ ತವಪದಕೆ ಯಾವುದು ಅರ್ಪಣ?

____________________

೪. ಕವಿಯು ತಾಯಿಯ ಮುಡಿಗೆ ಏನನ್ನು ತರುವುದಾಗಿ ಹೇಳಿದ್ದಾರೆ?

____________________

©KTBS Not to be republished

ಈ) ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.

೧. ತಾಯಿಗೆ ಅರ್ಪಿಸಲು ವಿಜಯಮಾಲೆಯನ್ನು ಯಾವ ರೀತಿಯಲ್ಲಿ ತರುವುದಾಗಿ ಕವಿ ಹೇಳಿದ್ದಾರೆ?

______________________________

______________________________

______________________________

೨. 'ಬಂದೆವಿದೋ' ಪದ್ಯದ ಸಾರಾಂಶವನ್ನು ಬರೆಯಿರಿ.

______________________________

______________________________

______________________________

## ಭಾಷಾಭ್ಯಾಸ

ಅ) ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.

ಧ್ವಜ ______________

ಬಾನು ______________

ಸಿರಿ ______________

ಆ) ಕೆಳಗಿನ ಪದಗಳಿಗೆ ತತ್ಸಮ ತದ್ಭವಗಳನ್ನು ಬರೆಯಿರಿ.

ಪ್ರಾಣ ______________

ರಕುತ ______________

ಬೀರ ______________

ಭಕ್ತಿ ______________

ಸಿರಿ ______________

©KTBS Not to be republished

ಇ) ಕೆಳಗಿನ ಪದಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸಿ ಬರೆಯಿರಿ

ವಿಜಯ ಮಾಲೆ ______________________________

______________________________

ಅರ್ಪಣ ______________________________

______________________________

ಭಾರತಾಂಬೆ ______________________________

______________________________

ಈ) ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.

ಧಮನಿಯಲ್ಲಿ

ಭಾರತಾಂಬೆ

ಬಂದೆವಿದೋ

ಸ್ಫೂರ್ತಿಯಾಗು

ಉ) ಬಂದೆವಿದೋ ಪದ್ಯದಲ್ಲಿರುವ ಪ್ರಾಸ ಪದಗಳನ್ನು ಗುರುತಿಸಿ ಬರೆಯಿರಿ.

## ಭಾಷಾ ಚಟುವಟಿಕೆ

ಅ) ಶಿಕ್ಷಕರ ನೆರವಿನಿಂದ 'ಬಂದೆವಿದೋ' ಪದ್ಯದ ಭಾವಾರ್ಥವನ್ನು ಬರೆಯಿರಿ.

______________________________

______________________________

______________________________

______________________________

______________________________

ಆ) ದೇಶಭಕ್ತಿಗೀತೆಗಳನ್ನು ಸಂಗ್ರಹಿಸಿ, ಸಾಮೂಹಿಕವಾಗಿ ಹಾಡಿರಿ.

©KTBS Not to be republished

# ೧೨. ರಸ್ತೆ ನಿಯಮಗಳು

**– ಸಂಗ್ರಹ**

**ಪ್ರವೇಶ:** ಯಾವುದೇ ಕಾರ್ಯ ನಿರ್ವಹಿಸುವಾಗ ಶಿಸ್ತು, ಶಾಂತಿ, ಸಂಯಮ ಅಗತ್ಯ. ನಿಯಮಗಳು ನಮಗಾಗಿ, ನಮ್ಮ ಒಳಿತಿಗಾಗಿ ರಚಿತವಾಗಿರುತ್ತದೆ. ರಸ್ತೆಗಳು ದೇಶದ ನರನಾಡಿಗಳಿದ್ದಂತೆ. ರಸ್ತೆಯ ಅಪಘಾತಗಳು ಬಹಳ ಆತಂಕಕಾರಿ. ರಸ್ತೆಯ ನಿಯಮಗಳ ಪಾಲನೆಯಿಂದ ನಾವೂ ಸುರಕ್ಷಿತರಾಗಿರುತ್ತೇವೆ; ಇತರರೂ ಸುರಕ್ಷಿತವಾಗಿರುತ್ತಾರೆ. ಅಪಘಾತಗಳನ್ನು ತಪ್ಪಿಸುವಲ್ಲಿ ನಮ್ಮ ಪಾಲೂ ಇರಲಿ. ಅದಕ್ಕಾಗಿ ರಸ್ತೆ ನಿಯಮವನ್ನು ಈ ಪಠ್ಯವು ತಿಳಿಸುತ್ತಿದೆ.

ಅಮೂಲ್ಯ ಚಿತ್ರದುರ್ಗದ ತನ್ನ ಮಾಮನ ಮನೆಗೆ ರಜೆ ಕಳೆಯಲು ಬಂದಿದ್ದಳು. ಆಕೆ ಇದ್ದದ್ದು ಚಿತ್ರದುರ್ಗದ ಸಮೀಪದ ಪುಟ್ಟಹಳ್ಳಿಯಲ್ಲಿ. ಆ ಹಳ್ಳಿಗೆ ಬಸ್ಸಿನ ಸಂಪರ್ಕವಿರಲಿಲ್ಲ. ಹಾಗಾಗಿ ಆಕೆ ಚಿತ್ರದುರ್ಗ ನಗರವನ್ನು ನೋಡಿಯೇ ಇರಲಿಲ್ಲ. ಮೊದಲ ಬಾರಿ ಚಿತ್ರದುರ್ಗ ನಗರವನ್ನು ಕಂಡಾಕ್ಷಣ ಆಕೆಗೆ ಭಯವಾಗಿತ್ತು. 'ಎಷ್ಟೊಂದು ಜನ, ಎಷ್ಟೊಂದು ವಾಹನಗಳು!' ಎಂದು ಮಾಮನ ಬಳಿ ಹೇಳಿದ್ದಳು. ಅವಳ ಮಾತಿಗೆ ಮಾಮ ನಕ್ಕಿದ್ದ. ಎರಡು ದಿನ ಮನೆಯಲ್ಲಿ ಮಜವಾಗಿ ಆಟವಾಡಿ ಅಂತೂ ಅವಳು ಬಹಳ ಆಸೆ ಇಟ್ಟುಕೊಂಡಿದ್ದ ಚಿತ್ರದುರ್ಗ ಕೋಟೆಯನ್ನು ನೋಡಲು ಮಾಮನ ಜೊತೆ ಹೊರಟು ನಿಂತಳು. ಮನೆಯಿಂದ ಹೊರ ಬಂದು ಅವರು ಮುಖ್ಯ ರಸ್ತೆಯ ಬದಿಯಲ್ಲಿ ಚಲಿಸತೊಡಗಿದರು. ಸಹಜವಾಗಿ ಕುತೂಹಲಿಯಾದ ಅಮೂಲ್ಯ ತನ್ನ ಪ್ರಶ್ನೆಗಳನ್ನು ಮಾಮನ ಬಳಿ ಬಿಚ್ಚಿಟ್ಟಳು.

**ಅಮೂಲ್ಯ** : ಮಾಮಾ, ಇಲ್ಲಿ ಜನ ರಸ್ತೆಯನ್ನು ದಾಟುವುದು ಎಷ್ಟು ಕಷ್ಟ ಅಲ್ಲವೇ?

**ಮಾಮ** : ಹೌದೇ? ನಿನಗೆ ಹಾಗೆ ಅನ್ನಿಸುತ್ತದೆಯೇ? ನಗರದಲ್ಲೇ ವಾಸವಾಗಿರುವ ನಮಗೆ ಅದು ಅಷ್ಟೇನೂ ಕಷ್ಟ ಅನ್ನಿಸುವುದಿಲ್ಲ.

**ಅಮೂಲ್ಯ** : ನನಗಂತೂ ಈ ಜನಸಂದಣಿ, ವಾಹನಗಳನ್ನು ನೋಡಿದರೆ ತಲೆ ಚಕ್ರ ಬಂದಂತಾಗುತ್ತಿದೆ.

**ಮಾಮ** : ಇದು ಮೊದಲ ಬಾರಿ ಅಲ್ಲವೇ, ಅದಕ್ಕೇ ಹಾಗಾಗುತ್ತಿದೆ. ಇಲ್ಲೇ ಪಾರ್ಕಿನಲ್ಲಿ ಸ್ವಲ್ಪ ಹೊತ್ತು ಕುಳಿತು ಸುಧಾರಿಸಿಕೊಳ್ಳೋಣವೇ?

**ಅಮೂಲ್ಯ** : ಅಯ್ಯೋ ಬೇಡ ಮಾಮಾ. ನಾನು ಮೊದಲು ಕೋಟೆ ನೋಡಬೇಕು.

**ಮಾಮ** : ಆಯ್ತು. ಹಾಗಾದರೆ ಈಗ ನಾವು ಈ ರಸ್ತೆಯನ್ನು ದಾಟೋಣ. ಅಲ್ಲಿಂದ ನೇರವಾಗಿ ನಡೆದರೆ ಕೋಟೆಯ ಮುಖ್ಯದ್ವಾರದೆಡೆ ಹೋಗಬಹುದು.

**ಅಮೂಲ್ಯ** : ಅರೆ! ಈ ರಸ್ತೆಯನ್ನು ದಾಟುವುದಾ? ಅದು ಸಾಧ್ಯವಿಲ್ಲ ಅನ್ನಿಸುತ್ತಿದೆ!

**ಮಾಮ** : ಇಲ್ಲಿ ನೋಡು. ರಸ್ತೆಯನ್ನು ದಾಟಲು ಕೆಲವು ನಿಯಮಗಳಿವೆ. ಅವುಗಳನ್ನು ಪಾಲಿಸಿದರೆ ಯಾವ ತೊಂದರೆಯೂ ಆಗುವುದಿಲ್ಲ.

©KTBS Not to be republished

**ಅಮೂಲ್ಯ** : ಆದರೆ ರಸ್ತೆ ಮೇಲೆ ಹೋಗುವ ವಾಹನದ ಚಾಲಕರು ನಮ್ಮ ಮೇಲೇ ವಾಹನ ಚಲಾಯಿಸಿದರೆ?

**ಮಾಮ** : ನಮ್ಮಂತಹ ಪಾದಚಾರಿಗಳಿಗೆ ಹೇಗೆ ಕೆಲವೊಂದು ನಿರ್ದಿಷ್ಟ ನಿಯಮಗಳಿರುತ್ತವೋ ಹಾಗೆಯೇ ವಾಹನ ಚಾಲಕರಿಗೂ ನಿಯಮಗಳಿರುತ್ತವೆ. ನಾವು ಯಾವಾಗಲೂ ಪಾದಚಾರಿಗಳ ಜಾಗದ ರಸ್ತೆಯ ಮೇಲೆ ಎಡಭಾಗದಲ್ಲೇ ಚಲಿಸಬೇಕು.





**ಅಮೂಲ್ಯ** : ಹೌದೇ?

**ಮಾಮ** : ಹೌದು. ಈಗ ನೋಡು ನಾವು ಈ ರಸ್ತೆಯನ್ನು ದಾಟಬೇಕು ಅಂದರೆ ಎಲ್ಲಿ ಬೇಕೋ ಅಲ್ಲಿ ದಾಟುವಂತಿಲ್ಲ. ಯಾವ ಸಮಯದಲ್ಲಾದರೂ ದಾಟುವಂತಿಲ್ಲ.

**ಅಮೂಲ್ಯ** : ಮತ್ತೆ?

**ಮಾಮ** : ವಾಹನಗಳು ನಿಲ್ಲಲು, ಚಲಿಸಲು, ಚಲಿಸುವುದಕ್ಕೋಸ್ಕರ ಸಿದ್ಧರಾಗಲು ಟ್ರಾಫಿಕ್ ಸಿಗ್ನಲ್ ಲೈಟ್‌ಗಳಿವೆ. ಅದೋ ಅಲ್ಲಿ ಕಾಣುತ್ತಿವೆಯಲ್ಲಾ ಅವೇ. ಕೆಂಪು ದೀಪ ಹತ್ತಿದರೆ ಎದುರು ರಸ್ತೆಯ ವಾಹನ ಚಾಲಕರು ತಮ್ಮ ವಾಹನವನ್ನು ನಿಲ್ಲಿಸಿಕೊಳ್ಳಬೇಕು. ಹಳದಿ ದೀಪ ಹತ್ತಿದಾಕ್ಷಣ ವಾಹನವನ್ನು ಚಾಲನೆಯಲ್ಲಿಟ್ಟು ಹೊರಡಲು ಸಿದ್ಧರಾಗಬೇಕು ಹಾಗೂ ಹಸಿರು ದೀಪ ಬಂದಾಗ ಹೊರಡಬೇಕು.


**ಅಮೂಲ್ಯ** : ಹಾಗಾದರೆ ನಾವು ಕೆಂಪು ದೀಪ ಹತ್ತಿ ವಾಹನಗಳು ನಿಂತಾಕ್ಷಣ ರಸ್ತೆ ದಾಟಬೇಕು ಅಲ್ಲವೇ?

**ಮಾಮ** : ಹೌದು. ಆದರೆ ಪಾದಚಾರಿಗಳು ರಸ್ತೆ ದಾಟಲೆಂದೇ ಝೀಬ್ರಾ ಪಟ್ಟಿಗಳು ಇರುತ್ತವೆ. ಅದೋ ನೋಡು ಅಲ್ಲಿದೆ. ನಡೆ ಅತ್ತ ಕಡೆ ನಡೆದು ರಸ್ತೆ ದಾಟೋಣ.

(ಇಬ್ಬರೂ ರಸ್ತೆಯನ್ನು ದಾಟುವರು)

© KTBS Not to be republished

**ಅಮೂಲ್ಯ :** ಅರೆ, ಎಷ್ಟು ಸುಲಭವಾಗಿ ರಸ್ತೆ ದಾಟಿಬಿಟ್ಟೆವಲ್ಲ! ಈ ರಸ್ತೆಯ ನಿಯಮ ನನಗೆ ಬಹಳ ಇಷ್ಟವಾಯಿತು. ಇನ್ನು ನಾನು ಈ ನಗರದಲ್ಲಿ ಆರಾಮವಾಗಿ ಓಡಾಡುವೆ.



**ಮಾಮ :** ಒಳ್ಳೆಯದು. ಆದರೆ ಮಕ್ಕಳು ರಸ್ತೆ ದಾಟುವಾಗ ದೊಡ್ಡವರು ಒಬ್ಬರು ಜೊತೆಯಲ್ಲಿರಬೇಕು. ಅಲ್ಲದೇ ರಸ್ತೆಯನ್ನು ದಾಟುವಾಗ ಇನ್ನೂ ಹಲವಾರು ನಿಯಮಗಳು ಇವೆ. ರಸ್ತೆ ದಾಟುವಾಗ ಎಡ ಬಲ ನೋಡಿ ದಾಟಬೇಕು. ದಾಟುವಾಗ ಅವಸರ ಮಾಡಬಾರದು, ಓಡಬಾರದು. ಜಾರಿ ಬೀಳುವ ಸಾಧ್ಯತೆ ಇರುತ್ತದೆ.

**ಅಮೂಲ್ಯ :** ಅಲ್ಲಿ ಕಾಣುತ್ತಿರುವುದೇನು ಮಾಮಾ?

**ಮಾಮ :** ಅದು ಚಿಹ್ನಾ ಫಲಕ (ಸೈನ್ ಬೋರ್ಡ್) ಆ ರೀತಿಯ ಚಿಹ್ನಾ ಫಲಕಗಳು ಅದೆಷ್ಟೋ ಇರುತ್ತವೆ. ಅವು ವಿವಿಧ ರೀತಿಯ ಮಾಹಿತಿಯನ್ನು ಕೊಡುತ್ತವೆ. ಉದಾಹರಣೆಗೆ ಇಲ್ಲಿ ಶಾಲೆಯಿದೆ, ಹತ್ತಿರದಲ್ಲಿ ಆಸ್ಪತ್ರೆ ಇದೆ, ಮುಂದೆ ತಿರುವು ಇದೆ ಇತ್ಯಾದಿ ಮಾಹಿತಿಗಳಿಂದ ಚಾಲಕರು ಜಾಗರೂಕರಾಗುತ್ತಾರೆ.

**ಅಮೂಲ್ಯ :** ಓಹೋ ರಸ್ತೆಯಲ್ಲೇ ಓದಿ ತಿಳಿದುಕೊಳ್ಳುವ ಎಷ್ಟೋ ಅವಕಾಶಗಳಿರುತ್ತವೆ. ನಾನು ಅವನ್ನೆಲ್ಲಾ ತಿಳಿದುಕೊಳ್ಳಬೇಕಲ್ಲ ಮಾಮಾ.

**ಮಾಮ :** (ನಗುತ್ತ) ಆಯ್ತು ತಿಳಿದುಕೊಳ್ಳುವಿಯಂತೆ. ಮನೆಗೆ ಹೋದತಕ್ಷಣ ಅದಕ್ಕೆ ಸಂಬಂಧಿಸಿದ ಪುಸ್ತಕದ ಮೂಲಕ ತಿಳಿಸಿ ಹೇಳುತ್ತೇನೆ. ಅಗೋ ನೋಡು ನಿನ್ನ ಪ್ರಿಯವಾದ ಚಿತ್ರದುರ್ಗದ ಕಲ್ಲಿನ ಕೋಟೆ ಬಂತು.

**(ಪ್ರವೇಶ ದ್ವಾರದ ಬಳಿ ಇರುವ 'ಇಲ್ಲಿ ಟಿಕೆಟ್ ಕೊಳ್ಳಿ' ಎಂಬ ಸೂಚನೆಯ ಫಲಕ ನೋಡಿಕೊಂಡು ಅತ್ತ ನಡೆದು ಟಿಕೇಟ್ ಪಡೆದು ಒಳಗೆ ನಡೆದರು.)**

© KTBS Not to be republished

**ಕ್ಷೇತ್ರ :** ಬರೆಯುವುದು

**ಸಾಮರ್ಥ್ಯ :** ಸೂಚನೆಗಳನ್ನು ಅನುಸರಿಸಿ ಸ್ವಂತ ವಾಕ್ಯ ಬರೆಯುವುದು

## ಪದಗಳ ಅರ್ಥ

ಚಿಹ್ನಾ ಫಲಕ–ರಸ್ತೆಯ ಎಡ ಬಲ ಬದಿಯಲ್ಲಿ ವಿವಿಧ ವಿಷಯದ ಮಾಹಿತಿಯನ್ನು ಚಿಹ್ನೆಗಳ ಮೂಲಕ ತಿಳಿಸುವ ಫಲಕ; ಜನಸಂದಣಿ–ಜನರು ಇರುವ ಸ್ಥಳ; ಜಾಗರೂಕತೆ–ಎಚ್ಚರದಿಂದಿರುವ; ತಿರುವು–ಹೊರಳುವ ದಾರಿ; ದ್ವಾರ–ಬಾಗಿಲು; ನಿರ್ದಿಷ್ಟ–ಗೊತ್ತುಪಡಿಸಿದ; ಪಾರ್ಕ್–ಉದ್ಯಾನವನ; ಸ್ಪಷ್ಟಪಡಿಸಿದ ಕುತೂಹಲ – ತಿಳಿದುಕೊಳ್ಳಬೇಕೆಂಬ ಅಪೇಕ್ಷೆ.

## ಅಭ್ಯಾಸ

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಅಮೂಲ್ಯ ಎಲ್ಲಿಗೆ ಹೊರಟಿದ್ದಳು?

________________________________________

೨. ರಸ್ತೆಯನ್ನು ದಾಟುವ ಸರಿಯಾದ ಸ್ಥಳ ಯಾವುದು?

________________________________________

೩. ರಸ್ತೆಯ ಯಾವ ಬದಿಯಲ್ಲಿ ಚಲಿಸಬೇಕು?

________________________________________

©KTBS Not to be republished

## ಆ) ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.

೧. ರಸ್ತೆ ದಾಟುವಾಗ ಯಾವ ಯಾವ ನಿಯಮಗಳನ್ನು ಅನುಸರಿಸಬೇಕು?

______________________________

______________________________

______________________________

೨. ದಿನನಿತ್ಯ ನೀವು ರಸ್ತೆ ಬದಿಯಲ್ಲಿ ಕಾಣುವ ಟ್ರಾಫಿಕ್ ಚಿಹ್ನೆಗಳನ್ನು ವಿವರಿಸಿ.

______________________________

______________________________

______________________________

## ಇ) ಇವುಗಳು ಸರಿಯೇ ತಪ್ಪೇ ತಿಳಿಸಿರಿ.

೧. ರಸ್ತೆಯ ಮಧ್ಯೆ ನಾವು ಮಾತನಾಡುತ್ತಾ ನಿಲ್ಲಬಹುದು. ಸರಿ/ತಪ್ಪು

೨. ರಸ್ತೆ ದಾಟುವಾಗ ಎಡ ಬದಿ ನೋಡಿದರೆ ಸಾಕು. ಸರಿ/ತಪ್ಪು

೩. ಟ್ರಾಫಿಕ್ ಸಿಗ್ನಲ್ ಕೆಂಪು ದೀಪ ತೋರಿಸಿದಾಗ ನಾವು ಚಲಿಸಬೇಕು. ಸರಿ/ತಪ್ಪು

೪. ವಾಹನ ನಡೆಸುವ ಚಾಲಕರು ಮೊಬೈಲ್‌ನಲ್ಲಿ ಮಾತನಾಡಬಾರದು. ಸರಿ/ತಪ್ಪು

©KTBS Not to be republished

### ಈ) ಕ್ರಮವಾಗಿ ಹೊಂದಿಸಿ ಬರೆಯಿರಿ.

| ಅ | ಬ | ಉತ್ತರ |
|---|---|---|
| ೧. 'ಸಿದ್ಧರಾಗಿ' | ಕೆಂಪು ದೀಪ | ___________ |
| ೨. 'ಚಲಿಸಿ' | ನೀಲಿ ದೀಪ | ___________ |
| ೩. 'ನಿಲ್ಲಿ' | ಹಳದಿ ದೀಪ | ___________ |
| | ಹಸಿರು ದೀಪ | ___________ |

## ಭಾಷಾಭ್ಯಾಸ

### ಅ) ಕೆಳಗಿನ ಬರಹವನ್ನು ಓದಿರಿ.

- ನಾವು ರಸ್ತೆ ದಾಟುವಾಗ ಎಡ-ಬಲ ನೋಡಬೇಕು.
- ಪಾದಚಾರಿಗಳು ರಸ್ತೆಯನ್ನು ಝೀಬ್ರಾ ಪಟ್ಟಿಗಳ ಜಾಗದಲ್ಲಿಯೇ ದಾಟಬೇಕು.
- ರಸ್ತೆಯಲ್ಲಿ ನಡೆಯುವಾಗ ಅವಸರ ಮಾಡಬಾರದು.
- ರಸ್ತೆಯಲ್ಲಿ ಓಡಾಡುವಾಗ ವಾಹನಗಳ ಸದ್ದಿಗೆ ಪ್ರತಿಕ್ರಿಯೆ ಮಾಡಬೇಕು.
- ಇನ್ನೊಬ್ಬರನ್ನು ತಳ್ಳಿಕೊಂಡು ನಡೆಯುವುದು, ಓಡುವುದು ಮಾಡಬಾರದು.

## ಭಾಷಾ ಚಟುವಟಿಕೆ

### ಅ) ಕೆಳಗಿನ ಬರೆವಣಿಗೆಯನ್ನು ಓದಿ, ನಂತರ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ.

ವಿಶ್ವದ ಎಲ್ಲ ಜನರಿಗೂ ಅರ್ಥವಾಗುವ ಏಕೈಕ ಭಾಷೆ ಸಂಗೀತ. ಇಂಪಾದ ಶಬ್ದದ ಲಯಬದ್ಧವಾದ ನಿರೂಪಣೆಯನ್ನೇ ಸಂಗೀತ ಎನ್ನಬಹುದು. ಈ ತರಹದ ಇಂಪಾದ ಶಬ್ದವನ್ನು ಮನುಷ್ಯ ತನ್ನ ಧ್ವನಿ ಅಂಗಗಳಿಂದ ಹೊರಡಿಸಿದರೆ ಅದು ಗಾಯನವಾಗುತ್ತದೆ. ಅದೇ ರೀತಿಯ ನಾದವನ್ನು ಹೊರಡಿಸುವ ಶಬ್ದವನ್ನು ಕೊಳಲು, ವೀಣೆ, ತಬಲ ಮುಂತಾದ ಸಂಗೀತ ವಾದ್ಯಗಳಿಂದಲೂ ಹೊರಡಿಸಬಹುದು. ಕೊಳಲನ್ನು ಬಿದಿರಿನಿಂದ ತಯಾರು ಮಾಡುತ್ತಾರೆ. ವಿವಿಧ ಮಾಧುರ್ಯ ಹೊಮ್ಮಿಸುವ ತಂತಿಗಳನ್ನು ಎಳೆದು ಮರದ ಉಪಕರಣಕ್ಕೆ ಕಟ್ಟಿ ವೀಣೆ, ಸಿತಾರ್, ಗಿಟಾರು ಇತ್ಯಾದಿ ತಂತಿವಾದ್ಯಗಳನ್ನು ಮಾಡುತ್ತಾರೆ. ಅದೇ ರೀತಿ ಚರ್ಮವನ್ನು ವಾದ್ಯದ ಬಾಯಿಗೆ ಎಳೆದು ಕಟ್ಟಿ ಮರ್ದನ ವಾದ್ಯಗಳಾದ ತಬಲ, ಮೃದಂಗ, ಡೋಲು, ತಮಟೆ ಮುಂತಾದ ವಾದ್ಯಗಳನ್ನು ಮಾಡುತ್ತಾರೆ.

©KTBS Not to be republished

**ಸ ರಿ ಗ ಮ ಪ ದ ನಿ** ಎಂಬ ಸಪ್ತ ಸ್ವರಗಳಿಂದ ಸಂಗೀತ ಆಗಿದೆ ಎಂದು ಹೇಳುತ್ತಾರೆ. ಸಂಗೀತವನ್ನು ಆಲಿಸುವುದರಿಂದ ನಮ್ಮ ಮನಸ್ಸಿಗೆ ಸಂತೋಷವಾಗುತ್ತದೆ. ಸಂಗೀತ ಒಂದು ಶ್ರೇಷ್ಠವಾದ ಕಲೆ.

**ಪ್ರಶ್ನೆಗಳು :**

೧. ವಿಶ್ವದ ಎಲ್ಲ ಜನರಿಗೂ ಅರ್ಥವಾಗುವ ಭಾಷೆ ಯಾವುದು?

_______________________________________________

೨. ಸಂಗೀತ ಎಂದರೇನು?

_______________________________________________

೩. ತಂತಿ ವಾದ್ಯಗಳು ಯಾವುವು?

_______________________________________________

೪. ಈ ಗದ್ಯಭಾಗಕ್ಕೆ ಸರಿ ಹೊಂದುವ ಶೀರ್ಷಿಕೆಯನ್ನು ಬರೆಯಿರಿ.

_______________________________________________

**ಆ) ಕೆಳಗೆ ಆವರಣದಲ್ಲಿ ನೀಡಿರುವ ಕ್ರಿಯಾಪದಗಳನ್ನು ಉಪಯೋಗಿಸಿ ವಾಕ್ಯ ರಚನೆ ಮಾಡಿರಿ.**

೧. ಕಿರಣನು ಶಾಲೆಗೆ ______________

೨. ಲಕ್ಷ್ಮಿಯು ಹಾಡನ್ನು ______________

೩. ಇಲಿಯು ರೊಟ್ಟಿಯನ್ನು ______________

(ತಿಂದಳು, ಹೋದಳು, ಹಾಡುವಳು, ತಿಂದನು, ಹೋದನು, ತಿನ್ನುತ್ತದೆ)

©KTBS Not to be republished

ಇ) ಕೆಳಗಿನ ಫಲಕಗಳು ಏನನ್ನು ಸೂಚಿಸುತ್ತವೆಂದು ನಿಮ್ಮ ಸ್ನೇಹಿತರೊಡನೆ ಚರ್ಚಿಸಿ ಬರೆಯಿರಿ.











ಈ) ರೈಲು, ಬಸ್ ಪ್ರಯಾಣ ಮಾಡುವಾಗ ಅನುಸರಿಸಬೇಕಾದ ನಿಯಮಗಳಾವುವು?

ಉ) ನೀರು, ಗಾಳಿ ಮತ್ತು ಶಬ್ದಮಾಲಿನ್ಯ ಆಗದಂತೆ ಯಾವ ಕ್ರಮಗಳನ್ನು ತೆಗೆದುಕೊಳ್ಳಬಹುದು ಪಟ್ಟಿ ಮಾಡಿರಿ.

©KTBS Not to be republished

ಊ) ಕೆಳಗಿನ ಚಿತ್ರವನ್ನು ನೋಡಿ. ಇದಕ್ಕೆ ಸಂಬಂಧಿಸಿದಂತೆ ಹತ್ತು ವಾಕ್ಯಗಳಲ್ಲಿ ಬರೆಯಿರಿ.



©KTBS Not to be republished

## ವ್ಯಾಕರಣ

### ಭಾಗ– 'ಅ'

ಧಾತುಗಳಿಗೆ ಸೇರುವ ಆನೆ, ಆಳೆ, ಅದೆ, ಅನು, ಅಳು ಮುಂತಾದ ಪ್ರತ್ಯಯಗಳನ್ನು ಆಖ್ಯಾತ ಪ್ರತ್ಯಯಗಳೆನ್ನುವರು. ಧಾತು ಮತ್ತು ಆಖ್ಯಾತ ಪ್ರತ್ಯಯಗಳ ನಡುವೆ ದ, ಉತ್ತ, ವ ಎಂಬ ಕಾಲಸೂಚಕ ಪ್ರತ್ಯಯಗಳು ಸೇರಿ ಮೂರು ಪ್ರಕಾರದ ಕ್ರಿಯಾಪದಗಳಾಗುವವು.

ಭೂತಕಾಲ ಸೂಚಕ ಪ್ರತ್ಯಯ–'ದ'

ವರ್ತಮಾನಕಾಲ ಸೂಚಕ ಪ್ರತ್ಯಯ–'ಉತ್ತ'

ಭವಿಷ್ಯತ್‌ಕಾಲ ಸೂಚಕ ಪ್ರತ್ಯಯ–'ವ'

೧. ಧಾತುಗಳಿಗೂ ಆಖ್ಯಾತ ಪ್ರತ್ಯಯಕ್ಕೂ ಮಧ್ಯದಲ್ಲಿ 'ದ' ಎಂಬ ಕಾಲಸೂಚಕ ಪ್ರತ್ಯಯವು ಸೇರಿ ಭೂತಕಾಲ ಕ್ರಿಯಾಪದವಾಗುವುದು.

೨. ಧಾತುಗಳಿಗೂ ಆಖ್ಯಾತ ಪ್ರತ್ಯಯಕ್ಕೂ ಮಧ್ಯದಲ್ಲಿ 'ಉತ್ತ' ಎಂಬ ಕಾಲಸೂಚಕ ಪ್ರತ್ಯಯವು ಸೇರಿ ವರ್ತಮಾನ ಕಾಲ ಕ್ರಿಯಾಪದವಾಗುವುದು.

೩. ಧಾತುಗಳಿಗೂ ಆಖ್ಯಾತ ಪ್ರತ್ಯಯಕ್ಕೂ ಮಧ್ಯದಲ್ಲಿ 'ವ' ಎಂಬ ಕಾಲಸೂಚಕ ಪ್ರತ್ಯಯವು ಸೇರಿ ಭವಿಷ್ಯತ್‌ಕಾಲ ಕ್ರಿಯಾಪದವಾಗುವುದು.

### ಭಾಗ– 'ಆ'

**ಅ) ಕೆಳಗಿನ ಹೇಳಿಕೆಗಳ ಕೆಳಗೆ ನಾಲ್ಕು ಪರ್ಯಾಯ ಪದಗಳನ್ನು ಕೊಟ್ಟಿದೆ. ಸರಿ ಹೊಂದುವ ಸೂಕ್ತ ಉತ್ತರವನ್ನು ಗುರುತಿಸಿ ಬರೆಯಿರಿ.**

೧. ಕಾಲಗಳಲ್ಲಿ ಮುಖ್ಯವಾಗಿ ____________ ಬಗೆಗಳಿವೆ

(ಅ. ಎರಡು ಆ. ಹತ್ತು ಇ. ಐದು ಈ. ಮೂರು)

©KTBS Not to be republished

೨. ಭೂತಕಾಲಕ್ಕೆ ಸರಿಯಾದ ಉದಾಹರಣೆ ________________

(ಅ. ಓದಿದನು ಆ. ಓದುವುದಿಲ್ಲ ಇ. ಓದುತ್ತಾನೆ ಈ. ಓದುವನು)

೩. ವರ್ತಮಾನ ಕಾಲಕ್ಕೆ ಸರಿಯಾದ ಉದಾಹರಣೆ ______________

(ಅ. ಹಾಡಿದನು ಆ. ಹಾಡುವನು ಇ. ಹಾಡಲಿಲ್ಲ ಈ. ಹಾಡುತ್ತಾನೆ)

೪. ಭವಿಷ್ಯತ್ ಕಾಲಕ್ಕೆ ಸರಿಯಾದ ಉದಾಹರಣೆ ________________

(ಅ. ತಿನ್ನುವುದಿಲ್ಲ ಆ. ತಿಂದಳು ಇ. ತಿನ್ನುತ್ತಾಳೆ ಈ. ತಿನ್ನುವಳು)

**ಆ) ವಾಕ್ಯಗಳು :** ಪದಗಳ ಅರ್ಥಪೂರ್ಣ ಸಮೂಹವನ್ನು ವಾಕ್ಯ ಎನ್ನುತ್ತೇವೆ.

(**ಉದಾ :** ಬೆಕ್ಕು ಹಾಲನ್ನು ಕುಡಿಯಿತು.)


©KTBS Not to be republished


# ೧೩. ಶಾಲಾ ವಾರ್ಷಿಕೋತ್ಸವ

– ಸಂಗ್ರಹ


**ಪ್ರವೇಶ:** ನಿಮ್ಮ ಶಾಲೆಯಲ್ಲಿ ವಾರ್ಷಿಕೋತ್ಸವವನ್ನು ಆಚರಿಸಿರುತ್ತೀರಲ್ಲವೇ? ಅದಕ್ಕೆ ನಿಮ್ಮ ಶಾಲೆಯನ್ನು ಸಜ್ಜುಗೊಳಿಸಲು ಶಿಕ್ಷಕರು ನಿಮಗೆ ಯಾವ ಯಾವ ಸೂಚನೆಗಳನ್ನು ನೀಡುತ್ತಾರೆ? ನೀವು ಹೇಗೆ ಅವುಗಳನ್ನು ಅನುಸರಿಸುತ್ತೀರಿ?


ನಿಮ್ಮ ಶಿಕ್ಷಕರ ಮಾರ್ಗದರ್ಶನದಲ್ಲಿ ಆ ತರಹ ಒಂದು ಅಣಕು ಕಾರ್ಯಕ್ರಮ ಮಾಡಿ.






© KTBS Not to be republished










©KTBS
Not to be republished









©KTBS Not to be republished




ವಾರ್ಷಿಕೋತ್ಸವ ಸಮಾರಂಭದ ನಂತರ ಶಾಲೆಯಿಂದ ವಿತರಿಸಲಾದ ಉಪಹಾರವನ್ನು ಸೇವಿಸಿ ಲಕ್ಷ್ಮಿಯು ತನ್ನ ಅಣ್ಣನೊಂದಿಗೆ ಮನೆಗೆ ಹಿಂತಿರುಗಿದಳು.

©KTBS Not to be republished

| | |
|---|---|
| ಕ್ಷೇತ್ರ | : ಓದುವುದು |
| ಸಾಮರ್ಥ್ಯ | : ಸೂಚನಾ ಫಲಕಗಳಲ್ಲಿನ ಸರಳ ಸೂಚನೆ ಮತ್ತು ಭಿತ್ತಿಪತ್ರಗಳನ್ನು ಓದುವುದು |

## ಪದಗಳ ಅರ್ಥ

ನುಗ್ಗು–ನುಸುಳು;

ಫಲಕ–ಸೂಚನಾ ಹಲಗೆ;

ಮಿತ–ಎಲ್ಲೆಮೀರದ;

ವಾರ್ಷಿಕೋತ್ಸವ–ವರ್ಷಕ್ಕೊಮ್ಮೆ ಆಚರಿಸುವ ಉತ್ಸವ;

ಸದ್ದು–ಗಲಾಟೆ, ಗದ್ದಲ.

## ಟಿಪ್ಪಣಿ

**ಸೂಚನಾ ಫಲಕ** – ಯಾವುದೇ ಕೆಲಸ ನಿರ್ವಹಿಸಲು, ನಿಯಮ ಪಾಲಿಸಲು ಆಯಾ ಸ್ಥಳಗಳಲ್ಲಿ ಸೂಚನೆಗಳನ್ನೊಳಗೊಂಡಿರುವ ಫಲಕಗಳು.

**ಭಿತ್ತಿ ಚಿತ್ರ** – ಗೋಡೆ ಮೇಲೆ ಅಂಟಿಸಿರುವ ಮಾಹಿತಿ ಪತ್ರ.

## ಅಭ್ಯಾಸ

**ಅ) ಕೆಳಗಿನ ಪ್ರಶ್ನೆಗಳಿಗೂ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಯಾರ ಶಾಲೆಯಲ್ಲಿ ವಾರ್ಷಿಕೋತ್ಸವ ಏರ್ಪಡಿಸಿದ್ದರು?

______________________________

೨. ವಾರ್ಷಿಕೋತ್ಸವಕ್ಕೆ ಅಣ್ಣನೊಂದಿಗೆ ಬಂದಿದ್ದವರು ಯಾರು?

______________________________

೩. ಕಸದ ತೊಟ್ಟಿಯ ಬಳಿಯಲ್ಲಿದ್ದ ಸೂಚನಾ ಫಲಕದಲ್ಲಿ ಏನೆಂದು ಬರೆದಿತ್ತು?

______________________________

©KTBS Not to be republished

೪. ಶೌಚಾಲಯದ ಮುಂದೆ ಹಾಕಿದ್ದ ಸೂಚನಾ ಫಲಕ ಏನೆಂದು ಬರೆಯಲಾಗಿತ್ತು?

______________________________

೫. ಕುಡಿಯುವ ನೀರಿನ ಬಳಿ ಇದ್ದ ಫಲಕದಲ್ಲಿ ಏನೆಂದು ಬರೆದಿತ್ತು?

______________________________

**ಆ) ಕೆಳಗಿನ ಅಪೂರ್ಣ ಹೇಳಿಕೆಗಳ ಕೆಳಗೆ ನಾಲ್ಕು ಪರ್ಯಾಯ ಆಯ್ಕೆಗಳನ್ನು ಕೊಟ್ಟಿದೆ ಸೂಕ್ತವಾದ ಪದವನ್ನು ಆರಿಸಿ ಖಾಲಿ ಬಿಟ್ಟಿರುವ ಸ್ಥಳದಲ್ಲಿ ಬರೆದು ಹೇಳಿಕೆಯನ್ನು ಪೂರ್ಣಗೊಳಿಸಿ.**

೧. ನೀರನ್ನು ____________ ಬಳಸಿ.

ಅ. ಮಿತವಾಗಿ ಆ. ಹಿತವಾಗಿ ಇ. ಹೆಚ್ಚಾಗಿ ಈ. ಇಷ್ಟಬಂದಂತೆ

೨. ಹೂವನ್ನು ____________

ಅ. ಕಿತ್ತುಬಿಡಿ ಆ. ನೋಡಬೇಡಿ ಇ. ಕೀಳಬೇಡಿ ಈ. ಬಿಸಾಕಬೇಡಿ

## ಭಾಷಾಭ್ಯಾಸ

**ಅ) ಇವುಗಳನ್ನು ಕೂಡಿಸಿ ಬರೆಯಿರಿ:**

**ಮಾದರಿ:** ವಾರ್ಷಿಕ + ಉತ್ಸವ =ವಾರ್ಷಿಕೋತ್ಸವ

ಮಹಾ + ಆಲಯ = ಮಹಾಲಯ

೧. ಶೌಚ+ಆಲಯ = __________

೨. ಸ್ವಚ್ಛ+ಆಗಿ = __________

೩. ಶಾಲೆ+ಇಂದ = __________

೪. ಮಾಹಿತಿ+ಅನ್ನು = __________

೫. ಊರು + ಊರು = __________

©KTBS Not to be republished

**ಆ. ಕೆಳಗಿನ ಪದಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸಿ ಬರೆಯಿರಿ.**

೧. ಗಲಾಟೆ ಮಾಡು　　೨. ನುಗ್ಗು

೩. ಮಿತವಾಗಿ ಬಳಸು　　೪. ಸ್ವಚ್ಛವಾಗಿಟ್ಟುಕೊ

## ಭಾಷಾ ಚಟುವಟಿಕೆ

**ಅ) ಮಾದರಿಯಲ್ಲಿ ಸೂಚಿಸಿರುವಂತೆ ವಿವರಣೆಗಳಿಗೆ ಹೊಂದುವುದನ್ನು ಆವರಣದಲ್ಲಿ ಕೊಟ್ಟಿರುವ ಪದಗಳಿಂದ ಆರಿಸಿ ಬರೆಯಿರಿ.**

(ಅಭಯಾರಣ್ಯ, ಕೊಟ್ಟಿಗೆ, ಶಾಲೆ, ಗ್ರಂಥಾಲಯ)

**ಮಾದರಿ :** ದನಗಳನ್ನು ಕಟ್ಟುವ ಸ್ಥಳ – ಕೊಟ್ಟಿಗೆ

೧. ವಿದ್ಯಾರ್ಥಿಗಳು ಕಲಿಯಲು ಸೇರುವ ನಿಗದಿತ ಸ್ಥಳ – ____________

೨. ಪುಸ್ತಕಗಳನ್ನು ಸಂಗ್ರಹಿಸಿ ಇಟ್ಟಿರುವ ಸ್ಥಳ – ____________

೩. ವನ್ಯಜೀವಿಗಳನ್ನು ಸಂರಕ್ಷಿಸಿ ಇಟ್ಟಿರುವ ಪ್ರದೇಶ – ____________

೪. ದನಗಳನ್ನು ಕಟ್ಟುವ ಸ್ಥಳ – ____________

**ಆ) 'ಅ' ಪದದಲ್ಲಿರುವ ಗಾದೆಮಾತುಗಳಿಗೆ 'ಆ' ಪದದಲ್ಲಿರುವ ಅರ್ಥದೊಂದಿಗೆ ಹೊಂದಿಸಿ ಬರೆಯಿರಿ.**

| ಅ | ಆ |
|---|---|
| ೧. ಅಂಬಲಿ ಕುಡಿದರೂ ಇಂಬಾಗಿ ಕುಡಿ | ಅ. ತಿಳಿದೂ ಅಡ್ಡದಾರಿ ಹಿಡಿಯುವುದು |
| ೨. ಇರುಳು ಕಂಡ ಬಾವಿಯಲ್ಲಿ ಹಗಲು ಬಿದ್ದಂತೆ | ಆ. ಉಪಕಾರವನ್ನು ಸದಾ ಸ್ಮರಿಸು |
| ೩. ಎಲ್ಲರ ಮನೆ ದೋಸೆಯೂ ತೂತು | ಇ. ಇದ್ದುದನ್ನೇ ತೃಪ್ತಿಯಿಂದ ಅನುಭವಿಸು |
| | ಈ. ಕೊರತೆಗಳು ಎಲ್ಲರಿಗೂ ಸಾಮಾನ್ಯ |

©KTBS Not to be republished

ಇ) ಕೆಳಗಿನ ಭಿತ್ತಿ ಪತ್ರವನ್ನು ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಚಿತ್ತಾರ, ಹುಬ್ಬಳ್ಳಿ.
ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮ
ದಿನಾಂಕ : ೩ನೆಯ ಮಾರ್ಚ್ ೨೦೧೭
ಸ್ಥಳ : ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮೈದಾನ.
ಸುಸ್ವಾಗತ

೧. ಭಿತ್ತಿ ಪತ್ರದಲ್ಲಿರುವ ಮುಖ್ಯ ವಿಷಯ ಯಾವುದು?

೨. ಯಾವ ಕಾರಣಕ್ಕೆ ಭಿತ್ತಿ ಪತ್ರ ಅಂಟಿಸಿದ್ದಾರೆ?

೩. ಯಾವ ದಿನಾಂಕದಂದು ಕಾರ್ಯಕ್ರಮ ಜರುಗಲಿದೆ?

೪. ಯಾವ ಸ್ಥಳದಲ್ಲಿ ಕಾರ್ಯಕ್ರಮ ನಡೆಯುತ್ತದೆ?

ಈ) ದಿನನಿತ್ಯ ನೀವು ಕಾಣುವ ಸೂಚನಾ ಫಲಕಗಳನ್ನು ಓದಿ ಪಟ್ಟಿ ಮಾಡಿರಿ.

೧. ______________ ೨. ______________

೩. ______________ ೪. ______________

ಉ) ನಿಮ್ಮ ಶಾಲೆಯಲ್ಲಿ ನಡೆಯುವ ಸ್ವಾತಂತ್ರ್ಯೋತ್ಸವ ಸಮಾರಂಭಕ್ಕೆ ಸೂಕ್ತವಾದ ಭಿತ್ತಿ ಪತ್ರದ ಮಾದರಿಯನ್ನು ತಯಾರಿಸಿರಿ.

ಊ) ನಿಮ್ಮ ಶಾಲೆಯ ಕೈತೋಟವನ್ನು ಬೆಳೆಸುವ ಬಗ್ಗೆ ನೋಟ್ ಪುಸ್ತಕದಲ್ಲಿ ಏಳು–ಎಂಟು ವಾಕ್ಯಗಳಲ್ಲಿ ಬರೆಯಿರಿ.



©KTBS Not to be republished

# ವ್ಯಾಕರಣ

## ಸಂಧಿ

ಎರಡು ವರ್ಣಗಳು (ಅಕ್ಷರಗಳು) ಕಾಲವಿಳಂಬವಿಲ್ಲದಂತೆ ಅರ್ಥ ಕೆಡದಂತೆ ಸೇರುವುದೇ ಸಂಧಿ.

ಅ. ಸ್ವರದ ಮುಂದೆ ಸ್ವರ ಬಂದು ಹೀಗೆ ಸಂಧಿಯಾದರೆ ಸ್ವರಸಂಧಿ ಎನ್ನುತ್ತೇವೆ.

ಆ. ಸ್ವರದ ಮುಂದೆ ವ್ಯಂಜನ ಬಂದು ಅಥವಾ ವ್ಯಂಜನದ ಮುಂದೆ ವ್ಯಂಜನ ಬಂದು ಸಂಧಿಯಾದರೆ ವ್ಯಂಜನಸಂಧಿ ಎನ್ನುತ್ತೇವೆ.

ಇ. ಸಂಧಿಯಾಗುವಾಗ ಹಲಕೆಲವು ವ್ಯತ್ಯಾಸಗಳು ಆ ಸಂಧಿಸಿದ ಅಕ್ಷರಗಳಲ್ಲಿ ಉಂಟಾಗುವುವು. ಅವನ್ನೇ ಸಂಧಿಕಾರ್ಯಗಳು ಎನ್ನುತ್ತೇವೆ. ಅವುಗಳನ್ನು ಮುಂದಿನ ತರಗತಿಯಲ್ಲಿ ತಿಳಿಯೋಣ.

### ಕನ್ನಡ ಸಂಧಿಗಳ ನಕ್ಷೆ ನಿಮ್ಮ ಗಮನಕ್ಕೆ

**ಕನ್ನಡ ಸಂಧಿಗಳು**


- **ಸ್ವರ ಸಂಧಿ**
  - **ಲೋಪ ಸಂಧಿ** — ಸ್ವರ+ಸ್ವರ ಬಂದಾಗ ಅರ್ಥಕ್ಕೆ ಹಾನಿ ಯಾಗದಂತಿದ್ದಾಗ ಪೂರ್ವದಸ್ವರವು ಲೋಪವಾಗುವುದು.
  - **ಆಗಮ ಸಂಧಿ** — ಸ್ವರ+ಸ್ವರ ಬಂದಾಗ ಮಧ್ಯದಲ್ಲಿ ಸಾಮಾನ್ಯವಾಗಿ 'ವ'ಕಾರ ಅಥವಾ 'ಯ'ಕಾರ ಬರುವುದು.
- **ವ್ಯಂಜನ ಸಂಧಿ**
  - **ಆದೇಶ ಸಂಧಿ** — ಸ್ವರ+ವ್ಯಂಜನ, ವ್ಯಂಜನ+ವ್ಯಂಜನ ಬಂದಾಗ ಉತ್ತರಪದದ ಆದಿಯಲ್ಲಿರುವ
    1. ೧. ಕ ತ ಪಗಳಿಗೆ ಗ ದ ಬ ಗಳು ಆದೇಶವಾಗುವುದು.
    2. ೨. ಪ ಬ ಮ ಗಳಿಗೆ ವ ಕಾರ ಆದೇಶವಾಗುತ್ತದೆ.
    3. ೩. ಸ ಕಾರಕ್ಕೆ ಚ ಜ ಛ ಗಳು ಆದೇಶವಾಗುತ್ತದೆ.

©KTBS Not to be republished

# ೧. ಜಲಚಕ್ರ

– ಹ. ಮ. ಪೂಜಾರ

**ಪ್ರವೇಶ:** ಮನುಷ್ಯನ ಜೀವನಾವಶ್ಯಕವಾದ ವಸ್ತುಗಳನ್ನು ಪ್ರಕೃತಿ ಒಂದಲ್ಲಾ ಒಂದು ರೂಪದಲ್ಲಿ ನಿರಂತರವಾಗಿ ಒದಗಿಸುತ್ತಲೇ ಬಂದಿದೆ. ಜೀವ ಜಗತ್ತಿನ ಉಳಿವಿಗೆ ಕಾರಣವಾದ ನೀರನ್ನು ನೈಸರ್ಗಿಕ ಪ್ರಕ್ರಿಯೆಯಾದ 'ಜಲಚಕ್ರ'ದ ಮೂಲಕ ಪೂರೈಸುತ್ತಿರುವುದನ್ನು ಪ್ರಾಸಬದ್ಧವಾಗಿ ಹಿಡಿದಿಟ್ಟಿರುವುದನ್ನು ಈ ಪದ್ಯದಲ್ಲಿ ಕಾಣಬಹುದು.



©KTBS Not to be republished

ಕಡಲ ಜಲವು
ಕಾಯ್ದುಕಾಯ್ದು
ಆವಿಯಾಯಿತು

ಆವಿಯಾಗಿ
ಗಗನದೆಡೆಗೆ
ತೇಲಿಹೋಯಿತು

ಆವಿಯೆಲ್ಲ
ಒಂದುಗೂಡಿ
ಮೋಡವಾಯಿತು

ತಂಪುತಗಲಿ
ಮೋಡ ಕರಗಿ
ಮಳೆಯ ಸುರಿಸಿತು

ಇಳೆಗೆ ಇಳಿದ
ಮಳೆಯ ನೀರು
ಹಳ್ಳವಾಯಿತು

ಹಳ್ಳವೆಲ್ಲ
ಹರಿದುಬಂದು
ಹೊನಲ ಸೇರಿತು

ಹೊನಲ ನೀರು
ರಭಸದಿಂದ
ಕಡಲ ಸೇರಿತು

ಕಡಲ ನೀರು
ಮತ್ತೆಕಾಯ್ದು
ಆವಿಯಾಯಿತು

ಇನಿತು ಕಾರ್ಯ
ಮತ್ತೆಮತ್ತೆ
ಬಿಡದೆ ಸಾಗಿದೆ

ಜಲದ ಚಕ್ರ
ಇಳೆಯ ಮೇಲೆ
ನಿತ್ಯ ತಿರುಗಿದೆ.

**ಕೃತಿಕಾರರ ಪರಿಚಯ:**



ಶಿಕ್ಷಕರಾಗಿ ಸೇವೆಸಲ್ಲಿಸಿರುವ ಹ. ಮ. ಪೂಜಾರ ಅವರ ಪೂರ್ಣ ಹೆಸರು ಹನುಮಂತರಾಯ ಮನ್ನಪ್ಪ ಪೂಜಾರ. ಇವರು ಬಿಜಾಪುರ ಜಿಲ್ಲೆಯ ಸಿಂದಗಿಯಲ್ಲಿ ೧೩-೦೩-೧೯೪೭ರಲ್ಲಿ ಜನಿಸಿದರು. ಇವರು ಮಕ್ಕಳಿಗಾಗಿ 'ಪರಿಸರಕಾವ್ಯ', 'ನೀತಿಯ ಬದುಕು', 'ತುಂಟ ಮಂಗ' ಮುಂತಾದ ಪುಸ್ತಕಗಳನ್ನು ಬರೆದಿದ್ದಾರೆ.

ಪ್ರಸ್ತುತ ಪದ್ಯವನ್ನು ಹ. ಮ. ಪೂಜಾರ ಅವರ 'ಪರಿಸರ' ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.



©KTBS Not to be republished

## ಪದಗಳ ಅರ್ಥ

ಇಳೆ–ಭೂಮಿ; ಜಲ–ನೀರು;

ಕಡಲ–ಸಮುದ್ರ, ಸಾಗರ; ಹೊನಲು–ಪ್ರವಾಹ.

ಗಗನ–ಆಕಾಶ, ಬಾನು;

## ಅಭ್ಯಾಸ

**ಅ) ಕೆಳಗೆ ಕೊಟ್ಟಿರುವ ಪ್ರತಿಯೊಂದು ಪ್ರಶ್ನೆಗಳಿಗೂ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. 'ಜಲಚಕ್ರ'ದಲ್ಲಿ ಆವಿಯು ಹೇಗೆ ಆಗುತ್ತದೆ?

___

೨. ತಂಪಾದ ಮೋಡ ಕರಗಿ ಏನಾಯಿತು?

___

೩. ಹ.ಮ. ಪೂಜಾರ ತಿಳಿಸಿರುವಂತೆ ಬಿಡದೆ ನಿರಂತರವಾಗಿ ನಡೆಯುತ್ತಿರುವ ಪ್ರಕೃತಿ ಕಾರ್ಯ ಯಾವುದು?

___

೪. 'ಜಲಚಕ್ರ'ದಲ್ಲಿ ಯಾವುದು ಕಡಲನ್ನು ಸೇರುತ್ತದೆ?

___

**ಆ) 'ಜಲಚಕ್ರ' ಪದ್ಯವನ್ನು ಆಧರಿಸಿ ಖಾಲಿ ಬಿಟ್ಟಿರುವ ಸ್ಥಳವನ್ನು ಸೂಕ್ತ ಪದಗಳಿಂದ ಭರ್ತಿಮಾಡಿರಿ.**

೧ ಇಳೆಯ ಮೇಲೆ ನಿತ್ಯವೂ ತಿರುಗುತ್ತಿರುವುದು ------

೨. ಆವಿಯೆಲ್ಲ ಒಂದುಗೂಡಿ ಆಗುವುದು----------

೩. ಜಲಚಕ್ರ ಪದ್ಯದ ಆಕರ ಕೃತಿಯ ಹೆಸರು-------

೪. ಕಾಯ್ದುಕಾಯ್ದು ಆವಿಯಾಗಿ ಗಗನದೆಡೆಗೆ ಹೋದದ್ದು--------

೫. ಹ. ಮ. ಪೂಜಾರ ಅವರ ಪೂರ್ಣ ಹೆಸರು------------

©KTBS Not to be republished

# ೨. ಧೈರ್ಯಶಾಲಿ ಬಾಲಕ

– ಸಂಗ್ರಹ

**ಪ್ರವೇಶ:** ಆಕಸ್ಮಿಕವಾಗಿ ಸಂಭವಿಸಿದ ದುರ್ಘಟನೆಯಿಂದ ಅಧೀರನಾಗದೆ ಸಮಯ ಪ್ರಜ್ಞೆಯನ್ನು ಮೆರೆದು, ಧೈರ್ಯ ಹಾಗೂ ಸಾಹಸದಿಂದ ತನ್ನ ಸಹಪಾಠಿಗಳ ಜೀವವನ್ನು ಉಳಿಸಿದ ಧೀರ ಬಾಲಕನೊಬ್ಬನ ಜೀವನದಲ್ಲಿ ನಡೆದ ನೈಜ ಘಟನೆಯನ್ನು ನಾವಿಲ್ಲಿ ಕಾಣಬಹುದು.




ಉತ್ತರ ಪ್ರದೇಶದ ಹನ್ನೊಂದು ವರ್ಷದ ಓಂಪ್ರಕಾಶ್ ಯಾದವ್ ಎಂಬ ಬಾಲಕ ಸೆಪ್ಟೆಂಬರ್ ನಾಲ್ಕನೇ ತಾರೀಖು ೨೦೧೦ನೆಯ ಇಸವಿಯಂದು ತನ್ನ ಗೆಳೆಯರ ಜೊತೆ ವ್ಯಾನಿನಲ್ಲಿ ಶಾಲೆಗೆ ಹೋಗುತ್ತಿದ್ದ. ಇದ್ದಕ್ಕಿದ್ದಂತೆ ವ್ಯಾನಿನ ಗ್ಯಾಸ್‌ಕಿಟ್‌ನಲ್ಲಿ ಶಾರ್ಟ್ ಸರ್ಕ್ಯೂಟ್ ಆಗಿ ಬೆಂಕಿ ಹೊತ್ತಿಕೊಂಡು ಇಡೀ ವ್ಯಾನಿಗೆ ವ್ಯಾಪಿಸಿತು. ವ್ಯಾನ್ ಚಾಲಕ ತಕ್ಷಣವೇ ತನ್ನ ಬಳಿ ಇದ್ದ ಬಾಗಿಲು ತೆರೆದು ಓಡಿಹೋದನು. ಅವನ ಪಕ್ಕದಲ್ಲೇ ಇದ್ದ ಓಂಪ್ರಕಾಶ್ ಯಾದವ್ ಓಡಿಹೋಗಲಿಲ್ಲ. ವ್ಯಾನಿನ ಹಿಂಭಾಗದಲ್ಲಿದ್ದ ಮಕ್ಕಳಿಗೆ ಹೊರಬರಲಾಗದೇ ವ್ಯಾನ್ ಡೋರ್ ಲಾಕ್ ಆಗಿತ್ತು. ಎಲ್ಲ ಮಕ್ಕಳೂ ಜೋರಾಗಿ ಅಳುತ್ತ, ಕೂಗುತ್ತ, ಹೊರಗೆ ಹೋಗಲಾರದೆ ಒದ್ದಾಡತೊಡಗಿದರು. ಬೆಂಕಿಯ ಜ್ವಾಲೆ ಜೋರಾಗುತ್ತಲಿತ್ತು. ಪ್ರಕಾಶ್ ತಕ್ಷಣವೇ ಹಿಂಭಾಗದ ವ್ಯಾನ್ ಡೋರ್ ಒಡೆದು ತೆರೆದನು. ತನ್ನ ಮೈಗೂ ಹತ್ತಿದ್ದ ಬೆಂಕಿಯ ಜ್ವಾಲೆಯನ್ನೂ ಲೆಕ್ಕಿಸದೆ ಒಬ್ಬೊಬ್ಬರನ್ನಾಗಿ ಹೊರಗೆ ಎಳೆದುಕೊಂಡು ತನ್ನ ಗೆಳೆಯರನ್ನು ಬದುಕಿಸಿದನು.

ಹನ್ನೊಂದು ವರ್ಷ ವಯಸ್ಸಿನ ಪ್ರಕಾಶ್ ಯಾದವ್ ಎಂಟು ಮಕ್ಕಳ ಜೀವ ಉಳಿಸಿದ್ದನು. ಇದು ಸತ್ಯ ಘಟನೆ. ಅವನಿಗೆ ಉತ್ತರ ಪ್ರದೇಶ ಸರ್ಕಾರ ಸಂಜಯ್ ಛೋಪ್ರಾ ಪ್ರಶಸ್ತಿ ನೀಡಿ ಗೌರವಿಸಿತು.

©KTBS Not to be republished

## ಅಭ್ಯಾಸ

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಓಂಪ್ರಕಾಶ್ ಯಾದವ್ ತನ್ನ ಗೆಳೆಯರ ಜೊತೆ ಎಲ್ಲಿಗೆ ಹೋಗುತ್ತಿದ್ದನು?

______________________________

೨. ಓಂ ಪ್ರಕಾಶ್ ಯಾದವ್ ಹೋಗುತ್ತಿದ್ದ ವ್ಯಾನಿಗೆ ಬೆಂಕಿ ಹೊತ್ತಿಕೊಂಡಿದ್ದು ಏಕೆ?

______________________________

೩. ವ್ಯಾನಿನ ಹಿಂಭಾಗದಲ್ಲಿದ್ದ ಮಕ್ಕಳಿಗೆ ಏಕೆ ತಕ್ಷಣ ಹೊರಬರಲಾಗಲಿಲ್ಲ?

______________________________

೪. ಓಂಪ್ರಕಾಶ್ ಯಾದವ್ ಎಷ್ಟು ಮಕ್ಕಳ ಪ್ರಾಣ ಉಳಿಸಿದನು?

______________________________

೫. ಸಾಹಸಿ ಓಂಪ್ರಕಾಶ್ ಯಾದವ್ ಎಷ್ಟು ವರ್ಷದ ಬಾಲಕನಾಗಿದ್ದನು?

______________________________

೬. ಚಾಲಕನಂತೆಯೇ ಓಂಪ್ರಕಾಶ್ ಯಾದವ್ ಏಕೆ ಓಡಿ ಹೋಗಲಿಲ್ಲ?

______________________________

## ಚಟುವಟಿಕೆ

ಅ) ಪರೋಪಕಾರ, ಸಮಯಪ್ರಜ್ಞೆ ಮತ್ತು ಧೈರ್ಯದಿಂದ ಕೂಡಿದ ನೈಜ ಘಟನೆಗಳ ಬಗ್ಗೆ ನಿಮ್ಮ ಉಪಾಧ್ಯಾಯರಿಂದ ಕೇಳಿ ತಿಳಿಯಿರಿ.

ಆ) ನೀವು ಮರೆಯಲಾಗದ ಯಾವುದಾದರೂ ಒಂದು ಘಟನೆಯನ್ನು ಕುರಿತು ಐದಾರು ವಾಕ್ಯಗಳಲ್ಲಿ ಬರೆಯಿರಿ.

©KTBS Not to be republished

# ೩. ಭಾರತ ದೇಶದ ಹಕ್ಕಿ

ಮೂಲ – ಜಲಾಲುದ್ದೀನ್‌ರೂಮಿ

ಅನುವಾದ – ಪ್ರೊ.ಬಿ. ಗಂಗಾಧರಮೂರ್ತಿ

**ಪ್ರವೇಶ:** ಮಧ್ಯ ಏಷಿಯಾದ ದೇಶಗಳಲ್ಲಿ ಹುಟ್ಟಿದ್ದು ಸೂಫಿ ಪಂಥ. ಇದು ಭಾಷೆ, ಧರ್ಮ, ಜಾತಿಗಳ ಗಡಿಯನ್ನು ಮೀರಿದ ವಿಶ್ವಮಾನವ ತತ್ವ ಹೊಂದಿದೆ. ಮೊದಲಿನಿಂದಲೂ ಇರಾನ್ ಹಾಗೂ ಅರಬ್ ದೇಶದ ವ್ಯಾಪಾರಿಗಳು, ಕವಿಗಳು ಮತ್ತು ಸಂತರು ಭಾರತ ದೇಶದ ಜೊತೆಗೆ ಸಂಬಂಧ ಹೊಂದಿದ್ದರು. ಸೂಫಿಪಂಥದ ಅನೇಕ ಕತೆಗಳು ಭಾರತದ ಕಥಾಲೋಕದಲ್ಲಿ ಸೇರಿವೆ. ಅಂತಹುದೇ ಒಂದು ಸುಂದರ ಕತೆ ಜಲಾಲುದ್ದೀನ್ ರೂಮಿಯ 'ಭಾರತ ದೇಶದ ಹಕ್ಕಿ'.



ವ್ಯಾಪಾರಿಯೊಬ್ಬನು ಭಾರತ ದೇಶದ ಹಕ್ಕಿಯೊಂದನ್ನು ಸಾಕಿದ್ದನು. ಅದನ್ನು ಅವನು ಸದಾ ಪಂಜರದೊಳಗಿಡುತ್ತಿದ್ದನು. ಒಮ್ಮೆ ಆ ವ್ಯಾಪಾರಿಯು ಭಾರತ ದೇಶದ ಪ್ರವಾಸ ಕೈಗೊಳ್ಳಬೇಕಾಗಿ ಬಂತು. ಪಂಜರದೊಳಗೆ ಬಂಧಿಯಾಗಿದ್ದ ಹಕ್ಕಿಯು ತಾಯ್ನಾಡಿನಿಂದ ತನಗಿಷ್ಟವಾದ ಏನನ್ನಾದರೂ ಬಯಸಬಹುದೇ ಎಂಬುದನ್ನು ತಿಳಿದುಕೊಳ್ಳಲು ಇಚ್ಛಿಸಿದನು. ಹಾಗೇನಾದರೂ ಅದು ಬಯಸುವುದಾದರೆ ತಂದು ಕೊಡುವುದಾಗಿಯೂ ಹಕ್ಕಿಗೆ ಹೇಳಿದನು. ಸರಳುಗಳ ಗೂಡಿಂದ ಸದಾ ಬಿಡುಗಡೆಗಾಗಿ ಚಡಪಡಿಸುತ್ತಿದ್ದ ಹಕ್ಕಿಗೆ ಬೇರಾವುದರ ಮೇಲೂ ಮನಸ್ಸಿರಲಿಲ್ಲ. ಹಾಗೆಯೇ ಅದನ್ನು ಬಿಡುಗಡೆ ಮಾಡಿ ಸ್ವಾತಂತ್ರ್ಯ ನೀಡಬೇಕೆಂಬ ಮನಸ್ಸು ವ್ಯಾಪಾರಿಗೂ ಇರಲಿಲ್ಲ.

"ಅಯ್ಯಾ, ನೀನು ಭಾರತ ದೇಶಕ್ಕೆ ಹೋಗುತ್ತಿರುವೆ. ಪ್ರವಾಸ ಕಾಲದಲ್ಲಿ ಯಾವುದಾದರೊಂದು ಅರಣ್ಯ ಪ್ರದೇಶಕ್ಕೆ ಹೋಗು. ಮುಕ್ತ ವಾತಾವರಣದಲ್ಲಿ ಜೀವಿಸುತ್ತಿರುವ ಅಲ್ಲಿನ ಹಕ್ಕಿಗಳಿಗೆ ನನ್ನ ದುಃಸ್ಥಿತಿಯ ಕತೆಯನ್ನು ತಿಳಿಸಿ ಹೇಳು. ಅಷ್ಟೇ ಸಾಕು" ಎಂದು ಹಕ್ಕಿಯು ಅವನನ್ನು ಕೇಳಿಕೊಂಡಿತು.

ವ್ಯಾಪಾರಿಯು ಹಕ್ಕಿಯ ಕೋರಿಕೆಯಂತೆ ಅರಣ್ಯವನ್ನು ಪ್ರವೇಶಿಸಿ ಅಲ್ಲಿನ ಪಕ್ಷಿ ಸಮೂಹಕ್ಕೆ ಅದರ ಕತೆಯನ್ನು ಹೇಳಿದ. ಕತೆಯನ್ನು ಕೇಳುತ್ತಿದ್ದಂತೆಯೇ ಮರದ ಮೇಲಿದ್ದ ಒಂದು ಹಕ್ಕಿಯು ಕಳಚಿಕೊಂಡು ತೊಪ್ಪನೆ ಕೆಳಗೆ ಬಿದ್ದಿತು. ದೂರದ ದೇಶದಲ್ಲಿ ಬಂಧಿತವಾಗಿ ಕೊಳೆಯುತ್ತಿರುವ ಹಕ್ಕಿಯ ಸಂಬಂಧಿಕ ಹಕ್ಕಿಯು ಇದಾಗಿರಬಹುದು, ಆ ಕಾರಣದಿಂದಲೇ ಈ ಹಕ್ಕಿಯ ಪ್ರಾಣವು ಹಾರಿ ಹೋಗಿರಬಹುದೆಂದು ವ್ಯಾಪಾರಿಯು ಊಹಿಸಿಕೊಂಡನು.

ಪ್ರವಾಸ ಮುಗಿದ ನಂತರ ಅವನು ಸ್ವದೇಶಕ್ಕೆ ವಾಪಸ್ಸಾದನು. ತಾಯ್ನಾಡಿನಿಂದ ತಂದಿರುವ ಶುಭವಾರ್ತೆ ಏನಾದರೂ ಇದೆಯೇ ಎಂದು ಹಕ್ಕಿಯು ಅವನನ್ನು ವಿಚಾರಿಸಿತು. "ಸಮಾಚಾರವೇನೋ ಇದೆ. ಆದರೆ ಅದನ್ನು ಶುಭವಾರ್ತೆ ಎಂದು ಹೇಳಲಾರೆ. ನಿನ್ನ ಕತೆಯನ್ನು ಕೇಳಿದ ಮರುಕ್ಷಣವೇ

©KTBS Not to be republished

ಹಕ್ಕಿಯೊಂದು ಮರದಿಂದ ಕೆಳಗುರುಳಿ ಪ್ರಾಣ ಕಳೆದುಕೊಂಡಿತು. ಬಹುಶಃ ಅದು ನಿನ್ನ ಸಂಬಂಧಿಕನಿರಬಹುದು" ಎಂದು ವ್ಯಾಪಾರಿಯು ಹೇಳಿದನು.

ಆ ವಾರ್ತೆಯನ್ನು ಕೇಳುತ್ತಿದ್ದಂತೆಯೇ ಹಕ್ಕಿಯು ಹಿಡಿಸೊಪ್ಪಿನಂತಾಗಿ ಪಂಜರದೊಳಗೆ ಕುಸಿದು ಬಿತ್ತು. ತನ್ನ ಸಂಬಂಧಿಕ ಹಕ್ಕಿಯ ಅಕಾಲಿಕ ಮರಣ ವಾರ್ತೆಯನ್ನು ಕೇಳಿ ಈ ಹಕ್ಕಿಯ ಪ್ರಾಣ ಹಾರಿ ಹೋಯಿತಲ್ಲಾ ಎಂದು ಅವನು ಖೇದಗೊಂಡನು. ಅದನ್ನು ಅಲ್ಲಿಂದ ಎತ್ತಿ ಕಿಟಕಿಯ ಹೊರಗಿನ ಮೇಜುಕಟ್ಟಿನ ಮೇಲಿರಿಸಿದನು. ಕೂಡಲೇ ಹಕ್ಕಿಯು ಪಟಪಟನೆ ಗರಿಬಿಚ್ಚಿ ಸಮೀಪದಲ್ಲಿದ್ದ ಮರದತ್ತ ಹಾರಿತು.

ಮರದ ಮೇಲೆ ಕುಳಿತು ವ್ಯಾಪಾರಿಗೆ ಹೀಗೆ ಹೇಳಿತು: "ಅಶುಭ ಎಂದು ನೀನು ಭಾವಿಸಿದ ವಾರ್ತೆಯು ನನಗೆ ಶುಭವಾರ್ತೆಯಾಗಿತ್ತು. ಆಪತ್ಕಾಲದಲ್ಲಿ ಜೀವ ರಕ್ಷಿಸಿಕೊಳ್ಳುವ ಉಪಾಯ ಯಾವುದು ಎಂಬ ರಹಸ್ಯವು ಆ ವಾರ್ತೆಯಲ್ಲಿ ಅಡಗಿತ್ತು. ನೀನು ನನ್ನನ್ನು ಬಂಧನದಲ್ಲಿಟ್ಟುಕೊಂಡಿದ್ದವನು. ಆ ಹಕ್ಕಿಯು ನನ್ನ ಬಿಡುಗಡೆಯ ನಿಗೂಢ ಸಂದೇಶವನ್ನು ನಿನ್ನ ಮೂಲಕವೇ ತಲುಪಿಸಿತು!"

ಬಂಧಮುಕ್ತವಾದ ಹಕ್ಕಿಯು ಹೀಗೆ ಹೇಳಿ ಮರದಿಂದ ಮೇಲಕ್ಕೆ ಹಾರುತ್ತಾ ವಿಶಾಲ ನೀಲಾಂಬರವನ್ನು ಸೇರಿತು.

**ಕೃತಿಕಾರರ ಪರಿಚಯ**

ಜಲಾಲುದ್ದೀನ್ ರೂಮಿ ಹದಿಮೂರನೆಯ ಶತಮಾನದಲ್ಲಿ ಇದ್ದ ಸೂಫಿ ಸಂತ. ಅವರ ಮೂಲ ಸ್ಥಳ ಅಫಘಾನಿಸ್ತಾನದ ಬಲ್ಖ್. ದಾರ್ಶನಿಕನಾಗಿದ್ದ ತಂದೆಯ ಪ್ರಭಾವ ಅವರ ಮೇಲೆ ಬಹಳವಾಗಿತ್ತು. ಸೂಫಿ ತತ್ವಗಳನ್ನು ಹೇಳುವ ಅನೇಕ ಕವಿತೆಗಳನ್ನು ರೂಮಿ ಬರೆದಿದ್ದಾರೆ. ಅವರ ಸಣ್ಣ ಕತೆಯೊಂದನ್ನು ಇಲ್ಲಿ ಆರಿಸಿ ಕೊಡಲಾಗಿದೆ. ಪ್ರೊ.ಬಿ. ಗಂಗಾಧರಮೂರ್ತಿ ಗೌರಿಬಿದನೂರಿನ ನ್ಯಾಷನಲ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದವರು. ಜಲಾಲುದ್ದೀನ್ ರೂಮಿಯವರ ಈ ಕತೆಯನ್ನು ಬಿ. ಗಂಗಾಧರಮೂರ್ತಿ ಇವರು ಅನುವಾದಿಸಿರುವ 'ಸೂಫಿ ಕಥಾಲೋಕ' ಕೃತಿಯಿಂದ ಆರಿಸಲಾಗಿದೆ.

©KTBS Not to be republished

## ಅಭ್ಯಾಸ

**ಅ. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ವ್ಯಾಪಾರಿಯು ಯಾವ ದೇಶದ ಹಕ್ಕಿಯನ್ನು ಸಾಕಿದ್ದನು?

________________________________

೨. ಅರಣ್ಯದಲ್ಲಿದ್ದ ಹಕ್ಕಿಯು ವ್ಯಾಪಾರಿ ಹೇಳಿದ ಕಥೆಯನ್ನು ಕೇಳಿ ಏನು ಮಾಡಿತು?

________________________________

೩. ಬಂಧಮುಕ್ತವಾದ ಹಕ್ಕಿ ಏನು ಮಾಡಿತು?

________________________________

## ಚಟುವಟಿಕೆ

**ಅ. ಈಸೋಪನ ನೀತಿಕತೆಗಳನ್ನು ಓದಿ ತಿಳಿಯಿರಿ.**

# ೩. ಬಲಶಾಲಿ ಯಾರು?

– ಬೇದ್ರೆ ಎನ್. ಮಂಜುನಾಥ

**ಪ್ರವೇಶ:** ‘ಉಪಾಯ ಬಲ್ಲವನಿಗೆ ಅಪಾಯವಿಲ್ಲ’– ಎಂಬುದೊಂದು ನಾಣ್ಣುಡಿ. ‘ಅಪಾಯದ ಅರಿವಿನ ಜತೆಗೆ ಉಪಾಯವೂ ಇದ್ದರೆ ಸಾಧನೆ ಮಾಡುವುದರಲ್ಲಿ ಸಂದೇಶವಿಲ್ಲ’; ಸಮಯೋಚಿತ ಪ್ರಜ್ಞೆಯುಳ್ಳವನು ಎಂತಹ ಅಪಾಯದಿಂದಲೂ ಪಾರಾಗಬಹುದೆಂಬ ಸಂದೇಶವನ್ನು ರಾಹುಲೋವಿಚ್‌ನ ಕತೆ ಹೇಳುತ್ತದೆ.

ಒಂದಾನೊಂದು ಊರಿನಲ್ಲಿ ಒಬ್ಬ ಕಟ್ಟಿಗೆ ಮಾರುವವ ಇದ್ದನು. ಅವನ ಹೆಸರು ರಾಹುಲೋವಿಚ್ ಅಂತ. ತುಂಬ ಬುದ್ಧಿವಂತ. ಕಷ್ಟಜೀವಿ ಆತ. ನಿತ್ಯವೂ ಪಕ್ಕದ ಕಾಡಿಗೆ ಹೋಗಿ, ಒಣಗಿದ ಮರವನ್ನು ಹುಡುಕಿ, ಕಟ್ಟಿಗೆ ಕಡಿದು ತಂದು ಊರಿನಲ್ಲಿ ಮಾರಿ ಬರುವ ದುಡ್ಡಿನಿಂದ ತನ್ನ ಕುಟುಂಬಕ್ಕೆ ಬೇಕಾದ ಹಿಟ್ಟು, ತರಕಾರಿ, ಬ್ರೆಡ್ಡುಗಳನ್ನು ತೆಗೆದುಕೊಂಡು ಹೋಗುತ್ತಿದ್ದನು. ಊರಿನ ಜನರಿಗೆ ಕಷ್ಟದಲ್ಲಿ ಸಹಾಯ ಮಾಡುತ್ತಿದ್ದನು. ಜನ ಇವನನ್ನು ಬಹಳ ಇಷ್ಟ ಪಡ್ತಾ ಇದ್ರು.

ಒಂದು ದಿನ ರಾಹುಲೋವಿಚ್ ಕಾಡಿನಲ್ಲಿ ಕಟ್ಟಿಗೆ ಕಡಿಯುತ್ತಿದ್ದಾಗ ಸುಸ್ತಾಯ್ತು. ಒಣಗಿದ ಮರವೊಂದನ್ನು ಬೊಡ್ಡೆಯವರೆಗೆ ಕಡಿದಿದ್ದನು. ಅದರ ಹತ್ತಿರವೇ ತನ್ನ ಚೂಪಾದ ಕೊಡಲಿಯನ್ನು ಬಿಟ್ಟು ಅಲ್ಲಿಯೇ ಕುಳಿತು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದನು. ಅದೇ ಸಮಯಕ್ಕೆ ಆ ಕಾಡಿನಲ್ಲಿದ್ದ ದೊಡ್ಡ ಕರಡಿಯೊಂದು ಅತ್ತ ಬರುತ್ತಿತ್ತು. ದೇಹಕ್ಕೆ ತಕ್ಕಂತೆ ಗತ್ತು, ದೌಲತ್ತು ಅದಕ್ಕೆ. ಒಳ್ಳೇ ರಾಜಠೀವಿಯಿಂದ ಎದೆ ಉಬ್ಬಿಸಿಕೊಂಡು ಬಂದು ರಾಹುಲೋವಿಚ್‌ನನ್ನು ಕುರಿತು “ಏಯ್! ಯಾರೋ ಅದು! ನಂಜೊತೆ ಕುಸ್ತಿಗೆ ಬಂದ್ರೆ ಸರಿ, ಇಲ್ಲಾಂದ್ರೆ ಕತ್ತು ಹಿಸುಕಿ ಸಾಯಿಸಿಬಿಡ್ತೇನೆ ನೋಡು” ಅಂತ ಗರ್ವದಿಂದ ಅರಚಿತು.

ರಾಹುಲೋವಿಚ್‌ನಿಗೆ ಆ ಬೃಹತ್ ಪ್ರಾಣಿಯನ್ನು ನೋಡಿ ಹೃದಯವೇ ಬಾಯಿಗೆ ಬಂದಂತಾಯ್ತು. ‘ಅಬ್ಬಾ! ಎಂಥ ದೊಡ್ಡ ದೇಹ! ಇದರೊಂದಿಗೆ ಕುಸ್ತಿ ಮಾಡೋದು ಅಸಾಧ್ಯ. ಇದರ ಕೈಯಲ್ಲೇನಾದ್ರೂ ಸಿಕ್ರೆ ಮುಗಿದೇಹೋಯ್ತು! ಮೈ ಮೂಳೆಗಳೆಲ್ಲಾ ಪುಡಿಪುಡಿಯಾಗುತ್ತೆ’ ಅಂತ ಯೋಚಿಸಿ, ತಕ್ಷಣವೇ ಒಂದು ಉಪಾಯ ಮಾಡಿ, “ನಾನ್ಯಾಕೆ ನಿನ್ನ ಜೊತೆ ಕುಸ್ತಿ ಮಾಡ್ಲಿ? ನೀನು ನನಗಿಂತ ಬಲಶಾಲಿಯೇ ಹೇಗೆ ಅಂತ ಗೊತ್ತಾದ್ರೆ ಮಾತ್ರ ನಾನು ಕುಸ್ತಿ ಮಾಡೋಕೆ ಬರ್ತೀನಿ. ಅದಕ್ಕಿಂತ ಮೊದಲಿಗೆ ನಿನಗೆ ಎಷ್ಟು ಶಕ್ತಿ ಇದೆ ನನಗೆ ಗೊತ್ತಾಗಬೇಕು, ಅಲ್ವಾ?” ಅಂದನು.

“ಹೌದಲ್ಲ? ಹೇಗೆ ತೋರಿಸೋದು? ಏನು ಮಾಡಿದ್ರೆ ನಿಂಗೆ ನಂಬಿಕೆ ಬರುತ್ತೆ? ಅಂತ” ಕರಡಿ ಕೇಳಿತು.

©KTBS Not to be republished

ಇದೇ ಸರಿಯಾದ ಸಮಯ ಅಂತ ಯೋಚಿಸಿ ಅಲ್ಲೇ ಇದ್ದ ಅರ್ಧ ಸೀಳಿದ ಮರದ ಬೊಡ್ಡೆಯಲ್ಲಿ ಉದ್ದಕ್ಕೆ ಒಂದು ಸೀಳು ಮಾಡಿದನು. ಅದಕ್ಕೊಂದು ದೊಡ್ಡ ಬೆಣೆ ಸಿಕ್ಕಿಸಿದನು. "ಕೊರಕಲಿನಲ್ಲಿ ಬೆಣೆ ಬಿಗಿಯಾಗಿ ಕೂತಿತು. ಕರಡಿಯತ್ತ ತಿರುಗಿ, ಅಯ್ಯ ಬಲಶಾಲಿ ಜಾಂಬವನೇ, ಈ ಸೀಳಿನಲ್ಲಿ ಸಿಕ್ಕಿಕೊಂಡಿರುವ ಬೆಣೆಯನ್ನು ನೀನು ಎಳೆದು ತೆಗೆದದ್ದೇ ಆದರೆ ನಿನಗೆ ತುಂಬಾ ಶಕ್ತಿ ಇದೆ ಅಂತಾ ಗೊತ್ತಾ ಗುತ್ತೆ. ಆಗ ಇಬ್ಬರೂ ಕುಸ್ತಿ ಮಾಡಬಹುದು. ಆಗಬಹುದಾ?" ಎಂದು ಹೇಳಿದನು.

ಕರಡಿ ಹಿಂದುಮುಂದು ನೋಡದೆ ಬೆಣೆಯನ್ನು ಹಿಡಿದು ಜಗ್ಗಲು ಶುರುಮಾಡಿತು. ಎಷ್ಟು ಎಳೆದರೂ ಬೆಣೆ ಜಗ್ಗಲಿಲ್ಲ. ಅಷ್ಟೊಂದು ಬಲವಾಗಿ ಆತ ಅದನ್ನು ಸಿಕ್ಕಿಸಿಬಿಟ್ಟಿದ್ದ! ಕರಡಿ ಪ್ರಯತ್ನ ಬಿಡಲಿಲ್ಲ. ಸೀಳಿನಲ್ಲಿ ತನ್ನ ಕೈ ತೂರಿ, ಎರಡೂ ಕೈಗಳಿಂದ ಅದನ್ನು ಅಗಲ ಮಾಡಿ ಬೆಣೆ ತೆಗೆಯುವ ಪ್ರಯತ್ನವೂ ಆಯ್ತು.



ಈ ಎಳೆದಾಟದಲ್ಲಿ ಬೆಣೆ ಛಂಗನೆ ಹಾರಿ ದೂರ ಬಿತ್ತು. ಕರಡಿ ಕೈ ಹಿಂದೆ ಎಳೆದುಕೊಳ್ಳುವಷ್ಟರಲ್ಲಿ ಬಿರುಕು ಮುಚ್ಚಿಬಿಟ್ಟು ಕರಡಿಯ ಒಂದು ಕೈ ಅದರಲ್ಲಿ ಸಿಕ್ಕಿಕೊಂಡುಬಿಟ್ಟಿತು. ನೋವಿನಿಂದ ಆ ಕರಡಿ ಕಿರುಚಿತು. ನಿಂತಲ್ಲೇ ತಕತಕ ಕುಣಿಯಿತು. ಕೈ ಬಿಡಿಸಿಕೊಳ್ಳಲು ಅದು ಶತಪ್ರಯತ್ನ ಮಾಡಿತು. ಸಾಧ್ಯವಾಗಲೇ ಇಲ್ಲ. ನೋವು ಹೆಚ್ಚಾದಂತೆ ಕಿರುಚುವಿಕೆಯೂ ಜಾಸ್ತಿಯಾಯ್ತು!

"ಆಹಾ! ಈಗ ನೀನು ನನ್ನ ಜೊತೆ ಕುಸ್ತಿ ಮಾಡ್ಲಿಕ್ಕೆ ತಕ್ಕಷ್ಟು ಶಕ್ತಿ ಇರುವವ ಅಂತ ನಂಬಿಕೆ ಆಯ್ತು. ಬರ್ತೀಯಾ ಕುಸ್ತಿ ಶುರು ಮಾಡೋಣ" ಅಂತ ರಾಹುಲೋವಿಚ್ ಆಹ್ವಾನಿಸಿದನು.

©KTBS Not to be republished

"ಇಲ್ಲಪ್ಪಾ, ಇಲ್ಲ. ಸಾಧ್ಯವೇ ಇಲ್ಲ. ನನ್ನ ಕೈಯನ್ನೇ ಬಿಡಿಸಿಕೊಳ್ಳಲಿಕ್ಕೆ ಆಗದೆ ಒದ್ದಾಡ್ತಾ ಇರೋದು ಕಾಣಿಸ್ತಿಲ್ವೇ? ಇನ್ನು ನಿನ್ನ ಹತ್ರ ಹೇಗೆ ಕುಸ್ತಿ ಮಾಡ್ಲಿ? ಹೇಗಾದ್ರೂ ಮಾಡಿ ನನ್ನನ್ನು ಕಾಪಾಡೋ ಮಾರಾಯ, ದಮ್ಮಯ್ಯ" ಅಂತ ಅಂಗಲಾಚಿ ಬೇಡಿತು ಕರಡಿ.

"ಅದೂ ಸರಿ ಅನ್ನು. ಬರೀ ದೇಹವನ್ನು ಮಾತ್ರ ಬೆಟ್ಟದಂತೆ ಬೆಳೆಸಿದರೆ ಲಾಭ ಇಲ್ಲ. ಬುದ್ಧಿಯನ್ನೂ ಬೆಳೆಸಬೇಕು, ಗೊತ್ತಾಯ್ತಾ? ನೀನು ಇನ್ಮುಂದೆ ಕಂಡಕಂಡವರ ಹತ್ತಿರ ಕುಸ್ತಿ ಮಾಡೋಕೆ ಹೋಗೊಲ್ಲ ಅಂತ ಮಾತುಕೊಟ್ಟರೆ ನಿನ್ನನ್ನು ಪಾರು ಮಾಡ್ತೀನಿ ಆಗಬಹುದಾ?" ಅಂತ ಕೇಳಿದ ರಾಹುಲೋವಿಚ್.

"ನೀನು ಹೇಳಿದಂತೆಯೇ ಆಗ್ಲಿ ಮಾರಾಯ. ಮೊದಲು ನನ್ನ ಕೈಯನ್ನು ಬಿಡಿಸಿಬಿಡು. ಇನ್ನೆಂದೂ ಈ ಮನುಷ್ಯರ ಸಹವಾಸಕ್ಕೆ ಬರೋದೇ ಇಲ್ಲ. ಪ್ರಮಾಣವಾಗಲೂ" ಅಂತ ಕರಡಿ ಗೋಗರೆಯಿತು.

ಸರಿ ಅಂತ ಹೇಳಿ ರಾಹುಲೋವಿಚ್ ಆ ಬೆಣೆಯನ್ನು ಮತ್ತೆ ಸೀಳಿನ ಇನ್ನೊಂದು ಬದಿ ಇಟ್ಟು ಬಲವಾಗಿ ಹೊಡೆದನು. ಕೊರಕಲು ದೊಡ್ಡದಾಯ್ತು. ಕರಡಿಯು ಸರಕ್ಕನೇ ತನ್ನ ಕೈಯನ್ನು ಹಿಂದಕ್ಕೆಳೆದುಕೊಂಡು ಸತ್ತೆನೋ ಕೆಟ್ಟೆನೋ ಅಂತ ಗಾಬರಿ ಬಿದ್ದು ಅಲ್ಲಿಂದ ಫೇರಿ ಕಿತ್ತಿತು. ಅಂದಿನಿಂದ ಇಂದಿನವರೆಗೂ ಅದು ಮನುಷ್ಯರ ಜೊತೆ ನಿಂತು ಕುಸ್ತಿ ಮಾಡೋಕೆ ಅಂಜುತ್ತೆ, ತಲೆ ಬಗ್ಗಿಸಿಕೊಂಡೇ ಓಡಾಡುತ್ತೆ. ನೋಡಿ ಬೇಕಾದ್ರೆ!

**ಕೃತಿಕಾರರ ಪರಿಚಯ:**



ಬೇದ್ರೆ ಎನ್. ಮಂಜುನಾಥ ಮೂಲತಃ ಶಿವಮೊಗ್ಗದವರು. ಹುಟ್ಟಿದ್ದು ೧೦. ೦೬. ೧೯೬೭ರಲ್ಲಿ. ಮಕ್ಕಳ ಸಾಹಿತ್ಯಕ್ಷೇತ್ರದಲ್ಲಿ ವಿಶೇಷ ಆಸಕ್ತಿ ಹೊಂದಿರುವ ಇವರು ಹಲವು ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ಜನಪದ ಹಾಗೂ ಮಕ್ಕಳ ಕಥೆಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. 'ಅಡ್ವೆಂಚರ್', 'ಸರ್ವರಿಗೂ ಸಮಪಾಲು', 'ಜನಪ್ರಿಯ ರಷ್ಯನ್ ಜಾನಪದ ಕಥೆಗಳು', 'ಚೀನಾದ ಚಿಟ್ಟೆ ಕಥೆಗಳು', ' ಹೇಳುವ ಸಮಯ' 'ಆಡಿ ಕಲಿಯೋಣ ಕನ್ನಡ – ಭಾಷಾ ಆಟಗಳು', 'ಕಂಪ್ಯೂಟರ್–ನೀಳ್ಗತೆ', 'ಅಮ್ಮನ ಹಾಲು ಅಮೃತ', 'ಹಾಡಿನ ಬಂಡಿ', 'ಕಷ್ಟಪಟ್ಟರೆ ಮಾತ್ರ ಫಲ', 'ಬತ್ತಿದ ಬಾವಿ ತುಂಬಿತು' ಮುಂತಾದವು ಇವರ ಪ್ರಮುಖ ಕೃತಿಗಳು.

©KTBS Not to be republished

## ಅಭ್ಯಾಸ

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಗಳನ್ನು ಬರೆಯಿರಿ.**

೧. ರಾಹುಲೋವಿಚ್ ಯಾರು?

______________________________

೨. ರಾಹುಲೋವಿಚ್‌ನನ್ನು ಜನ ಏಕೆ ಬಹಳ ಇಷ್ಟಪಡುತ್ತಿದ್ದರು?

______________________________

೩. ಕರಡಿಯು ರಾಹುಲೋವಿಚ್‌ನಲ್ಲಿ ಏನೆಂದು ಗೋಗರೆಯಿತು.?

______________________________

## ಭಾಷಾಭ್ಯಾಸ

**ಅ. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿರಿ.**

ಒಂದಾನೊಂದು ಊರಿನಲ್ಲಿ ------------- ಮಾರುವವ ಇದ್ದ. ಅವನ ಹೆಸರು ರಾಹುಲೋವಿಚ್ ಅಂತ. ತುಂಬ ----------. ಕಷ್ಟಜೀವಿ ಆತ. ನಿತ್ಯವೂ ಪಕ್ಕದ ಕಾಡಿಗೆ ಹೋಗಿ, ಒಣಗಿದ ಮರವನ್ನು ಹುಡುಕಿ, ಕಟ್ಟಿಗೆ ಕಡಿದು ತಂದು ಊರಿನಲ್ಲಿ ಮಾರಿ ಬರುವ ದುಡ್ಡಿನಿಂದ ತನ್ನ -------------- ಬೇಕಾದ ಹಿಟ್ಟು, ತರಕಾರಿ, ಬ್ರೆಡ್ಡುಗಳನ್ನು ತೆಗೆದುಕೊಂಡು ಹೋಗುತ್ತಿದ್ದನು. ಊರಿನ ಜನರಿಗೆ ಕಷ್ಟದಲ್ಲಿ -------------- ಮಾಡುತ್ತಿದ್ದನು. ಜನ ಇವನನ್ನು ಬಹಳ ಇಷ್ಟ ಪಡ್ತಾ ಇದ್ರು.

ಒಂದು ದಿನ ರಾಹುಲೋವಿಚ್ ಕಾಡಿನಲ್ಲಿ ಕಟ್ಟಿಗೆ ಕಡಿಯುತ್ತಿದ್ದಾಗ ಸುಸ್ತಾಯ್ತು. ಒಣ–ಗಿದ ಮರವೊಂದನ್ನು -------------ಕಡಿದಿದ್ದನು. ಅದರ ಹತ್ತಿರವೇ ತನ್ನ ಚೂಪಾದ ಕೊಡಲಿಯನ್ನು ಬಿಟ್ಟು ಅಲ್ಲಿಯೇ ಕುಳಿತು -----------ತೆಗೆದುಕೊಳ್ಳುತ್ತಿದ್ದನು. ಅದೇ ಸಮಯಕ್ಕೆ ಆ ಕಾಡಿನಲ್ಲಿದ್ದ ದೊಡ್ಡ ------------- ಅತ್ತ ಬರುತ್ತಿತ್ತು. ದೇಹಕ್ಕೆ ತಕ್ಕಂತೆ ಗತ್ತು, ದೌಲತ್ತು ಅದಕ್ಕೆ. ಒಳ್ಳೇ ------------- ಎದೆ ಉಬ್ಬಿಸಿಕೊಂಡು ಬಂದು ರಾಹುಲೋವಿಚ್‌ನನ್ನು ಕುರಿತು 'ಏಯ್! ಯಾರೋ ಅದು! ------------ ಬಂದ್ರೆ ಸರಿ, ಇಲ್ಲಾಂದ್ರೆ ಕತ್ತು ಹಿಸುಕಿ ಸಾಯಿಸಿಬಿಡ್ತೇನೆ ನೋಡು' ಅಂತ ------------ ಅರಚಿತು.

©KTBS Not to be republished

# ೫. ಅಬ್ದುಲ್ ಕಲಾಂ ಬಾಲ್ಯದ ನೆನಪು

– ಮೂಲ: ಡಾ.ಎ.ಪಿ.ಜೆ. ಅಬ್ದುಲ್ ಕಲಾಂ
ಅನು: ಜಿ.ಕೆ. ಮಧ್ಯಸ್ಥ

**ಪ್ರವೇಶ:** ಭಾರತದ ರಾಷ್ಟ್ರಪತಿಗಳಾಗಿದ್ದ 'ಭಾರತರತ್ನ' ಡಾ. ಅಬ್ದುಲ್ ಕಲಾಂ ಅವರು ತಮ್ಮ ಬಾಲ್ಯ ಜೀವನವನ್ನು ಬೇರೆ ಧರ್ಮಗಳ ಬಗ್ಗೆ ಸಹಿಷ್ಣುತೆ ಇರುವ ಹಿರಿಯರೊಂದಿಗೆ ಕಳೆದರು. ಅವರ ಬಾಳಿನಲ್ಲಿ ಘಟಿಸಿದ ಅಪರೂಪದ ಧಾರ್ಮಿಕ ಸೌಹಾರ್ದತೆಯ ಕಥಾನಕವನ್ನು ಅವರ ಆತ್ಮಕತೆಯ ಅನುವಾದದ ಈ ಲೇಖನದಲ್ಲಿ ಕಾಣಬಹುದು.

©KTBS
Not to be republished

ಆಗ ನನ್ನ ವಯಸ್ಸು ಎಂಟು ವರ್ಷ.


ಮೂರನೇ ತರಗತಿಯಲ್ಲಿದ್ದೆ. ನನಗೆ ಮೂವರು ಆಪ್ತಮಿತ್ರರಿದ್ದರು. ಅವರೇ ರಾಮನಾಥ ಶಾಸ್ತ್ರಿ, ಅರವಿಂದನ್ ಹಾಗೂ ಶಿವಪ್ರಕಾಶನ್. ಮೂವರೂ ಬ್ರಾಹ್ಮಣ ಬಾಲಕರಾಗಿದ್ದರು. ಎಲ್ಲಾ ಒಳ್ಳೆಯ ಮಿತ್ರರಂತೆ ನಾವೂ ತರಗತಿಯ ಒಳಗೂ ಹೊರಗೂ ಒಟ್ಟಿಗೇ ಇರುತ್ತಿದ್ದೆವು. ತರಗತಿಯಲ್ಲಿ ಅಕ್ಕಪಕ್ಕ ಕುಳಿತುಕೊಳ್ಳುತ್ತಿದ್ದೆವು.

ಅಂದು ಯಾವುದೇ ಶಾಲೆಗಳಲ್ಲಿ ಸಮವಸ್ತ್ರ ಪದ್ಧತಿ ಇರಲಿಲ್ಲ. ನಮ್ಮ ಸಂಪ್ರದಾಯದಂತೆ ನಮ್ಮ ಇಷ್ಟದ ಬಟ್ಟೆ ತೊಟ್ಟು ಶಾಲೆಗೆ ಹೋಗಬಹುದಾಗಿತ್ತು. ಗೆಳೆಯ ರಾಮನಾಥ ತನ್ನ ತಂದೆಯಂತೆಯೇ ತಲೆಯಲ್ಲಿ ಜುಟ್ಟು ಹೊಂದಿದ್ದನು. ನಾನು ಇತರೆಲ್ಲ ಮುಸ್ಲಿಂ ಬಾಲಕರಂತೆ ಕಸೂತಿ ಟೋಪಿ ಧರಿಸುತ್ತಿದ್ದೆ. ಇದನ್ನು ಕುರಿತು ಯಾರಾದರೂ ಗೇಲಿ ಮಾಡಿದ್ದು ಅಲ್ಲಿ ಹಿಂದೆಂದೂ ನಡೆದಿರಲಿಲ್ಲ.

ನಮಗೊಬ್ಬರು ಹೊಸ ಉಪಾಧ್ಯಾಯರು ಬಂದರು. ಹೊಸ ಮೇಸ್ಟ್ರು ಹೇಗಿದ್ದಾರೆ ಎಂದು ನೋಡುವ ಕುತೂಹಲ ನಮಗೆ ಬಹಳ. ಅವರು ಮೊದಲ ಬಾರಿಗೆ ನಮ್ಮ ತರಗತಿಗೆ ಬಂದಾಗ ನಮ್ಮ ಕಣ್ಣು-ಕಿವಿಗಳೆಲ್ಲ ಚುರುಕಾಗಿ ಕೆಲಸ ಮಾಡುತ್ತಿದ್ದವು. ತರಗತಿಯೊಳಗೆ ಬಂದವರೇ ಎಲ್ಲಾ ಮಕ್ಕಳ ಮೇಲೆ ಒಮ್ಮೆ ಕಣ್ಣಾಡಿಸಿದರು. ನಮ್ಮೆಲ್ಲರ ಉಡುಪು, ವೇಷಗಳನ್ನು ಅವರು ಅಳೆಯುತ್ತಿರುವಂತೆ ಅನಿಸಿತು. ಅಲ್ಲಿನ ಮಕ್ಕಳ ಹೊಳೆಯುವ ಕಣ್ಣುಗಳು ಹಾಗೂ ತವಕಿಸುವ ಮಂದಹಾಸ ಅವರ ಗಮನಕ್ಕೆ ಬಾರದೇ ಹೋದುದು ನನಗೆ ಇಂದು ವಿಶೇಷವೆಂದು ಕಾಣಿಸುತ್ತದೆ – ಯಾಕೆಂದರೆ ನಾನು ಇಂತಹ ಮಕ್ಕಳು ತುಂಬಿದ ತರಗತಿಗೆ ಹೋದಾಗ ನನ್ನ ಕಣ್ಣಿಗೆ ಮೊದಲು ಬೀಳುವುದು ಆ ಮಕ್ಕಳ ಹೊಳೆಯುವ ಕಣ್ಣುಗಳು ಹಾಗೂ ತವಕಿಸುವ ಮುಗುಳ್ನಗು. ನಮ್ಮ ಹೊಸ ಉಪಾಧ್ಯಾಯರ ದೃಷ್ಟಿ ಮುಂದಿನ ಬೆಂಚಿನಲ್ಲಿ ಕುಳಿತಿದ್ದ ನಮ್ಮ ಮೇಲೆ ಬಿತ್ತು. ನಮ್ಮ ಗೆಳೆಯರ ಗುಂಪು ಕಲಿಕೆಯಲ್ಲಿ ಮುಂದು. ಹೊಸ ಉಪಾಧ್ಯಾಯರ ಕಣ್ಣು ನನ್ನ ಟೋಪಿಯ ಮೇಲೂ ರಾಮನಾಥನ ಜುಟ್ಟಿನ ಮೇಲೂ ನೆಲೆಸಿತು. ಅವರ ಮುಖದಲ್ಲಿ ಕೋಪವೂ ಆಶ್ಚರ್ಯವೂ

ಕಾಣಿಸಿಕೊಂಡಿತು. 'ನಿನ್ನ ಹೆಸರೇನು?' ಎಂದು ನನ್ನೊಡನೆ ಕೇಳಿದರು. ಅಬ್ದುಲ್ ಕಲಾಂ ಎಂದು ಹೇಳಿದೆ. ಕೂಡಲೇ ನಾನು ನನ್ನ ಎಲ್ಲಾ ವಸ್ತುಗಳನ್ನು ತೆಗೆದುಕೊಂಡು ಕೊನೇ ಬೆಂಚಿಗೆ ಹೋಗುವಂತೆ ಆಜ್ಞೆ ಮಾಡಿದರು. ಅದಕ್ಕೆ ಕಾರಣವೇನು ಎಂದೂ ಅವರು ಹೇಳಲಿಲ್ಲ.

ನನಗೆ ಬೇಸರವಾಯಿತು, ಅಪಮಾನವೂ ಆಯಿತು. ರಾಮನಾಥನ ಕಣ್ಣುಗಳಲ್ಲಿ ನೀರು ತುಂಬಿತು. ಈ ವಿಷಯವನ್ನು ಅಲ್ಲಿಗೇ ಬಿಡಲು ನನ್ನ ಹಾಗೂ ರಾಮನಾಥನ ಮನಸ್ಸು ಕೇಳಲಿಲ್ಲ. ತಂದೆಯವರೊಡನೆ ಹೇಳಿದೆವು. ಅವರಿಬ್ಬರಿಗೂ ಆಘಾತವೂ ದುಃಖವೂ ಆಯಿತು. ಈ ಪ್ರಸಂಗ ಅವರಿಬ್ಬರ ತತ್ವ, ನಂಬಿಕೆ ಹಾಗೂ ಜೀವನ ವಿಧಾನಕ್ಕೆ ತದ್ವಿರುದ್ಧವಾದುದಾಗಿತ್ತು. ಜ್ಞಾನವನ್ನು ನೀಡಿ ನಮ್ಮ ಮನಸ್ಸುಗಳನ್ನು ತೆರೆಯಬೇಕಾದಂತಹ ಉಪಾಧ್ಯಾಯರು ಅದಕ್ಕೆ ವಿರುದ್ಧವಾದುದನ್ನು ಮಾಡಿದ್ದರು.



ಮುಂದಿನ ಶುಕ್ರವಾರ ಸಾಯಂಕಾಲ ಅವರಿಬ್ಬರೂ ಭೇಟಿಯಾದರು. ಫಾದರ್ ಬೋದಲ್ ಅವರೂ ಹಾಜರಿದ್ದರು. ಆ ಉಪಾಧ್ಯಾಯರನ್ನೂ ಬರಹೇಳಿದ್ದರು. "ಭಾರತದ ಬೇರೆ ಸ್ಥಳಗಳಲ್ಲಿ ಹಾವಳಿ ಎಬ್ಬಿಸುತ್ತಿರುವ ಕೋಮು ಭಾವನೆಯೆಂಬ ವಿಷವನ್ನು ರಾಮೇಶ್ವರದಲ್ಲಿ ಹರಡಲು ಬಿಡುವುದಿಲ್ಲ" ಎಂದು ಆ ಮೂವರೂ ಆ ಉಪಾಧ್ಯಾಯರಿಗೆ ಸೌಜನ್ಯಪೂರಿತವಾಗಿಯೇ ಹೇಳಿದರು. ನಮ್ಮ ಉಪಾಧ್ಯಾಯರು ಆಲೋಚನೆ ಮಾಡುತ್ತ ಮೌನವಾಗಿ ನಿಂತಿದ್ದರು. ಮಾಡಿರುವ ತಪ್ಪನ್ನು ಮರುದಿನವೇ ಸರಿಪಡಿಸುವುದಾಗಿ ಭರವಸೆ ಕೊಟ್ಟರು. ನಂತರ ಹಾಗೆ ಮಾಡಿದರು ಕೂಡಾ. ಮೂವರು ಧಾರ್ಮಿಕ ನಾಯಕರು ಸೇರಿ ಒಂದು ವಿಷಯವನ್ನು ದೃಢವಾಗಿ ಹಾಗೂ ಮುಕ್ತ ವಾತಾವರಣದಲ್ಲಿ ಬಗೆಹರಿಸಿದ ರೀತಿ ಇದಾಗಿತ್ತು. ಮುಂದೆ ಯಾವುದೇ ಉತ್ತಮ ಆಡಳಿತದಲ್ಲಿ ಅನುಸರಿಸಬೇಕಾದ ವಿಧಾನ ಯಾವುದೆಂದು ನಾನು ಕಲಿತುಕೊಂಡೆ.

©KTBS Not to be republished



**ಕೃತಿಕಾರರ ಪರಿಚಯ:** ಹಿರಿಯ ಪತ್ರಕರ್ತರಾದ ಜಿ.ಕೆ. ಮಧ್ಯಸ್ಥ ಅವರ ಹುಟ್ಟೂರು ಕಾಸರಗೋಡು ತಾಲೂಕಿನ ಕುಂಜಾರು. ಇವರು ೧೬-೦೮-೧೯೪೫ರಲ್ಲಿ ಜನಿಸಿದರು. ಆರ್ಥಿಕ ವಿಷಯಗಳನ್ನು ಕುರಿತು 'ದುಡ್ಡುಕಾಸು' ಮತ್ತು ಶಬ್ದಗಳ ಹುಟ್ಟು ಮತ್ತು ಅವು ಪಡೆಯುವ ರೂಪಗಳ ಬಗೆಗಿನ 'ಪದೋನ್ನತಿ' ಎಂಬ ಅಂಕಣ ಬರಹಗಳನ್ನು ಬರೆದಿದ್ದಾರೆ. ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರ 'ಟರ್ನಿಂಗ್ ಪಾಯಿಂಟ್', 'ಅದಮ್ಯ ಚೇತನ, (ಇಂಡಾಮಿಟೆಬಲ್ ಸ್ಪಿರಿಟ್), 'ನನ್ನ ಪಯಣ' (ಮೈ ಜರ್ನಿ), 'ಕಲಾಂ ಕನಸು – ಸಂಪನ್ನ ಭಾರತ–ಸಮೃದ್ಧ ಭಾರತ' (ಗವರ್ನೆನ್ಸ್ ಫಾರ್ ಗ್ರೋಥ್ ಇನ್ ಇಂಡಿಯಾ), 'ನಿಮ್ಮ ಭವಿಷ್ಯಕ್ಕೊಂದು ರೂಪ ಕೊಡಿ' (ಫೋರ್ಜ್ ಯುವರ್ ಫ್ಯೂಚರ್) ಮುಂತಾದ ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಅವರು ಕಲಾಂ ಬಗ್ಗೆ ಬರೆದ ಜೀವನ ಚರಿತ್ರೆ 'ಕಲಾಂ ನಿಮಗಿದೋ ಸಲಾಂ'. ಪ್ರಸ್ತುತ 'ಅಬ್ದುಲ್ ಕಲಾಂ ಬಾಲ್ಯದ ನೆನಪು' ಗದ್ಯಭಾಗವನ್ನು 'ನನ್ನ ಪಯಣ' (ಮೈ ಜರ್ನಿ) ಅನುವಾದ ಕೃತಿಯಿಂದ ಆರಿಸಲಾಗಿದೆ.

## ಅಭ್ಯಾಸ

©KTBS Not to be republished

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. ಅಬ್ದುಲ್ ಕಲಾಂ ಅವರ ಬಾಲ್ಯದ ಆಪ್ತ ಮಿತ್ರರು ಯಾರು ಯಾರು?

______________________________

೨. ಹೊಸ ಉಪಾಧ್ಯಾಯರ ಕಣ್ಣು ಯಾವುದರ ಮೇಲೆ ಬಿತ್ತು?

______________________________

೩. ಬಾಲಕ ಅಬ್ದುಲ್ ಕಲಾಂ ಅವರಿಗೆ ಏಕೆ ಬೇಸರವಾಯಿತು?

______________________________

೪. ಹಿರಿಯರು ಹೊಸ ಉಪಾಧ್ಯಾಯರಿಗೆ ಸೌಜನ್ಯಪೂರಿತವಾಗಿ ಹೇಳಿದ ಮಾತುಗಳಾವುವು?

______________________________

# ೬. ಹುಲ್ಲಿನ ಎಸಳು

– ಸಿ. ಉಪೇಂದ್ರ ಸೋಮಯಾಜಿ

**ಪ್ರವೇಶ:** ಬಿಕ್ಕಟ್ಟಿನ ಸನ್ನಿವೇಶಗಳಲ್ಲಿ ದಿಟ್ಟವಾಗಿ ವಿವೇಚನೆ ಮಾಡಿ ಸ್ವಂತಿಕೆಯಿಂದ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು. ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ವಿವೇಕದಿಂದ ವರ್ತಿಸಬೇಕು. ಅಪಾಯ ಬಂದಾಗ ನಮ್ಮ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಉಪಾಯ ಮಾಡಬೇಕು. ನಮ್ಮ ಸಾಮರ್ಥ್ಯವನ್ನು ಅರ್ಥಮಾಡಿಕೊಳ್ಳದೆ ಅಂಧಾನುಕರಣೆಯಿಂದ ಬೇರೆಯವರನ್ನು ಹಿಂಬಾಲಿಸಿದರೆ ದುರ್ಬಲರಾಗುತ್ತೇವೆ ಎಂಬ ನೀತಿಯನ್ನು ಹೇಳುವ ಒಂದು ಪುಟ್ಟ ಕತೆಯಿದು.

ಅಂದು ಆ ನದಿಗೆ ಪ್ರವಾಹ ಬಂದಿತ್ತು. ದಡದಲ್ಲಿ ಪ್ರವಾಹಕ್ಕೆ ವಿರುದ್ಧವಾಗಿದ್ದ ಗಿಡ, ಬಳ್ಳಿಗಳು ಬೇರು ಸಹಿತ ಕಿತ್ತು ನೀರಿನ ಸೆಳವಿನಲ್ಲಿ ಸಾಗುತ್ತಿದ್ದವು. ಆದರೆ ಬೇರು ಭದ್ರವಾಗಿದ್ದ ಹುಲ್ಲಿನ ಎಸಳು ಮಾತ್ರ ನೀರಿನ ಸೆಳೆತಕ್ಕೆ ಅನುಕೂಲವಾಗಿ ತಲೆಬಾಗಿಸಿಕೊಂಡಿರುವುದನ್ನು ಕಂಡು ತೇಲಿ ಹೋಗುತ್ತಿದ್ದ ಗಿಡ ಹೇಳಿತು –

"ಯಾಕೆ ನೀನು ಸೋತು ತಲೆಬಾಗಿಸಿದ್ದೀಯಾ? ನಮ್ಮೊಂದಿಗೆ ಬಾ. ಎಲ್ಲಾದರೂ ಹೋಗಿ ದಡ ಸೇರೋಣ" ಎಂದು.

ಅದಕ್ಕೆ ಹುಲ್ಲು ಹೇಳಿತು –

"ಹತ್ತರೊಂದಿಗೆ ಹನ್ನೊಂದನೆಯವನಾಗಿ ಗುರಿ ಇಲ್ಲದೆ ಎಲ್ಲೆಂದರಲ್ಲಿಗೆ ಸ್ವಂತ ಅಸ್ತಿತ್ವ ಮರೆತು ಹೋಗುವುದರಿಂದ ಸಿಗುವುದಾದರೂ ಏನು? ಸ್ವಂತಿಕೆಯೂ ಇಲ್ಲದೆ ಮಾತೂ ಬಂದಾದ ಗುಲಾಮತನಕ್ಕಿಂತಲೂ ನಾನಿಲ್ಲಿ ಹೆಜ್ಜೆ ಊರಿ ದೃಢನಾಗಿದ್ದೇನೆ. ಈ ತಲೆತಗ್ಗಿಸುವಿಕೆ ಶಾಶ್ವತವಲ್ಲ. ಪ್ರವಾಹ ಇಳಿಯುತ್ತಲೇ ಮತ್ತೆ ತಲೆ ಎತ್ತುತ್ತೇನೆ" ಎಂದಿತು.

ಆ ಗಿಡ ಬೇರೆ ತಳ ಕಿತ್ತ ಗಿಡಬಳ್ಳಿಗಳೊಂದಿಗೆ ಎಲ್ಲಿಗೆ ಹೋಯಿತೋ ತಿಳಿದಿಲ್ಲ. ಆದರೆ ಪ್ರವಾಹ ಇಳಿಯುತ್ತಲೇ ಹುಲ್ಲು ತಾನು ಹೇಳಿದಂತೆಯೇ ತಲೆ ಎತ್ತಿ ಬೆಳೆಯಿತು.

©KTBS Not to be republished



**ಕೃತಿಕಾರರ ಪರಿಚಯ**

ಉಡುಪಿ ಜಿಲ್ಲೆ ಸಾಲಿಗ್ರಾಮದ ಚಿತ್ರಪಾಡಿಯವರಾದ ಉಪೇಂದ್ರ ಸೋಮಯಾಜಿ ಅವರು ೧೧.೧೦.೧೯೪೨ರಲ್ಲಿ ಜನಿಸಿದರು. 'ಬದುಕಿನ ತಂತ್ರ ಪಂಚತಂತ್ರ', 'ಇಂಥವರೂ ಇದ್ದಾರೆ' (ಕಥಾ ಸಂಕಲನಗಳು), 'ಚಾಣಕ್ಯ', 'ಮಹಾತಪಸ್ವಿ' (ನಾಟಕಗಳು), 'ಮುದ್ದಣ', 'ಕಾಳಿಂಗರಾವ್' (ಜೀವನ ಚಿತ್ರಣಗಳು) ಇವರ ಪ್ರಮುಖ ಕೃತಿಗಳು.

## ಅಭ್ಯಾಸ

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. ನೀರಿನಲ್ಲಿ ಹರಿಯುತ್ತಿದ್ದ ವಸ್ತುಗಳು ಯಾವುವು?

___

೨. ಹುಲ್ಲಿಗೆ ಗಿಡ ಏನೆಂದು ಹೇಳಿತು?

___

೩. ಹುಲ್ಲು ಯಾವಾಗ ತಲೆ ಎತ್ತಿ ಬೆಳೆಯಿತು?

___

೪. 'ಹುಲ್ಲಿನ ಎಸಳು' ಕಥೆಯಿಂದ ತಿಳಿಯುವ ನೀತಿ ಏನು?

___

೫. ಹುಲ್ಲು ಗಿಡಕ್ಕೆ ಹೇಳಿದ ಮಾತುಗಳಾವುವು?

___

©KTBS Not to be republished

# ೭. ಪುಸ್ತಕ

–ಹೊಯಿಸಳ

**ಪ್ರವೇಶ:** "ನಮ್ಮೊಂದಿಗೆ ಪುಸ್ತಕಗಳಿದ್ದರೆ ನಾವೆಂದಿಗೂ ಒಬ್ಬಂಟಿಗರಾಗಿರುವುದಿಲ್ಲ" ಎನ್ನುತ್ತಾರೆ ಡಾ. ಸರ್ವಪಲ್ಲಿ ರಾಧಾಕೃಷ್ಣನ್. "ಒಂದು ಉತ್ತಮ ಗ್ರಂಥವನ್ನು ನಾಶಪಡಿಸುವುದೆಂದರೆ ಒಬ್ಬ ಸಜ್ಜನ ಮನುಷ್ಯನನ್ನೇ ಕೊಂದಂತೆ" ಎನ್ನುತ್ತಾರೆ ಜಾನ್ ವಿಲ್ಸನ್. ಒಂದೊಂದು ಪುಸ್ತಕವೂ ಒಂದೊಂದು ಪ್ರಬುದ್ಧ ಮೆದುಳಿನ ಫಲ. ಪ್ರತಿಯೊಂದು ಒಳ್ಳೆಯ ಪುಸ್ತಕದ ಹಿಂದೆ ಅಪಾರ ಪರಿಶ್ರಮವಿದೆ. ಇದನ್ನು ನಾಶವಾಗದಂತೆ ಕಾಪಾಡುವುದು ಪ್ರತಿಯೊಬ್ಬರ ಕರ್ತವ್ಯ. ಪ್ರಸ್ತುತ ಪದ್ಯದಲ್ಲಿ ಪುಸ್ತಕದ ಸ್ವಗತವು ಈ ಸಂದೇಶವನ್ನು ಸಾರುತ್ತಿದೆ.

ಪುಸ್ತಕ ಮಾತನು ಹೇಳುತಿದೆ
ಚಿತ್ತವ ಹತ್ತಿಸಿ ಕೇಳು, ಮಗು
ಒಳ್ಳೆಯ ಕಡೆಯಲಿ ಇಡು ನನ್ನ
ಬೀರೂ ಪೆಟ್ಟಿಗೆ ಬಲು ಚೆನ್ನ

ಬೀಳದೆ ಧೂಳು ಇಹಪರಿ ಮೇಲೆ
ಬೇರೊಂದಟ್ಟೆಯ ಹೊಂದಿಸು, ಮಗು
ಜನಗಳ ಕಾಲಡಿ ಹಾಕದಿರು
ಕಿವಿಗಳ ನಿತ್ಯ ಮಡಿಸದಿರು

ಹಾಳೆಯ ಮಡಿಸಿ ಬೋರಲು ಇರಿಸಿ
ಕಷ್ಟಕೆ ಸಿಕ್ಕಿಸಬೇಡ, ಮಗು
ನನ್ನಯ ತಿರುಳು ಕಾಡಿನದು
ನನ್ನಯ ಅರಿವು ನಾಡಿನದು

ಬೆಂಕಿಲಿ ಬೆಂದು ನೀರಲಿ ನೆಂದು
ಯಂತ್ರವ ಹೊಕ್ಕು ಬಂದೆ, ಮಗು
ಏನೊಂದಾದರು ಕೇಳು, ಮಗು
ಯಾವಾಗೆಂದರೆ ಹೇಳುವೆನು
ಬೇಸರವಿಲ್ಲದೆ ಸೇವಿಪೆನಲ್ಲವೆ
ನನ್ನೇಕಿನ್ನೂ ನೋಯಿಸುವೆ?



©KTBS Not to be republished

ತೂಕಡಿಸುತ್ತಾ ಮುಟ್ಟದಿರು
ಅರೆಗಣ್ಣಾಗಿರೆ ತೆರೆಯದಿರು
ಕಡ್ಡಿಯ ಸಿಕ್ಕಿ ತಲೆಯಡಿ ಅಡಕಿ
ಗೊರಕೆಯ ಹೊಡೆಯದೆ ಇರು ಮಗುವೆ

ಮೇಜಿನ ಮೇಲೆ ಚೌಕವಿದೆ
ಮೊಗಮೇಲಾಗಿಡು, ಹೂವು ಇಡು
ಕೈಗಳ ತೊಳೆದು ಚೌಕದಿ ತೊಡೆದು
ಆಮೇಲೆನ್ನನು ಓದು ಮಗು

**ಕೃತಿಕಾರರ ಪರಿಚಯ**



'ಹೊಯಿಸಳ' ಎಂಬ ಕಾವ್ಯನಾಮದಿಂದ ಮಕ್ಕಳ ಸಾಹಿತಿ ಎಂದೇ ಪ್ರಖ್ಯಾತರಾಗಿರುವ ಅರಗಲಕ್ಷ್ಮಣರಾಯರು, ಕನ್ನಡ ಸಾಹಿತ್ಯದಲ್ಲಿ ಮಕ್ಕಳ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಇವರು ಮೇ ೭, ೧೮೯೩ರಂದು ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರದಲ್ಲಿ ಜನಿಸಿದರು. 'ಮಗುವಿನ ಕೂಗು', 'ಕೋಲು ಕುದುರೆ', 'ಬಂದ ಬಂದ ಸಂತಮ್ಮಣ್ಣ' ಇವರ ಮಕ್ಕಳ ಕವನ ಸಂಗ್ರಹಗಳಲ್ಲಿ ಪ್ರಾಮುಖ್ಯವಾದುವು. 'ಹೂವಿನ ಹಾಸಿಗೆ','ರಾಜನ ಬುದ್ಧಿವಂತಿಕೆ' ಮುಂತಾದವು ಇವರ ಮಕ್ಕಳ ಕಥೆಗಳು. 'ಪ್ರಸಾದ', 'ಚಂದ್ರಹಾಸ','ಅಗಲಿದ ಮಗಳು', ಮುಂತಾದವು ಮಕ್ಕಳಿಗಾಗಿ ರಚಿಸಿದ ನಾಟಕಗಳು. 'ಕನಕ' ಮಕ್ಕಳಿಗಾಗಿಯೇ ಪ್ರಾರಂಭಿಸಿದ ಪತ್ರಿಕೆ. ಜಗತ್ತಿನ ಮೊದಲಕತೆ ಈಜಿಪ್ಟಿನ 'ಅನ್ಬು-ಬಾಟ', ಠಾಕೂರರ 'ವಸಂತ', ನೆಹರೂರವರ 'ಮಗಳಿಗೆ ತಂದೆಯ ಓಲೆಗಳು' ಮುಂತಾದವು ಇವರ ಮುಖ್ಯ ಅನುವಾದಗಳು. ಮಕ್ಕಳ ಸಾಹಿತ್ಯಕ್ಕೆ ಒಂದು ಹೊಸ ಆಯಾಮವನ್ನು ತಂದುಕೊಟ್ಟ ಅರಗ ಲಕ್ಷ್ಮಣರಾಯರು ೧೯೫೯ರ ಅಕ್ಟೋಬರ್ ೧೦ರಂದು ನಿಧನ ಹೊಂದಿದರು. 'ಪುಸ್ತಕ' ಕವಿತೆಯನ್ನು ಶ್ರೀಯುತರ 'ಚಂದುಮಾಮ' ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.

©KTBS Not to be republished

## ಅಭ್ಯಾಸ

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಗಳನ್ನು ಬರೆಯಿರಿ.**

೧. ಪುಸ್ತಕವು ತನ್ನನ್ನು ಎಲ್ಲಿ ಇಡಬೇಕೆಂದು ಬಯಸುತ್ತಿದೆ?

______________________________

೨. ಪುಸ್ತಕವು ತನ್ನನ್ನು ಹೇಗೆ ಕಾಪಾಡಿಕೊಳ್ಳಬೇಕೆಂದು ಮಗುವಿಗೆ ಹೇಳುತ್ತಿದೆ?

______________________________

೩. ತನ್ನನ್ನು ನೋಯಿಸದಿರೆಂದು ಪುಸ್ತಕವು ಏಕೆ ಹೇಳುತ್ತಿದೆ?

______________________________

೪. ಪುಸ್ತಕವು ಯಾವ ರೀತಿ ಉಪಕಾರವನ್ನು ಮಾಡುತ್ತಿರುವೆನೆಂದು ಹೇಳುತ್ತಿದೆ?

______________________________

೫. ಪುಸ್ತಕವು ಏನೆಂದು ಮಾತಾಡುತ್ತಿದೆ? ನಿಮ್ಮ ಮಾತುಗಳಲ್ಲಿ ಬರೆಯಿರಿ.

______________________________

©KTBS Not to be republished

**ಆ) ಕೆಳಗೆ ಕೊಟ್ಟಿರುವ ಮೊದಲೆರಡು ಪದಗಳಿಗೆ ಇರುವ ಸಂಬಂಧವನ್ನು 'ಪುಸ್ತಕ' ಪದ್ಯಕ್ಕೆ ಸಂಬಂಧಿಸಿದಂತೆ ಗುರುತಿಸಿ, ಮೂರನೆಯ ಪದಕ್ಕೆ ಸಂಬಂಧ ಕಲ್ಪಿಸಿ ಬರೆಯಿರಿ.**

೧.ಜನಗಳ ಕಾಲಡಿ : ಹಾಕದಿರು : : ಕಿವಿಗಳ ನಿತ್ಯ :----------

೨.ನನ್ನಯ ತಿರುಳು : ಕಾಡಿನದು : : ನನ್ನಯ ಅರಿವು :----------

೩.ಬೆಂಕಿಲಿ : ಬೆಂದು : : ನೀರಲಿ : ------------


೪.ತೂಕಡಿಸುತ್ತಾ : ಮುಟ್ಟದಿರು : : ಅರೆಗಣ್ಣಾಗಿರೆ :------------

# ೮. ನಮ್ಮ ರಾಷ್ಟ್ರಧ್ವಜ

–ಸಂಗ್ರಹ

**ಪ್ರವೇಶ:** ಪ್ರತಿಯೊಂದು ದೇಶವು ತನ್ನ ಆದರ್ಶ ಧೋರಣೆಗಳಿಗೆ ಅನುಗುಣವಾಗಿ ತನ್ನದೇ ಆದ ರಾಷ್ಟ್ರಲಾಂಛನಗಳನ್ನು ಹೊಂದಿರುತ್ತವೆ. ಅವುಗಳಲ್ಲಿ ರಾಷ್ಟ್ರಧ್ವಜವು ಪ್ರಮುಖವಾದುದು. ನಮ್ಮ ದೇಶದ ತ್ರಿವರ್ಣ ಧ್ವಜದ ಕಿರುಪರಿಚಯವನ್ನು ಈ ಪುಟ್ಟ ಲೇಖನವು ಮಾಡಿಕೊಡುತ್ತದೆ.

ನಮ್ಮ ದೇಶದ ರಾಷ್ಟ್ರಧ್ವಜವು ನೋಡಲು ಆಕರ್ಷಕವಾಗಿದೆ. ಕೇಸರಿ, ಬಿಳಿ ಹಾಗೂ ಹಸಿರು ಬಣ್ಣಗಳ ಮೂರು ಪಟ್ಟಿಗಳನ್ನು ಹೊಂದಿದೆ. ಮಧ್ಯದ ಬಿಳಿ ಪಟ್ಟಿಯಲ್ಲಿ ನೀಲಿ ಬಣ್ಣದ ಚಕ್ರ ಇದ್ದು, ಅದಕ್ಕೆ ೨೪ ಅರಗಳು ಇವೆ. ಹಾಗಾಗಿ ಭಾರತದ ರಾಷ್ಟ್ರಧ್ವಜವನ್ನು ತ್ರಿವರ್ಣ ಧ್ವಜವೆಂದು ಕರೆಯುತ್ತಾರೆ. ಮೇಲೆ ಕೇಸರಿ, ಮಧ್ಯದಲ್ಲಿ ಬಿಳಿ ಹಾಗೂ ಕೆಳಗೆ ಹಸಿರು ಬಣ್ಣದ ಪಟ್ಟಿಗಳಿವೆ. ನಮ್ಮ ರಾಷ್ಟ್ರಧ್ವಜ ಆಯತಾಕಾರದಲ್ಲಿದೆ. ಇದರ ಉದ್ದ, ಅಗಲ ೩:೨ ಅನುಪಾತದಲ್ಲಿರುತ್ತದೆ. ನಮ್ಮ ದೇಶದ ರಾಷ್ಟ್ರಧ್ವಜವನ್ನು ಖಾದಿ ಬಟ್ಟೆಯಲ್ಲಿಯೇ ತಯಾರಿಸಲಾಗುತ್ತದೆ.



**ಕೇಸರಿ** ಬಣ್ಣವು ತ್ಯಾಗ, ಶ್ರಮ, ಬಲಿದಾನದ ಸಂಕೇತವಾಗಿದ್ದರೆ, **ಬಿಳಿ** ಬಣ್ಣವು ಶಾಂತಿಯನ್ನು ಪ್ರತಿನಿಧಿಸುತ್ತದೆ. **ಹಸಿರು** ಬಣ್ಣವು ಸಮೃದ್ಧತೆಯನ್ನು ವ್ಯಕ್ತಪಡಿಸಿದರೆ, **ಮಧ್ಯದ ನೀಲಿ ಬಣ್ಣದ ಚಕ್ರವು** ಪ್ರಗತಿಯ ಸಂಕೇತವಾಗಿದೆ. ಅದರಲ್ಲಿನ ೨೪ ಅರಗಳು ದಿನದ ೨೪ ಗಂಟೆಗಳೂ ನಾವು ಕ್ರಿಯಾಶೀಲರಾಗಿರಲು ಸೂಚಿಸುತ್ತದೆ. ಚಕ್ರವನ್ನು ಸಾರನಾಥದಲ್ಲಿರುವ ಅಶೋಕ ಸ್ತಂಭದ ಲಾಂಛನದಿಂದ ತೆಗೆದುಕೊಳ್ಳಲಾಗಿದೆ.

ನಮ್ಮ ದೇಶದ ರಾಷ್ಟ್ರಧ್ವಜದ ಕಲ್ಪನೆ ಸ್ವಾತಂತ್ರ್ಯಕ್ಕಿಂತಲೂ ಬಹಳ ವರ್ಷಗಳ ಹಿಂದಿನಿಂದಲೇ ಪ್ರಾರಂಭವಾಗಿದ್ದು, ಕಾಲ ಕ್ರಮೇಣ ಅನೇಕ ಬದಲಾವಣೆಗಳೊಂದಿಗೆ ಇಂದಿನ ಧ್ವಜ ರೂಪುಗೊಂಡಿದೆ.

©KTBS
Not to be republished

## ಅಭ್ಯಾಸ

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಗಳನ್ನು ಬರೆಯಿರಿ.**

೧. ನಮ್ಮ ರಾಷ್ಟ್ರಧ್ವಜದಲ್ಲಿರುವ ಮೂರು ಬಣ್ಣಗಳು ಯಾವುವು?

_______________________________________________

೨. ಧ್ವಜದ ಮಧ್ಯಭಾಗದಲ್ಲಿರುವ ಚಕ್ರದಲ್ಲಿ ಎಷ್ಟು ಅರಗಳಿವೆ?

_______________________________________________

೩. ನಮ್ಮ ರಾಷ್ಟ್ರಧ್ವಜದಲ್ಲಿರುವ ಚಕ್ರ ಯಾವುದರ ಸಂಕೇತವಾಗಿದೆ?

_______________________________________________

೪. ನಮ್ಮ ರಾಷ್ಟ್ರಧ್ವಜದಲ್ಲಿರುವ ಮೂರು ಬಣ್ಣಗಳು ಏನನ್ನು ಪ್ರತಿನಿಧಿಸುತ್ತವೆ?

_______________________________________________

©KTBS Not to be republished